
ಹೊಯ್ಸಳ ಮಾಲೆ - 11

ಎಲ್. ಗುಂಡಪ್ಪ



ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

ಹೊಯ್ಸಳ ಮಾಲೆ - 11

ಎಲ್. ಗುಂಡಪ್ಪನವರ ಬದುಕು, ಬರೆಹ

ಕಮಲಾ ಎಂ. ಎಸ್. ಬಾಲು

ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

ಮೊದಲ ಮುದ್ರಣ : ಸೆಪ್ಟೆಂಬರ್ 2008

ಬೆಲೆ : ರೂ. 30/-

ಮುದ್ರಣ :
ಜ್ವಾಲಾಮುಖಿ ಜಾಬ್ ಪ್ರೆಸ್
ಉತ್ಕೃಷ್ಟ ಮುದ್ರಣ ರಾಷ್ಟ್ರ ಪ್ರಶಸ್ತಿ ವಿಜೇತರು
44/1, ಕೆ.ಆರ್.ರಸ್ತೆ, ಬಸವನಗುಡಿ, ಬೆಂಗಳೂರು - 560 004
ಫೋನ್ : 080-26608090, 26617243
www.jwalamukhipress.com

ಒಂದು ಮಾತು

ವಿಜಯನಗರ ಸಾಮ್ರಾಜ್ಯದ ರೂವಾರಿ ವಿದ್ಯಾರಣ್ಯ, ಆದಿಶಂಕರರ ಅವತಾರ ಪುರುಷರೆಂದು ಪ್ರಖ್ಯಾತರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರೇಂದ್ರ, ಸರಸ್ವತಿಯವರ ಪರಂಪರೆಯ ॥ಹೊಯ್ಸಳ ಕರ್ನಾಟಕ॥ ಬ್ರಾಹ್ಮಣ ಜನಾಂಗವು ರಾಜಕೀಯ, ಸಾಮಾಜಿಕ ಹಾಗೂ ಸಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದೆ. ಈ ಪಂಗಡದವರು ರಾಜಕೀಯ, ವಾಣಿಜ್ಯ, ಕೈಗಾರಿಕೆ, ವಿಜ್ಞಾನ, ಸಾಹಿತ್ಯ, ಸಂಗೀತ, ಕಲೆ, ವೈದ್ಯಕೀಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದಾರೆ.

ಈ ರೀತಿ ಪ್ರಸಿದ್ಧಿ ಪಡೆದ ಹಿರಿಯ ವ್ಯಕ್ತಿಗಳು ನಮ್ಮ ಯುವಪೀಳಿಗೆಗೆ ಪರಿಚಯಿಸಿ ಅವರಿಗೆ ಚೇತನ ಮತ್ತು ಸ್ಫೂರ್ತಿಯನ್ನು ತುಂಬುವುದೇ ಈ 'ಹೊಯ್ಸಳ ಮಾಲೆ ಯ ಧ್ಯೇಯ'. ಸಂಘದ ಮಾಜಿ ಅಧ್ಯಕ್ಷ ಹಾಗೂ ಹೆಸರಾಂತ ಕೈಗಾರಿಕೋದ್ಯಮಿ ಶ್ರೀ.ಎಂ.ವಿ.ಸತ್ಯನಾರಾಯಣರವರು ಒಂದು ಪುದವಟ್ಟನ್ನು ನಿರ್ಮಿಸಿ ನಮ್ಮ ಸಂಘದ ಮೂಲಕ ಈ ಪುಸ್ತಕ ಮಾಲೆಯನ್ನು ತರಬೇಕೆಂದು ಆಶಿಸಿದರು.

ಹಿರಿಯ ಸಾಹಿತಿಗಳು ಮತ್ತು ಗೌರವಾನ್ವಿತ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಪ್ರಧಾನ ಸಂಪಾದಕರಾಗಿರುವುದು ನಮ್ಮೆಲ್ಲರ ಸುಕೃತ. ಅವರೊಡನೆ ಮಾರ್ಚ್ 1 ಮತ್ತು 2ರಂದು ಮೈಸೂರಿನಲ್ಲಿ ನಡೆಯುವ ಹೊಯ್ಸಳ ಕರ್ನಾಟಕ ಸಂಘಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಈ ಮಾಲೆಯ ಮೊದಲ 9 ಪುಸ್ತಕಗಳು ಬಿಡುಗಡೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘ ಕಳೆದ 64 ವರ್ಷಗಳಿಂದ ನಮ್ಮ ಜನಾಂಗದ ಸೇವೆಯಲ್ಲಿ ತೊಡಗಿದೆ. ನಮ್ಮ ಯುವಕರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಪ್ರತಿಭಾವಂತ ಮತ್ತು ಆರ್ಥಿಕ ದುರ್ಬಲ ವಿದ್ಯಾರ್ಥಿಗಳಿಗೆ ವೇತನ ನೀಡಲಾಗುತ್ತಿದೆ. ವರ್ಷಂಪ್ರತಿ ನಡೆಯುವ ಸಂಘ ದಿನಾಚರಣೆಯಂದು ನಮ್ಮ ಜನಾಂಗದ ಹಿರಿಯ ವ್ಯಕ್ತಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ನಾನಾ ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿಗಳನ್ನು ಗೌರವಿಸಲಾಗುತ್ತದೆ. ಇಂಥ ಎಲ್ಲಾ ಸಂಘಗಳೊಡನೆ ಕೂಡಿ ಸಹಕರಿಸಲು ನಮಗೆ ತುಂಬಾ ಸಂತಸ.

ನಾಡಿನ ಎಲ್ಲಾ ಹೊಯ್ಸಳ ಕರ್ನಾಟಕ ಸಂಘಟನೆಗಳೂ ಆಗಾಗ್ಗೆ ಕಲೆತು ಅನ್ಯೋನ್ಯತೆಯಿಂದ ಕೆಲಸ ಮಾಡಿ ಜನಾಂಗದ ವಿಶೇಷತೆಗಳನ್ನೂ-ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ಎಂದಿಗಿಂತ ಇಂದು ಅತ್ಯವಶ್ಯವಾಗಿದೆ.

ಸುಮಾರು 30 ಲಕ್ಷ ರೂ. ಅಂದಾಜಿನ ಈ ಮಾಲೆಯ ಪ್ರಕಟಣಾ ಕಾರ್ಯವು ಸುಸೂತ್ರವಾಗಿ ನಡೆಯಲು ಸಂಘಕ್ಕೆ ಹೊರೆಯಾಗದಂತೆ ಒಂದು ಆವರ್ತ ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಒಂದು ಪುಸ್ತಕದ ಮುದ್ರಣ-ಪ್ರಕಟಣದ ವೆಚ್ಚ ಸುಮಾರು 15 ರಿಂದ 20 ಸಹಸ್ರ ರೂ.ಗಳಾಗಬಹುದು. (ನಮ್ಮ ಎಲ್ಲಾ ಬ್ರಾಹ್ಮಣ ವಿದ್ಯಾರ್ಥಿನಿಲಯಗಳಿಗೂ ಈ ಪುಸ್ತಕದ ಕೆಲವು ಪ್ರತಿಗಳನ್ನು ಉಚಿತವಾಗಿ ಕಳಿಸಲು ಯೋಜಿಸಲಾಗಿದೆ). ನಮ್ಮ ಎಲ್ಲಾ ಬಾಂಧವರೂ ಈ ಯೋಜನೆಯ ಯಶಸ್ಸಿಗೆ ಕೆಳಕಂಡಂತೆ ಸಹಾಯ ಮಾಡಬಹುದು.

1. ಒಂದು ಅಥವಾ ಹೆಚ್ಚು ಪುಸ್ತಕಕ್ಕೆ ಪ್ರಾಯೋಜಕರಾಗಬಹುದು. ಪ್ರಾಯೋಜಕರ ಹೆಸರನ್ನು ಆಯಾ ಪುಸ್ತಕಗಳಲ್ಲಿ ಪ್ರಕಟಿಸಲಾಗುವುದು.
2. ಒಂದು ಕುಟುಂಬದಿಂದ ಅಥವಾ ಇಬ್ಬರು ಮೂವರೂ ಸೇರಿ ಒಂದು ಅಥವಾ ಹೆಚ್ಚು ಪುಸ್ತಕಗಳ ಪ್ರಾಯೋಜಕರಾಗಬಹುದು.
3. ಪುಸ್ತಕಗಳನ್ನು ಕೊಂಡು ನಿಮ್ಮ ಮನೆಯಲ್ಲಿ ನಡೆಯುವ ಸಮಾರಂಭಗಳಲ್ಲಿ ಬಂಧು ಬಾಂಧವರಿಗೆ ಹಂಚುವುದು.
4. ಈ ಉದ್ದೇಶಕ್ಕಾಗಿ ದೇಣಿಗೆ ನೀಡುವುದು.
5. ಈ ಮಾಲೆಯ ಬಗ್ಗೆ ನಿಮ್ಮ ಬಂಧುಗಳಿಗೆ ತಿಳಿಸಿ ಅವರೂ ಈ ಕಾರ್ಯಗಳಲ್ಲಿ ನೆರವಾಗಲು ಪ್ರೇರೇಪಿಸುವುದು. ಪುಸ್ತಕದ ಮಾರಾಟ ಮತ್ತು ನಿಮ್ಮ ನೆರವು ಪ್ರೋತ್ಸಾಹದಾಯಕವಾದರೆ ಸಂಘ ಪ್ರತಿ ಎರಡು ತಿಂಗಳಿಗೊಮ್ಮೆ 8 ರಿಂದ 12 ಪುಸ್ತಕಗಳನ್ನು ಪ್ರಕಟಿಸಲು ಶಕ್ತವಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈ ಪುಸ್ತಕ ಮಾಲೆಯನ್ನು ಮುದ್ರಿಸಲು ಅತ್ಯಂತ ಅತಿಶ್ರದ್ಧೆಯಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವ ನಮ್ಮವರೇ ಆದ ಜ್ವಾಲಾಮುಖಿ ವಾರಪತ್ರಿಕೆಯ ಸಂಸ್ಥಾಪಕ ದಿ. ಸಿ.ಎಸ್. ಸತ್ಯ ಇವರ ಮಕ್ಕಳಾದ ಶ್ರೀಯುತ. ಶಿವಕುಮಾರ್, ರವಿಪ್ರಸಾದ್ ಮತ್ತು ಶಂಕರ್ ಇವರಿಗೆ ಸಂಘ ಆಭಾರಿಯಾಗಿದೆ.

ನಮ್ಮ ಕೋರಿಕೆಯನ್ನು ಮನ್ನಿಸಿ ವಿಷಯಗಳನ್ನು, ಉಪಯುಕ್ತಮಾಹಿತಿಗಳನ್ನು, ಫೋಟೋಗಳನ್ನ ಸಂಗ್ರಹಿಸಿ ಅಂದವಾಗಿ ಈ ಪುಸ್ತಕವನ್ನು ಸಿದ್ಧಪಡಿಸಿರುವ ನಮ್ಮ ಆತ್ಮೀಯ ಲೇಖಕರಿಗೂ, ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ದಣಿವನ್ನೂ ಲೆಕ್ಕಿಸದೆ ಉತ್ಸಾಹದ ಚಿಲುಮೆಯಾಗಿ ನಮಗೆ ಮಾರ್ಗದರ್ಶನ ಮಾಡುತ್ತಿರುವ ಪ್ರಧಾನ ಸಂಪಾದಕರಾದ ಪ್ರೋ.ಜಿ.ವೆಂಕಟಸುಬ್ಬಯ್ಯ ರವರಿಗೆ ಸಂಪಾದಕರ ಮಂಡಳಿಯ ಎಲ್ಲಾ ಸದಸ್ಯರಿಗೆ ಹಾಗೂ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘದ ಮಾಜಿ ಅಧ್ಯಕ್ಷ ಶ್ರೀ.ಎಂ.ವಿ.ಸತ್ಯನಾರಾಯಣರವರಿಗೆ ನಮ್ಮ ಕೃತಜ್ಞತೆಗಳು.

ಅರೆಕೆರೆ ಗೌರಿಶಂಕರ
ಅಧ್ಯಕ್ಷರು
ಹೊಯ್ಸಳ ಕರ್ನಾಟಕ ಸಂಘ(ರಿ.)
ಬೆಂಗಳೂರು-27

ಮುನ್ನುಡಿ

ಒಮ್ಮೆ ನಾನು ಶ್ರೀ ಎಂ.ವಿ. ಸತ್ಯನಾರಾಯಣ ಅವರೊಡನೆ ಮಾತನಾಡುತ್ತ ಇದ್ದಾಗ ಅವರು ''ನಮ್ಮ ಹೊಯಿಸಳ ಕರ್ನಾಟಕ ಪಂಗಡದ ಹಿಂದಿನ ಹಿರಿಯ ವ್ಯಕ್ತಿಗಳಲ್ಲಿ ಪ್ರಸಿದ್ಧರಾಗಿದ್ದು ಅನೇಕ ಸಾಧನೆಗಳನ್ನು ಮಾಡಿದವರ ಬಗ್ಗೆ ಏನಾದರೂ ಚಾರಿತ್ರಿಕ ವಿವರಗಳಿವೆಯೊ?'' ಎಂದು ಕೇಳಿದರು. ಈ ಬಗ್ಗೆ ನಾನು ಅನೇಕ ದಿನಗಳಿಂದ ಚಿಂತನೆ ಮಾಡುತ್ತಿದ್ದೆ. ಸಾಧ್ಯವಾದರೆ ಶಾಸನಗಳ ಮತ್ತು ಪ್ರಾಚೀನ ಸಾಹಿತ್ಯದ ಆಧಾರಗಳಿಂದ ಒಂದು ಪ್ರಬಂಧವನ್ನು ಬರೆಯಬೇಕೆಂದು ಕೆಲವು ವಿಷಯಗಳನ್ನು ಸಂಗ್ರಹಿಸಿದ್ದೆ.

'ಹೊಯ್ಸಳ' ಎಂಬ ಶಬ್ದವು ದೇಶವಾಚಕವಾದದ್ದು. ಅದು 'ಪೊಯಿಸಣ' ಎಂಬ ಶಬ್ದದ ಈಗಿನ ರೂಪ. ಶಾಸನಗಳಲ್ಲಿ 'ಪೊಯಿಸಣನಾಡು' ಎಂಬ ಉಲ್ಲೇಖವಿದೆ. ಮುದ್ರಾಮಂಜೂಷವನ್ನು ರಚಿಸಿದ ಕೆಂಪುನಾರಾಯಣನು ತಾನು 'ಪೊಯಿಸಣೆಗ' ಕುಲದವನು ಎಂದು ಹೇಳಿಕೊಂಡಿದ್ದಾನೆ. ಅವನ ಕಾಲ 1830. ನಾವೆಲ್ಲ ನಮ್ಮನ್ನು ಕರ್ನಾಟಕರು, ಕನ್ನಡಿಗರು, ಕನ್ನಡ ಕುಲಕ್ಕೆ ಸೇರಿದವರು ಎಂದು ಹೇಳಿಕೊಂಡಿರುವುದಕ್ಕೆ ಆಧಾರವಿದೆ. ಈ ವಿಚಾರವನ್ನು ಹಿಂದೆ ಪ್ರಕಟವಾದ ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವ ಸಂಪುಟದಲ್ಲಿ ಪ್ರಕಟಿಸಲಾಗಿದೆ.

ಅನೇಕ ದಾನ ಶಾಸನಗಳು ಹೊಯಿಸಳ ಕರ್ನಾಟಕರ ಮನೆತನಗಳಲ್ಲಿ ಈಗಲೂ ಕಾಣಬರುತ್ತವೆ. ಈ ಗುಂಪಿನ ಜನರಲ್ಲಿ ಅನೇಕ ವಿದ್ವಾಂಸರು, ಪ್ರಸಿದ್ಧ ವೈದ್ಯರು, ಪರಿಣತರಾದ ಸಂಗೀತಗಾರರೂ, ವಾದ್ಯ ನಿಪುಣರು ಇದ್ದರು. ಈ ಬಗ್ಗೆ ಚಾರಿತ್ರಿಕವಾಗಿ ಯಾವ ದಾಖಲೆಯೂ ಆಗದೆ ಎಲ್ಲ ಕತ್ತಲೆಯಲ್ಲಿ ಮುಳುಗಿಹೋಗಿದೆ. ಸಂಶೋಧನೆ ಮಾಡಿದರೆ ಅನೇಕ ವಿಷಯಗಳು ದೊರೆಯುತ್ತವೆ. ನಾನು ಈ ಬಗ್ಗೆ ಕೆಲವು ವಿವರಗಳನ್ನು ಶ್ರೀ ಸತ್ಯನಾರಾಯಣ ಅವರಿಗೆ ನೀಡಿದೆ. ಅವರು ''ಈಗಲಾದರೂ ನಾವು ನಮಗೆ ದೊರಕುವಷ್ಟು ವಿವರಗಳನ್ನು ಸಂಗ್ರಹಿಸಿ ವಿವಿಧ ವಿದ್ವಾಂಸರ, ಸಂಗೀತಗಾರರ, ವೈದ್ಯರ, ಪುರಾಣಿಕರ, ಪ್ರವಚನಕಾರರ ಬಗ್ಗೆ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸೋಣ. ಮುಂದೆ ಸಂಶೋಧನೆಗಳಿಂದ ಹೆಚ್ಚು ವಿವರಗಳು ದೊರಕಿದರೆ ಅದನ್ನು ಪ್ರಕಟ ಮಾಡೋಣ. ಇಂಥ ಕೆಲಸಕ್ಕೆ ನಾನು ಒಂದು ಲಕ್ಷ ರೂಪಾಯಿಗಳ ಒಂದು ದತ್ತಿಯನ್ನು ನೀಡುತ್ತೇನೆ. 'ಹೊಯ್ಸಳಮಾಲೆ' ಎಂಬ ಹೆಸರಿನಲ್ಲಿ ಈ ಪುಸ್ತಕಗಳು ಪ್ರಕಟವಾಗಲಿ. ನೀವು ಈ ಮಾಲೆಯ ಪ್ರಧಾನ ಸಂಪಾದಕರಾಗಿ ಕಾರ್ಯವನ್ನು ನಡೆಸಿಕೊಡಬೇಕು'' ಎಂದು ನಿರ್ಧಾರವಾಗಿ ಹೇಳಿಬಿಟ್ಟರು. ಈ ಕೆಲಸಕ್ಕಾಗಿ ಕೂಡಲೇ ಒಂದು ಸಂಪಾದಕ ಮಂಡಲಿಯನ್ನು ರಚಿಸಿಬಿಟ್ಟರು. ಆ ಮಂಡಲಿಯ ಸ್ವರೂಪ ಹೀಗಿತ್ತು:

1. ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರಧಾನ ಸಂಪಾದಕರು
2. ಶ್ರೀ ಗರುಡನಗಿರಿ ನಾಗರಾಜ, ಸದಸ್ಯರು

3. ಶ್ರೀ ಬಿ.ಜಿ. ಶ್ರೀರಂಗಯ್ಯ, ಸದಸ್ಯರು
4. ಶ್ರೀ ಬಿ.ಎನ್. ಅನಂತನಾರಾಯಣ, ಸದಸ್ಯರು
5. ಶ್ರೀಮತಿ ಶಾರದಾ ಶಾಮಣ್ಣ, ಸದಸ್ಯರು
6. ಶ್ರೀ ಎ.ವಿ. ಸತ್ಯನಾರಾಯಣ, ಸಂಚಾಲಕರು

ಈ ಸಭೆಯು ಸೇರಿ ಒಂದು ಕಾರ್ಯಕ್ರಮವನ್ನು ನಿರ್ಧಾರ ಮಾಡಿದೆ.

ಮೊದಲಿಗೆ ಕಿಂಚಿತ್‌ಪೂರ್ವದಲ್ಲಿ ಬದುಕಿದ್ದ ಹಿರಿಯರಲ್ಲಿ ಹತ್ತು ಜನರನ್ನು ಗುರುತಿಸಿ ಅವರ ಬಗ್ಗೆ ತಿಳಿವಳಿಕೆಯುಳ್ಳವರಿಂದ 1/8 ಡೆಮ್ಮಿ 64 ಪುಟಗಳ ಪುಸ್ತಕಗಳನ್ನು ಬರೆಯಿಸಬೇಕು. ಹೀಗೆ ಈ ಮಾಲೆಗೆ ಪುಸ್ತಕಗಳನ್ನು ರಚಿಸುವವರು ತಮ್ಮ ಬರವಣಿಗೆಯಲ್ಲಿ ಸತ್ಯಕ್ಕೆ ಅಪಚಾರವಾಗದ ಹಾಗೆ, ಯಾವ ವಿರೋಧವನ್ನು ಸೃಷ್ಟಿಸಿದ ಹಾಗೆ, ಯಾವ ಅನುಮಾನಗಳಿಗೂ ಅವಮಾನಗಳಿಗೂ ಅವಕಾಶವಾಗದ ಹಾಗೆ, ಅತಿಉತ್ಪ್ರೇಕ್ಷೆಯಾಗಲಿ, ಅತಿ ಸಂಕೋಚ ಪ್ರವೃತ್ತಿಯಾಗಲಿ ಇರದಂತೆ ಬರೆಯಬೇಕು. ಅತ್ಯುಕ್ತಿಯು ಓದುಗರಿಗೆ ಬೇಸರವನ್ನುಂಟುಮಾಡುತ್ತದೆ. ಅತಿ ಸಂಕೋಚ ವ್ಯಕ್ತಿಗೆ ಅಪಚಾರವಾಗುತ್ತದೆ. ಆದುದರಿಂದ ಬರವಣಿಗೆಯು ಸುವರ್ಣ ಮಧ್ಯಮದಲ್ಲಿ ಪ್ರಸನ್ನತೆಯನ್ನು ಗಾಂಭೀರ್ಯವನ್ನು ಉಂಟುಮಾಡುವಂತೆ ನೋಡಿಕೊಳ್ಳಬೇಕೆಂದು ಬರಹಗಾರರಿಗೆ ತಿಳಿಸಬೇಕು. ವ್ಯಕ್ತಿಗಳ ಸಾಧನೆಯನ್ನು ಹಿರಿಮೆಯನ್ನು ಎತ್ತಿ ತೋರಿಸಬೇಕು ಎಂದು ತೀರ್ಮಾನಿಸಲಾಯಿತು.

ಇಷ್ಟೆಲ್ಲ ಪೂರ್ವಸಿದ್ಧತೆಯಿಂದ ಈಗ ಪ್ರಕಟವಾಗಿರುವ ಪುಸ್ತಕಗಳು ರಚಿತವಾಗಿವೆ. ಇವು ಹೊಯ್ಸಳ ಕರ್ನಾಟಕ ಯುವಕ ಯುವತಿಯರ ಭವಿಷ್ಯಕ್ಕೆ ಮಾರ್ಗದರ್ಶಕವಾಗಬೇಕು. ಇತರ ಉದಯೋನ್ಮುಖರಿಗೂ ಆಸಕ್ತಿಯನ್ನು ಕೆರಳಿಸುವಂತಿರಬೇಕು. ಈ ಪುಸ್ತಕಗಳನ್ನು ಓದುವವರು ಇವುಗಳ ಪ್ರಕಟಣೆಯಲ್ಲಿ ಏನಾದರೂ ವಿಶೇಷ ವಿಷಯಗಳು ಇರಬೇಕೆಂದು ಬಯಸಿದರೆ ಆ ವಿವರಗಳನ್ನು ನಮಗೆ ತಿಳಿಸಿದರೆ ಅಂಥ ಎಲ್ಲ ಸಲಹೆಗಳಿಗೂ ಸ್ವಾಗತವಿದೆ ಎಂದು ಹೇಳಬಯಸುತ್ತೇವೆ.

'ಹೊಯ್ಸಳ ಮಾಲೆ'ಗೆ ಪುಸ್ತಕಗಳನ್ನು ರಚಿಸಿದವರಿಗೆಲ್ಲ ನಮ್ಮ ವಂದನೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಣಕ್ಕೆ ಸಿದ್ಧಮಾಡುತ್ತಿದ್ದಾಗ ನನ್ನ ಪುಸ್ತಕ ಭಂಡಾರದಲ್ಲಿ ಎಲ್ಲೋ ಮುಚ್ಚಿಟ್ಟುಕೊಂಡಿರುವ ವಿವರಗಳನ್ನು ಹುಡುಕಿ ಸಮಯಕ್ಕೆ ಸರಿಯಾಗಿ ನನಗೆ ಸಹಾಯ ಮಾಡಿದ ನನ್ನ ಕಿರಿಯ ಮಗ ಚಿ|| ಜಿ.ವಿ. ಅರುಣನಿಗೆ ಶುಭವನ್ನು ಕೋರುತ್ತೇನೆ.

ಹೊಯಿಸಳ ಕರ್ನಾಟಕ ಬಂಧುಗಳು ಈ ಮಾಲೆಗೆ ಎಲ್ಲ ಬೆಂಬಲವನ್ನು ನೀಡಿ, ಈ ಮಾಲೆ ನೂರನ್ನು ದಾಟಲಿ ಎಂದು ಹರಸಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಹೊಯ್ಸಳ ಮಾಲೆಯ ಎರಡನೆಯ ಕಂತಿನ ಹತ್ತು ಪುಸ್ತಕಗಳನ್ನು ಈಗ ಪ್ರಕಟಿಸುತ್ತಿದ್ದೇವೆ. ಇವುಗಳಲ್ಲಿ ಚಿತ್ರಿತರಾಗಿರುವ ನಮ್ಮ ಪಂಗಡದ ಎಲ್ಲರೂ ಹಿರಿಯರೇ ಮತ್ತು ಪ್ರಸಿದ್ಧರೇ. ಹಿಂದಿನವರ ಬಗ್ಗೆ ವಿಷಯಗಳನ್ನು ಹುಡುಕಿ ಶೇಖರಿಸುವುದು

ಸುಲಭದ ಕೆಲಸವಲ್ಲ. ಈ ಕಾರ್ಯವನ್ನು ಮಾಡಲು ಈ ಪುಸ್ತಕಗಳ ಲೇಖಕರು ತುಂಬಾ ಶ್ರಮಪಟ್ಟಿದ್ದಾರೆ. ಆ ಎಲ್ಲ ಶ್ರಮವೂ ಸತ್ಫಲವನ್ನು ನೀಡಿದೆ. ಹೀಗೆ ವಿಶೇಷ ಆಸಕ್ತಿಯನ್ನು ವಹಿಸಿ ಈ ಪುಸ್ತಕಗಳನ್ನು ರಚಿಸಿರುವ ಎಲ್ಲ ಲೇಖಕ-ಲೇಖಕಿಯರಿಗೂ ನಾವು ಕೃತಜ್ಞರಾಗಿದ್ದೇವೆ.


ಈ ಪುಸ್ತಕಗಳನ್ನು ಓದುವ ನಮ್ಮ ಪಂಗಡದ ಎಲ್ಲರೂ ತಮ್ಮ ತಮ್ಮ ಪೂರ್ವಿಕರಲ್ಲಿ ಹೀಗೆ ಬಾಳಿ ಸತ್ಕಾರ್ಯಗಳನ್ನು ಮಾಡಿರುವವರು ನೆನಪಿಗೆ ಬಂದರೆ ಅವರ ಬಗ್ಗೆಯೂ ಆಧಾರಸಹಿತ ವಿವರಗಳನ್ನು ನಮಗೆ ಕಳಿಸಿಕೊಡಬೇಕಾಗಿ ವಿನಂತಿ. ಅಂಥ ಎಲ್ಲ ಹಿರಿಯರನ್ನೂ ನಾವು ನಮ್ಮವರಿಗೆಲ್ಲ ಪರಿಚಯ ಮಾಡಿಕೊಡೋಣ.

ಸಂಸ್ಕೃತ, ತಮಿಳು-ಕನ್ನಡಗಳ ಪ್ರಸಿದ್ಧ ವಿದ್ವಾಂಸರಾಗಿದ್ದ ಎಲ್.ಗುಂಡಪ್ಪನವರು (1903-1986) ಕನ್ನಡದ ನವೋದಯದ ಸಂದರ್ಭದಲ್ಲಿ ವಿಶಿಷ್ಟವಾದ ತಿಳಿವಳಿಕೆಯನ್ನು ಪಡೆದಿದ್ದ ಚತುರ್ಭಾಷಾ ವಿದ್ವಾಂಸರು. ನಾಲ್ಕನೆಯ ಭಾಷೆ ಇಂಗ್ಲಿಷ್. ಬಿ.ಎಂ. ಶ್ರೀಯವರ ಬೋಧನದಿಂದ ಪ್ರಭಾವಿತರಾಗಿದ್ದ ಗುಂಡಪ್ಪನವರು ಅವರ ಸೂಚನೆಯಂತೆ ಪಂಪನ ಆದಿಪುರಾಣವನ್ನು ಸಂಗ್ರಹಿಸಿ ಅದಕ್ಕೆ ಅತ್ಯುಚಿತವಾದ ವಿದ್ವತ್ಪೂರ್ಣ ಮುನ್ನುಡಿಯನ್ನು ರಚಿಸಿ ಹೆಸರುಮಾಡಿದರು. ಕಥಾ ಸರಿತಾಗರದ ಉದಯನ ಕಥೆಯನ್ನು ಭಾಸನ ಎಲ್ಲ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ತಮಿಳಿನ 'ತಿರುಕುರಳ್' ಗ್ರಂಥವನ್ನು ಅದೇ ಛಂದಸ್ಸಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದರು. ಟಾಲ್‌ಸ್ಟಾಯ್ ಎಂಬ ರಷ್ಯದ ಪ್ರಸಿದ್ಧ ಕಾದಂಬರಿಕಾರನ ಅನೇಕ ಸಣ್ಣ ಕಥೆಗಳನ್ನು ಕನ್ನಡಕ್ಕೆ ತಂದರು. ಇವೆಲ್ಲವೂ ಕನ್ನಡದಲ್ಲಿ ಮೊದಲಿಗೆ ಬಂದ ಅನುವಾದಗಳು. ಇತರರಿಗೆ ಮಾರ್ಗದರ್ಶನಗಳು. ಗುಂಡಪ್ಪನವರು ಸಂಸ್ಕೃತದಲ್ಲಿ ಕವಿತ್ವ ಶಕ್ತಿ ಯನ್ನು ಪಡೆದಿದ್ದರು. ಶೃಂಗೇರಿ ಮಠದ ಮಹಾಸ್ವಾಮಿಗಳಿಗೆ ಒಂದು ಅಂಥ ಕವನ ಮಾಲಿಕೆಯನ್ನು ಸಮರ್ಪಿಸಿದರು. ಪ್ರಚಾರವನ್ನು ಬಯಸದ, ಕಾರ್ಯದಲ್ಲಿ ಮಾತ್ರ ನಿರತರಾದ ಒಂಟಿ ವಿದ್ವಾಂಸರು. ಅವರ ಜೀವಿತಾವಧಿಯಲ್ಲಿ ಎಲ್ಲ ಪ್ರಶಸ್ತಿಗೂ ಅರ್ಹರಾಗದ್ದೂ ಯಾವುದನ್ನೂ ಪಡೆಯದೆ ಹೋದ ಮಹಾವಿದ್ವಾಂಸರು ಅವರು.

ಇಂಥವರ ಬಗ್ಗೆ ಈ ಪುಸ್ತಕವನ್ನು ರಚಿಸಿರುವವರು ಅವರ ಮೂರನೆಯ ಮಗಳು ಶ್ರೀಮತಿ ಎಲ್.ಜಿ. ಕಮಲ. ಇವರು ಮೂವತ್ತು ವರ್ಷಗಳ ಕಾಲ ಆಕಾಶವಾಣಿಯಲ್ಲಿ ದುಡಿದ ನಿರ್ದೇಶಕಿ. ಇವರು ಮೂವರು ಮಕ್ಕಳು ವಿದ್ಯಾರ್ಥಿನಿಯರಾಗಿದ್ದಾಗ ಕನ್ನಡದ ಜಾನಪದಗೀತೆಗಳನ್ನು ಹಾಡಿ ಪ್ರಸಿದ್ಧಿ ಪಡೆದವರು. ಪುತಿನ ಅವರ ಅಹಲ್ಯೆಗೆ ಜನಪ್ರಿಯತೆಯನ್ನು ತಂದ ಕೀರ್ತಿ ಇವರ ಹಾಡುಗಾರಿಕೆಗೆ ಸಂದಿದೆ. ಶ್ರೀಮತಿ ಕಮಲ ಅವರಿಗೆ ನಾವೆಲ್ಲ ಕೃತಜ್ಞರು.

ಜಿ. ವೆಂಕಟಸುಬ್ಬಯ್ಯ
ಸಂಪಾದಕ ಮಂಡಲಿಯ ಪರವಾಗಿ

ನಂ. 58, 31ನೇ ಕ್ರಾಸ್, 7ನೇ ಬ್ಲಾಕ್, ಜಯನಗರ
ಬೆಂಗಳೂರು-560 070.
1-9-2008



ಎಲ್. ಗುಂಡಪ್ಪನವರು



ಎಲ್. ಗುಂಡಪ್ಪ ಮತ್ತು ಅವರ ಪತ್ನಿ ಶಾರದಮ್ಮ

ಎಲ್. ಗುಂಡಪ್ಪನವರ ಬದುಕು

ನವೋದಯ ಕಾವ್ಯ ರಚನೆಯ ಪ್ರವರ್ತಕರಾದ ಬಿ.ಎಂ. ಶ್ರೀಕಂಠಯ್ಯನವರ ಪ್ರಭಾವಕ್ಕೆ ಒಳಗಾಗಿ ಸಾಹಿತ್ಯ ಸೇವೆಯನ್ನು ಸರಸ್ವತೀದೇವಿಯ ಕೈಂಕರ್ಯವೆಂದು ಭಾವಿಸಿ ಕೈಗೊಂಡವರು, ಪ್ರಸಿದ್ಧರಾದವರು ಹಲವರು. ಇಂತಹ ಶಿಷ್ಯ ವರ್ಗಕ್ಕೆ ಸೇರಿದವರಲ್ಲಿ ಮೊದಲ ಪಂಕ್ತಿಯಲ್ಲಿ ಎದ್ದು ಕಾಣುವವರಲ್ಲಿ ಎಲ್. ಗುಂಡಪ್ಪನವರೂ ಒಬ್ಬರು. ಗುರುಗಳ ಮಾರ್ಗದರ್ಶನದಲ್ಲಿ ಆರಂಭಿಸಿ, ನಂತರ ತಮ್ಮದೇ ಪಥವನ್ನು ಸಾಹಿತ್ಯಾಕಾಶದಲ್ಲಿ ಮೂಡಿಸಿದ ಅಗ್ರಗಣ್ಯ ವಿದ್ವಾಂಸರು ಎಲ್. ಗುಂಡಪ್ಪ. ಭಾಷಾಂತರ ಪ್ರಪಂಚದಲ್ಲಿ ಬಹುದೊಡ್ಡ ಸ್ಥಾನವನ್ನು ನಿರ್ಮಿಸಿಕೊಂಡ ಮೇಧಾವಿ.

ಎಲ್. ಗುಂಡಪ್ಪನವರು ಹಾಸನ ಜಿಲ್ಲೆಯ ಹಳೇಬೀಡಿಗೆ ಒಳದಾರಿಯಲ್ಲಿ ಐದಾರು ಮೈಲಿ ದೂರವಿರುವ ಮತಿಘಟ್ಟ ಎಂಬ ಸಣ್ಣ ಹಳ್ಳಿಗೆ ಸೇರಿದವರು. ಅವರು 1903ನೇ ಇಸವಿಯಲ್ಲಿ ಹುಟ್ಟಿದಾಗ ಅದು ಒಂದು ಕುಗ್ರಾಮ. ಈಗ ಬಸ್ ಸೌಕರ್ಯವೂ ಇದೆ. ಹತ್ತಿರಕ್ಕೆ ಒಂದು ಹೆಲಿಪ್ಯಾಡ್ ಕೂಡ ಬಂದಿದೆ.

ಗುಂಡಪ್ಪನವರು ಹುಟ್ಟಿದ್ದು ಅವರ ತಾಯಿಯ ತವರೂರಾದ ಕಳಸಾಪುರದಲ್ಲಿ. ತಂದೆ ಲಿಂಗಣ್ಣಯ್ಯ ಕೃಷಿಕರು. ತಾಯಿ ಚೆನ್ನಮ್ಮ . ಹುಟ್ಟಿದ ದಿನಾಂಕ 1903ನೇ ಇಸವಿಯ ಜನವರಿ ಎಂಟನೇ ತಾರೀಖು. ಕಳಸಾಪುರದ ಜನತೆ, ತಮ್ಮ ಊರಿನ ಈ ಪ್ರಸಿದ್ಧ ವಿದ್ವಾಂಸರನ್ನು ಅವರ 70ರ ದಶಕದಲ್ಲಿ ಬಹಳ ಪ್ರೀತಿಯಿಂದ ಗೌರವಿಸಿ ಸಂತೋಷ ಪಟ್ಟರು.

ಗುಂಡಪ್ಪನವರ ಪೂರ್ವಿಕರು ಮತಿಘಟ್ಟಗ್ರಾಮಕ್ಕೆ ಬಂದು ನೆಲೆಸಿದಾಗ, ಇಂತಹ ಒಂದು ಹಳ್ಳಿ ಇಲ್ಲಿರಬಹುದು ಎನ್ನುವುದೂ ಕೂಡ ಹೊರಗಿನವರಿಗೆ ಗೊತ್ತಾಗದ ಹಾಗೆ ತನಿಯಾಗಿದ್ದ ಸ್ಥಳವಾಗಿತ್ತು. ಈ ಪೂರ್ವಿಕರು ಮತಿಘಟ್ಟಕ್ಕೆ ಬಂದು ನೆಲೆಸಿದ್ದು ಕೂಡ ಒಂದು ರೋಚಕ ಕಥೆ. ಟಿಪ್ಪು ಸುಲ್ತಾನನ ಕಾಲ. ಚನ್ನರಾಯಪಟ್ಟಣದಲ್ಲಿ ಏಳುಗಡಿ ಸುಬೇದಾರು ಎಂದು ಪ್ರಸಿದ್ಧರಾಗಿದ್ದ ಸ್ಥಿತಿವಂತ ಕುಟುಂಬ - ಅಣ್ಣತಮ್ಮಂದಿರು ಒಟ್ಟಾಗಿ ಬಾಳುತ್ತಿದ್ದರು. ವೇದ ವಿದ್ವತ್ತಿಗೆ ಎಷ್ಟು ಹೆಸರಾಗಿದ್ದರೋ , ಅಷ್ಟೇ ಪ್ರಬಲರಾದ ಸುಂಕದ ಕಟ್ಟೆ ಅಧಿಕಾರಿಗಳೆಂದೂ ಕೂಡ ಹೆಸರುವಾಸಿಯಾಗಿದ್ದರು. ಸುಲ್ತಾನನ ಅಧಿಕಾರಿಯ ವಕ್ರದೃಷ್ಟಿ ತಮ್ಮ ಮೇಲೆ ಬಿತ್ತೆಂದು ಗೊತ್ತಾದಾಗ, ಪೂರ್ವಯೋಜನೆಯಂತೆ, ರಾತ್ರೋರಾತ್ರಿ ಊರು ಬಿಟ್ಟು ತಮ್ಮ ತಮ್ಮ

ಸಂಸಾರಗಳೊಂದಿಗೆ ಅಡಗಿಕೊಳ್ಳಲು ಬೇರೆ ಬೇರೆ ತಾಣಗಳನ್ನು ಅರಸಿಕೊಂಡು ಹೊರಟರು ಈ ಸಹೋದರರು. ಅವರಲ್ಲಿ ಒಬ್ಬರು ಮತಿಘಟ್ಟ ಸೇರಿಕೊಂಡರು. ಆಗ ಮತಿಘಟ್ಟ ಕುರುಚಲು ಕಾಡಿನಿಂದ ಸುತ್ತುವರಿಯಲ್ಪಟ್ಟ ಪ್ರದೇಶವಾಗಿತ್ತು. ಜನವಸತಿ ಎಷ್ಟು ದೂರವಿತ್ತೆಂದರೆ, ಆ ಕಾಲಕ್ಕೆ ವಿವಾಹ ಸಂಬಂಧ ಬೆಳೆಸಲು ಕೂಡ ಸುತ್ತಮುತ್ತಲ ಗ್ರಾಮದವರು ಹೆದರುತ್ತಿದ್ದರು. ಅಷ್ಟು ದುರ್ಗಮ ವಾಗಿದ್ದರಿಂದ ಸುಲ್ತಾನನ ಸೇವಕರಿಗೆ ಇವರ ಇರುವು ಗೊತ್ತಾಗಲಿಲ್ಲ. ಅಲ್ಲಿಯೇ ನೆಲೆಸಿದ ಗುಂಡಪ್ಪನವರ ಪೂರ್ವಿಕರು ಹಳ್ಳಿಯನ್ನು ಒಂದು ರೀತಿಯಲ್ಲಿ ಬೆಳೆಸಿದರೆಂದೇ ಹೇಳಬೇಕು. ಎತ್ತರವಾದ ಏರಿ, ವಿಶಾಲವದ ಕೆರೆ. ಸುತ್ತ, ತೆಂಗು, ಹಲಸು, ಮಾವು ಬಾಳೆ ಸಮೃದ್ಧವಾಗಿ ಬೆಳೆಯುವ ತೋಟ. ಎಲ್ಲವನ್ನೂ ರೂಢಿಸಿಕೊಂಡು ಬಂದ ಈ ಕುಟುಂಬ ಸ್ಥಿತಿವಂತರಾಗಿಯೇ ಇತ್ತು. ಆದರೆ ಗುಂಡಪ್ಪನವರು ಹುಟ್ಟುವ ವೇಳೆಗೆ ಇಡೀ ಕುಟುಂಬದ ಹೊಣೆ ಗುಂಡಪ್ಪನವರ ತಂದೆಯ ಮೇಲೆ ಬಿದ್ದಿತ್ತು. ದವಸ ಧಾನ್ಯಕ್ಕೆ ಕೊರತೆ ಇಲ್ಲದಿದ್ದರೂ, ಶಾಲೆಯ ಓದಿಗೆ ಅನುಕೂಲವಾದ ನಗದು ಹಣದ ಕೊರತೆ ಉಂಟಾಗಿತ್ತು.

ತಮ್ಮದು ಅನುಭಾವಿಗಳ ಕುಟುಂಬ ಎಂದು ಗುಂಡಪ್ಪನವರ ಮುತ್ತಜ್ಜಿ ಹೇಳುತ್ತಿದ್ದರಂತೆ. ತಮ್ಮ ಬಾಲ್ಯದಿಂದಲೂ ಮನೆಗೆ ಸಾಧು ಸಂತರು ಬಂದು ಹೋಗುತ್ತಿದ್ದುದು ಗುಂಡಪ್ಪನವರಿಗೆ ವೇದ್ಯವಾಗಿತ್ತು. ತಂದೆ ಲಿಂಗಣ್ಣಯ್ಯನವರು ನಾಲ್ವರು ಅಣ್ಣತಮ್ಮಂದಿರಲ್ಲಿ ಎಲ್ಲರಿಗಿಂತ ಚಿಕ್ಕವರು. ಆದರೆ ಅವರೇ ಸಂಸಾರದ ಭಾರ ಹೊತ್ತವರು. ಒಬ್ಬ ಅಣ್ಣ ದುಬ್ಬಯ್ಯ ಎಂಬುವರು ಬೇಲೂರಿನಲ್ಲಿ ಶಾಲಾ ಶಿಕ್ಷಕರಾಗಿದ್ದರಂತೆ. ಇನ್ನಿಬ್ಬರು ಗೃಹ ಕಲಹ ತಂದುಕೊಂಡು ದೇಶಾಂತರ ಹೋದರಂತೆ. ಗುಂಡಪ್ಪನವರ ತಾಯಿ ಕಳಸಾಪುರದವರು. ಬೆಳ್ಳಗೆ ಕುಳ್ಳಗೆ ಬೊಂಬೆಯ ಹಾಗೆ ಇದ್ದ ಚೆಲುವೆ. ತಂದೆ ಲಿಂಗಣ್ಣಯ್ಯ 6 ಅಡಿ ಎತ್ತರದ ಅಜಾನುಬಾಹು. ಶರೀರಕ್ಕೆ ತಕ್ಕ ಶಾರೀರ. ಅದಕ್ಕೆ ಪೋಷಕವಾದ ದುಡಿಮೆ. ತೋಟದ ಕೆಲಸ ಮುಗಿಸಿ ಮನೆಗೆ ವಾಪಸಾದ ಮೇಲೆ ಭಗವದ್ಗೀತೆಯನ್ನೋ, ಮಹಾಭಾರತವನ್ನೋ ಓದಿ ಊಟಕ್ಕೆ ಕೂರುವ ಪದ್ಧತಿ. ಅಭಿಮನ್ಯು ಅವರಿಗೆ ಬಹಳ ಪ್ರಿಯವಾದ ಪಾತ್ರ. ದುಡಿಮೆಯೇ ದೇವರು ಎಂಬುದನ್ನು ಅಕ್ಷರಶಃ ನಂಬಿದ ವ್ಯಕ್ತಿ. ಊರಿನ ಜನಕ್ಕೆ ಅನುಕೂಲವಾಗಲೆಂದು ತಾವೇ ಸ್ವತಃ ಸಿಹಿ ನೀರಿನ ನೆಲಬಾವಿಯನ್ನು ಅಗೆದು, ಮೆಟ್ಟಿಲು ಕಟ್ಟಿಸಿದ್ದರು. ತಮ್ಮ 75ನೇ ವಯಸ್ಸಿನಲ್ಲಿ ಎತ್ತು ತಿವಿದ

ಪರಿಣಾಮವಾಗಿ ಮೊಣಕಾಲು ಚಿಪ್ಪಿಗೆ ಪೆಟ್ಟು ತಗುಲಿ ಕೋಲೂರಿ ನಡೆಯುತ್ತಿದ್ದರು. ಯಾವ ವಿಷಯದಲ್ಲೂ ಯಾರ ವಿಷಯದಲ್ಲೂಅತೃಪ್ತಿ ಪಡದೆ ಬದುಕಿದ ಹಿರಿಯ ಜೀವ ತಮ್ಮ 95ನೇ ವಯಸ್ಸಿನಲ್ಲಿ ಕೂತಂತೆಯೇ ಹಾಗೇ ದೇಹತ್ಯಾಗ ಮಾಡಿದ ಪುಣ್ಯಜೀವಿ.

ಗುಂಡಪ್ಪನವರ ತಾಯಿ ಚೆನ್ನಮ್ಮ ಭಿಕ್ಷುಕರಿಗೋ ಮೊರದಲ್ಲೇ ಅಕ್ಕಿ ನೀಡುತ್ತಿದ್ದ ಕೊಡುಗೈ ದಾನಿ. ತುಂಬಾ ಚೆನ್ನಾಗಿ ಹಾಡುತ್ತಿದ್ದರು. ಮಾತಿಗಿಂತ ಹಾಡೇ ಹೆಚ್ಚುಎನ್ನಬಹುದು. ಹಿರಿಯ ಮಗ ಪಟ್ಟಣದಲ್ಲಿದ್ದರೂ ಕೂಡ, ಹಳ್ಳಿಯನ್ನು ಬಿಟ್ಟು ಬರಲು ಆಕೆ ಒಪ್ಪುತ್ತಿರಲಿಲ್ಲ. ಪುರಾಣ ಪುಣ್ಯಕಥೆಗಳಲ್ಲಿ ವಿಪರೀತ ಆಸಕ್ತಿ. ವಿದ್ಯಾವಂತರನ್ನು ಕಂಡರೆ ತುಂಬಾ ಗೌರವ. ಕಾಲೇಜಿಗೆ ಹೋಗುವ ತಮ್ಮ ಹೆಣ್ಣು ಮೊಮ್ಮಕ್ಕಳು ಓದಿನಲ್ಲಿ ನಿರತರಾಗಿದ್ದರೆ, ಸಾಕ್ಷಾತ್ ಸರಸ್ವತಿಯೇ ಎದುರಿಗಿದ್ದಾಳೋ ಎಂದು ಭಾವಿಸಿ ಸಂತೋಷ ಪಡುವರು. ಅವರು 85 ವರ್ಷಕ್ಕೂ ಹೆಚ್ಚು ಕಾಲ ಬದುಕಿದ್ದರು.


ಎಲ್. ಗುಂಡಪ್ಪನವರು ಹೊಯ್ಸಳ ಕರ್ನಾಟಕರು. ವಿಶ್ವಾಮಿತ್ರ ಗೋತ್ರ . ಅವರಿಗೆ ಇಬ್ಬರು ತಮ್ಮಂದಿರು ಒಬ್ಬಳೇ ತಂಗಿ. ತಂಗಿಯನ್ನು ಮಾಕೋನಹಳ್ಳಿಯ ಜಮೀನ್ದಾರರಿಗೆ ಕೊಟ್ಟಿದ್ದರು. ಆಕೆ ತಮ್ಮ ನಾಲ್ಕು ಮಕ್ಕಳನ್ನು ಅಗಲಿ ಬಹಳ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡರು. ಗುಂಡಪ್ಪನವರ ದೊಡ್ಡ ತಮ್ಮ ರಾಮಸ್ವಾಮಿ - ಅವರನ್ನು ಮುತ್ತು ಎಂದು ಕರೆಯುತ್ತಿದ್ದರು. ಅವರು ತಮ್ಮ ದೊಡ್ಡಪ್ಪ ದುಬ್ಬಯ್ಯನವರಿಗೆ ದತ್ತುವಾಗಿದ್ದರು. ಎರಡನೆಯ ತಮ್ಮ ಮತಿಘಟ್ಟ ಕೃಷ್ಣಮೂರ್ತಿ. ಇವರನ್ನು ಮರಿ ಎಂದು ಕರೆಯುತ್ತಿದ್ದರು.

ಮೊದ ಮೊದಲು ಹುಟ್ಟಿದ ಮಕ್ಕಳು ಉಳಿಯದೇ ಹೋದ್ದರಿಂದ ಈ ಮಗುವಾದರೂ ಗುಂಡು ಕಲ್ಲಿನ ಹಾಗೆ ಬದುಕಲಿ ಎಂದು ಲಿಂಗಣ್ಣಯ್ಯ - ಚೆನ್ನಮ್ಮ ದಂಪತಿಗಳು ಗುಂಡಪ್ಪ ಎಂದು ಹೆಸರಿಟ್ಟರು. ಮನೆಯಲ್ಲಿ , ಹಳ್ಳಿಯಲ್ಲಿ ಎಲ್ಲರೂ ಅವರನ್ನು 'ಕಾಡು' ಎಂದೇ ಕರೆಯುತ್ತಿದ್ದರು. ಎಲ್. ಗುಂಡಪ್ಪನವರು ನಿಧನರಾದಾಗ, ಮತಿಘಟ್ಟದ ಹಿರಿಯ ಗ್ರಾಮಸ್ಥರಿಗೆ ರೇಡಿಯೋ ಪ್ರಸಾರದಲ್ಲಿ ಅವರು ತಮ್ಮವರೇ ಎಂದು ಗೊತ್ತಾಗಲೇ ಇಲ್ಲವಂತೆ. ಸಂಜೆ ದೂರದರ್ಶನದಲ್ಲಿ ಅವರ ಭಾವಚಿತ್ರ ನೋಡಿದಾಗ 'ಅಯ್ಯೋ ನಮ್ಮ ಕಾಡಪ್ಪ ಹೋಗಿ ಬಿಟ್ಟರೇ' ಎಂದು ಮರುಗಿದರಂತೆ.

ಗುಂಡಪ್ಪನವರ ಪ್ರೈಮರಿ ವಿದ್ಯಾಭ್ಯಾಸ ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಮತ್ತು ಕಳಸಾಪುರಗಳಲ್ಲಿ 1912ರಿಂದ 1914ರವರೆಗೆ. ಬೇಲೂರಿನಲ್ಲಿ ಅವರ ದೊಡ್ಡಪ್ಪ ದುಬ್ಬಯ್ಯನವರ ಜೊತೆ ಇದ್ದುಕೊಂಡು ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸ. ಆಗಿನ ಎ.ವಿ. ಸ್ಕೂಲ್ Anglo- Vernacular School ನಲ್ಲಿ 1915-1919 ಮೊದಲು ಕನ್ನಡ ಲೋಯರ್ ಸೆಕೆಂಡರಿ ; ಆಮೇಲೆ ಇಂಗ್ಲಿಷ್ ಲೋಯರ್ ಸೆಕೆಂಡರಿ. ಅದೇ ಸಮಯದಲ್ಲಿ ಅಲ್ಲಿನ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತಾಭ್ಯಾಸ ಮತ್ತು ವೇದಾಧ್ಯಯನ ಮಾಡಿದರು. ಆಮೇಲೆ ಎರಡು ವರ್ಷ ಕಾಲ ಓದಿಗೆ ಅಡ್ಡಿ ಉಂಟಾಗಿ ಕಾಲ ಕಳೆಯಬೇಕಾಯಿತು. ದೊಡ್ಡಪ್ಪ ದುಬ್ಬಯ್ಯನವರದು ದರ್ಪದ ವ್ಯಕ್ತಿತ್ವ. ಪ್ರೀತಿಯನ್ನು ಸುಲಭವಾಗಿ ವ್ಯಕ್ತಪಡಿಸುತ್ತಿರಲಿಲ್ಲ. ಅವರ ಮಗಳನ್ನು ಕಂಡರೆ ಬಾಲಕ ಗುಂಡಪ್ಪನಿಗೆ ತುಂಬಾ ಅಕ್ಕರೆ. ಆಕೆಗೂ ಅಷ್ಟೆ ಈ ಬುದ್ಧಿವಂತ ತಮ್ಮನನ್ನು ಕಂಡರೆ ವಿಪರೀತ ವಾತ್ಸಲ್ಯ. ಆದರೆ, ಆಕೆಯೂ ಬಹಳ ಚಿಕ್ಕವಯಸ್ಸಿನಲ್ಲೆ ಹೆರಿಗೆಯಲ್ಲಿ ತೀರಿಕೊಂಡರು. ಈ ತಮ್ಮನಿಗೆ ಅವಳ ಕಡೆಯ ದರ್ಶನವೂ ಸಿಗಲಿಲ್ಲ. ಆಗಲೇ ಅವನು 'ಅಕ್ಕ' ಎನ್ನುವ ಪದ್ಯ ಬರೆದು ತನ್ನ ಅಳಲನ್ನು ತೋಡಿಕೊಂಡ.

ಅಕ್ಕ ನೀನೆಲ್ಲಿರುವೆ ? ಮತ್ತೆಂದು ಬರುವೆ ?
ನಿನ್ನ ನಡೆನುಡಿಗಳನು, ನಿನ್ನ ಮುಖಭಾವವನು,
ನಿನ್ನ ಮೃದುಹಾಸವನು, ಹೃದಯದಾ ಪ್ರೇಮವನು,
ಇನ್ನು ಮರೆಯುವೆನೆಂತು ? ಪಡೆವೆನೆಂತು ?
ಅಕ್ಕ ನಿನ್ನನು ನಾನು ಮರೆವೆನೆಂತು ?


ಇವರಿಗೆ ಎಲ್. ಗುಂಡಪ್ಪ ಎಂದು ಹೆಸರು ಬಂದದ್ದು ಒಂದು ವಿನೋದ ಪೂರ್ಣ ಘಟನೆ. ಇವರ ಕ್ಲಾಸಿನಲ್ಲಿ ಮೂವರು 'ಗುಂಡಪ್ಪ' ವಿದ್ಯಾರ್ಥಿಗಳಿದ್ದರು. ಆದ್ದರಿಂದ ಅವರನ್ನು ಪ್ರತ್ಯೇಕವಾಗಿ ಗುರ್ತಿಸಲು ಉಪಾಧ್ಯಾಯರು ಮಾಡಿದ ಉಪಾಯವೆಂದರೆ, ಒಬ್ಬ ಗುಂಡಪ್ಪನಿಗೆ ಅವನ ಊರಿನ ಹೆಸರು ಇನಿಷಿಯಲ್ ಆಯಿತು. ಮತ್ತೊಬ್ಬನಿಗೆ ಅವನ ಗೋತ್ರದ ಹೆಸರು ಇನಿಷಿಯಲ್. ಹೀಗೆ ಲಿಂಗಣ್ಣಯ್ಯನವರ ಮಗ ಗುಂಡಪ್ಪ, ತಂದೆಯ ಹೆಸರನ್ನು ಇನಿಷಿಯಲ್ ಆಗಿ ಪಡೆದು ಎಲ್. ಗುಂಡಪ್ಪ ಆದರು.




ರಾಜ್ಯಪಾಲ ಸುಬಾದಿಯಾ ಅವರಿಂದ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು




ಭಾರತ ಕಥಾಮಂಜರಿಯ ಬಿಡುಗಡೆ. ರಾಜರತ್ನ, ವಿ.ಸೀ., ಜಿ.ವಿ. ಅವರುಗಳು ಇದ್ದಾರೆ



ಭಾರತ ಕಥಾಮಂಜರಿಯ ಬಿಡುಗಡೆಯ ಸಮಾರಂಭ



ಎಲ್. ಗುಂಡಪ್ಪನವರ ಜನ್ಮ ಶತಮಾನೋತ್ಸವ. ತಮಿಳ್ ಸೆಲ್ವಿ,
ಪ್ರಧಾನೆ ಗುರುದತ್ತ, ಜೀ.ವಿ. ಮತ್ತು ಮಲ್ಲೇಶ್ವರಂ ವೆಂಕಟೇಶ್





ಅಮೇರಿಕಾದಲ್ಲಿ ನಮ್ಮ ರಾಷ್ಟ್ರಾಧ್ಯಕ್ಷ ನಾರಾಯಣ್ ಅವರೊಡನೆ

ಬೇಲೂರು ಲೋಕ ಪ್ರಸಿದ್ಧ ಚೆನ್ನಕೇಶವ ದೇವಸ್ಥಾನದ ಊರು. ಕ್ಲಾಸಿನ ಪಾಠಗಳ ಜೊತೆಗೆ ದೇವಸ್ಥಾನದ ಭಿತ್ತಿಗಳು ವಿದ್ಯಾರ್ಥಿ ಗುಂಡಪ್ಪನಿಗೆ, ಪುರಾಣ ಪುಣ್ಯಕತೆಗಳ ದರ್ಶನ ಮಾಡಿಸಿದವು. ಅಷ್ಟು ಹೊತ್ತಿಗಾಗಲೇ ಆತನ ಬರೆಯುವ ಸಾಮರ್ಥ್ಯ ಗೋಚರವಾಗಿತ್ತು. ಕ್ಲಾಸಿನಲ್ಲಿ ಒಮ್ಮೆ ಪಾಠ ಕೇಳಿದರೆ ಸಾಕು - ಮತ್ತೆ ಓದುವ ಅಗತ್ಯವೇ ಇಲ್ಲ ಅನ್ನುವಷ್ಟರ ಮಟ್ಟಿನ ಅಗಾಧ ಜ್ಞಾಪಕಶಕ್ತಿ. ಈ ಜ್ಞಾಪಕಶಕ್ತಿಯೇ ಅವರಿಗೆ ಬಿ.ಎ. ಓದುವಾಗ ಸಹಾಯಕವಾಯಿತು. ಪರೀಕ್ಷೆ ಸಮಯದಲ್ಲಿ ವಿಪರೀತ ಜ್ವರದಿಂದ ಬಳಲುತ್ತಿದ್ದ ಗುಂಡಪ್ಪ ತಮ್ಮ ಸಹಪಾಠಿಯನ್ನು ಪಾಠಗಳನ್ನೆಲ್ಲ ಜೋರಾಗಿ ಓದುವಂತೆ ಕೇಳಿಕೊಂಡರಂತೆ. ಕಾಲೇಜಿನ ಮೆಟ್ಟಿಲು ಹತ್ತಿದರೂ ಸುಸ್ತಾಗುವಷ್ಟು ಜ್ವರದಲ್ಲೂ ಹೋಗಿ ಪರೀಕ್ಷೆಗೆ ಕುಳಿತರು. ಪಾಠ ಜೋರಾಗಿ ಓದಿದ ಸಹಪಾಠಿ ಉತ್ತೀರ್ಣನಾಗಲಿಲ್ಲ. ಗುಂಡಪ್ಪನವರು ಪಾಸ್ ಆದರು.

''1918-19ರಲ್ಲಿ ಲೋಯರ್ ಸೆಕೆಂಡರಿ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಆಗತಾನೇ ಪ್ರಾರಂಭವಾಗಿದ್ದ 'ಬಾಯ್ ಸ್ಕೌಟ್ಸ್' ದಳದಲ್ಲಿ ಸೇರಲು ಮನೆಯ ಹಿರಿಯರಿಂದ ಅನುಮತಿ ಸಿಕ್ಕದೆ ಮನಸ್ಸಿಗೆ ತುಂಬ ವ್ಯಥೆಯಾಯಿತು. ಜೊತೆಗೆ ಹುಡುಗರೆಲ್ಲ ದಳಕ್ಕೆ ಸೇರಿ, ಆಟಗಳಲ್ಲಿಯೂ ಸುತ್ತಮುತ್ತಲ ರಮ್ಯಸ್ಥಳಗಳಿಗೆ ಪ್ರವಾಸ ಹೋಗುತ್ತಲೂ ನಲಿಯುತ್ತಿದ್ದುದನ್ನು ಕಂಡು ಒಳಗೊಳಗೇ ಕೊರಗುತ್ತ ಅವರ ಹಿಗ್ಗಿನ ವಿವರಣೆಗಳನ್ನು ಕೇಳಿ ಅಂಥ ಸಂದರ್ಭಗಳಲ್ಲಿ ಭಾಗವಹಿಸುವ ಅವಕಾಶ ನಗೂ ದೊರೆತೀತೇ ಎಂದು ಆಸೆಯಿಂದ ನಿರೀಕ್ಷಿಸುತ್ತಿದ್ದನು. ಆಗ ಸ್ಕೌಟ್ ದಳಕ್ಕೆ ಸೇರಿದವರು ತಮ್ಮ ಅನೇಕ ಸಾಹಸ ಕಥೆಗಳನ್ನು ಕೇಳಿ ಕೇಳಿ, ಆಸೆ ತುಂಬಿದ ಮನಸ್ಸಿನಲ್ಲಿ ನಾನೂ ಒಂದು ಸಾಹಸವನ್ನು ಕಲ್ಪಿಸಿಕೊಂಡು ಒಂದು ಕಥೆಯನ್ನು ಹೆಣೆದು ಪದ್ಯಗಳಲ್ಲಿ ಬರೆದೆ. ಅದೇ 'ಬಾಲಾಚಾರ' ಎಂಬ ಸಣ್ಣ ಕವನ ಖಂಡ.

ದಳವನ್ನು ಪ್ರಾರಂಭಿಸಿದ ಸ್ಕೌಟ್ ಮಾಸ್ಟರ್ ಶ್ರೀ ಸಂಜೀವ ಕಾಮತ್. ಆಮೇಲೆ ಶ್ರೀ ಪದ್ಮನಾಭಾಚಾರ್ಯರು. ಸ್ಕೌಟ್ ಮಾಸ್ಟರ್ ಆದರು. ಅವರು ಶಾಲೆಯಲ್ಲಿ ಬೇಲೂರಿನಲ್ಲೇ ಬಹು ಸಮರ್ಥ ಉಪಾಧ್ಯಾಯರೆಂದು ಹೆಸರಾಗಿದ್ದವರು. ಕಥಾನಾಯಕ 'ಹಂ' ಸ್ಕೌಟ್ ದಳದಲ್ಲಿ ಸೇರಿದ್ದ ನನ್ನ ಪ್ರಿಯ ಸ್ನೇಹಿತ 'ರಾಮು' 'ರಾಮಸ್ವಾಮಿ' ಎಂಬುದು ಪೂರ್ತಿ ಹೆಸರು ಎಂಬುದಾಗಿ ಎಲ್. ಗುಂಡಪ್ಪನವರು ಬರೆದುಕೊಂಡಿದ್ದಾರೆ. ಈ ಪದ್ಯವನ್ನು ಎಲ್ಲೂ ಪ್ರಕಟಿಸಲಿಲ್ಲ. ಪೂರ್ಣಗೊಳಿಸಲೂ ಇಲ್ಲ. ಆರಂಭದಲ್ಲಿ ಬರೆದ ಕವಿತೆ ಎಂಬ ಕುತೂಹಲದಿಂದ ಇಟ್ಟುಕೊಂಡಿದ್ದೆ ಎಂದೂ ಗುರ್ತಿಸಿದ್ದಾರೆ. ಆದರೆ ಈ ಪದ್ಯ ಈಗ ಲಭ್ಯವಿಲ್ಲ.

ಈ ಘಟನೆ ನಡೆಯುವ ಮೊದಲೇ ತಮ್ಮ 15-16ರ ಹರೆಯದಲ್ಲಿಯೇ ಕವನಗಳನ್ನು ರಚಿಸಿದ್ದರು. ಹೈಸ್ಕೂಲ್‌ಗೆ ಬರುವ ಹೊತ್ತಿಗೆ ಸುಮಾರು 300 ಕವನಗಳನ್ನು ರಚಿಸಿದ್ದರಂತೆ. ಬಹು ಚಿಕ್ಕ ವಯಸ್ಸಿನಲ್ಲೇ ಈ ರೀತಿ ಬರೆಯಲು ಆರಂಭಿಸಿದ ಅವರ ಕವನಗಳಲ್ಲಿ ದೈವಭಕ್ತಿ, ಮಾತೃಭಕ್ತಿ, ದೇಶಭಕ್ತಿ ಎದ್ದು ಕಾಣುವ ಅಂಶಗಳು. ಉದಾಹರಣೆಗೆ ಒಂದು ಪ್ರಾರ್ಥನಾ ಕವಿತೆ.

ವಾಣಿ, ವೀಣಾಪಾಣಿ, ನತಗೀ
ರ್ವಾಣಿ, ಬೊಮ್ಮನರಾಣಿ, ಪುಸ್ತಕ
ಪಾಣಿ, ವಿಭುಧಶ್ರೇಣಿ ನಮಿತಪದಾಬ್ಜೆ, ಫಣಿವೇಣಿ
ಜಾಣೆ, ಮುಕ್ತಾಹಾರಧಾರಿಣಿ
ಶೋಣರತ್ನ ಕಿರೀಟ ಭೂಷಿಣಿ
ವಾಣಿ, ಮಂಜಳವಾಣಿ, ನೀಡೌಮತಿಗೆ ಮಂಗಳವ ||

ಹೈಸ್ಕೂಲಿನ ವಿದ್ಯಾಭ್ಯಾಸ ಹಾಗೂ ಇಂಟರಮೀಡಿಯೆಟ್ ವಿದ್ಯಾಭ್ಯಾಸ ಚಿಕ್ಕಮಗಳೂರಿನಲ್ಲಿ ನಡೆಯಿತು. ಈ ಅವಧಿಯಲ್ಲಿ ಗುಂಡಪ್ಪ ಅನೇಕ ಕಾವ್ಯ ರಚನೆಗಳನ್ನು ಮಾಡಿದರು. ತಮ್ಮ ರಚನೆಗಳಲ್ಲಿ ಉದ್ದೇಶಪೂರ್ವಕವಾಗಿ ಹಳೆಯ ಪದ್ಧತಿಗಳನ್ನು ಉಳಿಸಿಕೊಂಡು ಬರುವ ಪರಿಪಾಠವನ್ನು ಅನುಸರಿಸಿದರು.

ಆಗಿನ ಕಾಲದಲ್ಲಿ ಪ್ರಚಲಿತವಿದ್ದ ಛಂದಸ್ಸುಗಳಲ್ಲಿ ಕವನ ಬರೆದರು. ಆ ಸಮಯದಲ್ಲೇ ತಾವು ಓದಿದ ಕಾವ್ಯಗಳನ್ನು ಆಯಾ ಭಾಷೆಯಿಂದ ಕನ್ನಡಕ್ಕೆ ತಂದು ಕನ್ನಡದ ಜನತೆಗೆ ತಿಳಿಯಬೇಕೆಂಬ ಬಯಕೆ ಉದಯಿಸಿತ್ತು. ಈ ಆಶಯಕ್ಕೆ ಅನುಸಾರವಾಗಿ ಕುಲಶೇಖರ ಆಳ್ವಾರ್ ವಿರಚಿತ 'ಮುಕುಂದ ಮಾಲಾಸ್ತೋತ್ರ'ದ ಅನುವಾದವನ್ನು ತಮ್ಮ 20ನೇ ವಯಸ್ಸಿನಲ್ಲಿ ಆರಂಭಿಸಿದ್ದರು. ಆಗ ಅವರು ಇಂಟರ್ ಮೀಡಿಯಟ್ ವಿದ್ಯಾರ್ಥಿ.

ಇಂಟರ್‌ಮಿಡಿಯಟ್ ವಿದ್ಯಾಭ್ಯಾಸ ಮುಗಿದ ನಂತರ ಮುಂದಿನ ವ್ಯಾಸಂಗ ಎಲ್ಲಿ? ಹೇಗೆ ? ಎನ್ನುವ ಪ್ರಶ್ನೆ ಮುಂದೆ ನಿಂತಿತು. ಆಗ ಸಂಸ್ಕೃತಾಧ್ಯಯನ ಮಾಡುವುದಾದರೆ ಸಂಪೂರ್ಣ ನೆರವು ನೀಡುವುದಾಗಿ ಶೃಂಗೇರಿ ಶಾರದಾಪೀಠ ಆಶ್ವಾಸನೆ ಕೊಟ್ಟಿತು. ಆದರೆ, ಗುಂಡಪ್ಪನವರಿಗೆ ಆಧುನಿಕ ವಿದ್ಯೆಯ ಕಡೆ ಮನಸ್ಸು ವಾಲಿತ್ತು. ಪರಿಣಾಮವಾಗಿ ಶಾರದಾ ಪೀಠದಿಂದ ಧನ ಸಹಾಯವೇನೋ ದೊರೆಯಿತು - ಆದರೆ ಅದು ತಿಂಗಳಿಗೆ 10 ರೂಪಾಯಿಗಳ ಮೊತ್ತ. ಇನ್ನು ಪದವಿ

ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಹೋಗಬೇಕು. ಅಲ್ಲಿ ವಸತಿ ಸಮಸ್ಯೆ. ಅದನ್ನು ಒಂದು ರೀತಿಯಲ್ಲಿ ಬಗೆಹರಿಸಿಕೊಟ್ಟವರು 'ತಾತಯ್ಯ' ಎಂದು ಸುಪ್ರಸಿದ್ಧರಾಗಿದ್ದ ವೆಂಕಟಕೃಷ್ಣಯ್ಯನವರು. ಅವರ ಸಹಾಯದಿಂದ ಕೆಲವು ಕಾಲ ಉಚಿತ ಭೋಜನ ಪಡೆದು ಅನಂತರ ಒಂದು ಚಿಕ್ಕ ಕೋಣೆಯನ್ನು ಬೇರೊಬ್ಬ ವಿದ್ಯಾರ್ಥಿಯ ಜೊತೆ ಹಂಚಿಕೊಂಡು, ಸ್ವಯಂಪಾಕ ಮಾಡಿಕೊಂಡು ವಿದ್ಯಾಭ್ಯಾಸ ಮುಂದುವರಿಸಿದರು.

ಆಗಿನ ಕಾಲದ ಬಿ.ಎ. ವಿದ್ಯೆಯಲ್ಲಿ ಅಪಾರ ಆಸಕ್ತಿ, ಭಕ್ತಿಗೌರವವಿದ್ದ ಗುಂಡಪ್ಪ ಒಂದಕ್ಕಿಂತ ಹೆಚ್ಚು ವಿದ್ಯಾರ್ಥಿ ವೇತನವನ್ನು ಪಡೆದು ತನ್ನ ಕಾಲ ಮೇಲೆ ತಾನು ನಿಂತು ಅಧ್ಯಯನವನ್ನು ಮುಂದುವರಿಸಿ ದಕ್ಷ ವಿದ್ಯಾರ್ಥಿ ಎನಿಸಿಕೊಂಡನು.

1928ರಲ್ಲಿ ಬಿ.ಎ. ಡಿಗ್ರಿ. ಅದೇ ವರ್ಷ ಕನ್ನಡ ಸಾಹಿತ್ಯ ಪುನರುಜ್ಜೀವನ ದೀಕ್ಷಿತರಾದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರಿಗೆ 'ಕಿರಿಯ ಕಾಣಿಕೆಯನ್ನರ್ಪಿಸಿದ ಆಧುನಿಕ ಕನ್ನಡ ಕವಿ ಬಳಗದಲ್ಲಿ ಸೇರ್ಪಡೆ. ಆಗ ತಾನೇ ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭಿಸಿದ್ದ ಕನ್ನಡ ಎಂ.ಎ. ತರಗತಿಯ ಎರಡನೆಯ ತಂಡದಲ್ಲಿ ಸೇರಿ, ಗುಂಡಪ್ಪ 1930ರಲ್ಲಿ ತೇರ್ಗಡೆಯಾದರು.

ಕಾಲೇಜಿನ ಓದಿನುದ್ದಕ್ಕೂ ಅವರು ಸಂಸ್ಕೃತ, ಕನ್ನಡಕ್ಕಾಗಿ ಪಡೆದ ವಿದ್ಯಾರ್ಥಿ ವೇತನಗಳು ಹೀಗಿವೆ.

1. ಸರ್. ಪಿ.ಎನ್. ಕೃಷ್ಣಮೂರ್ತಿ ಸ್ಕಾಲರ್‌ಷಿಪ್ (ಬಿ.ಎ. ತರಗತಿಗಳಲ್ಲಿ 3 ವರ್ಷ) ಇದರ ಜೊತೆಗೆ ಒಂದು ವರ್ಷ ಸಂಸ್ಕೃತಕ್ಕಾಗಿ ಸಬ್ಜೆಕ್ಟ್ ಸ್ಕಾಲರ್‌ಷಿಪ್.
2. ಶ್ರೀ ನವೀನಂ ರಾಮಾನುಜಾಚಾರ್ಯ ಸ್ಕಾಲರ್‌ಷಿಪ್ (ಎಂ.ಎ. ತರಗತಿಗಳಲ್ಲಿ, 2 ವರ್ಷ)
3. ಶೃಂಗೇರಿ ಶ್ರೀಮಠದ ಸಾಂಕೇತಿಕ ಸಂಭಾವನೆ (5 ವರ್ಷ)

ಕಾಲೇಜು ಓದನ್ನು ಓದಲು ಹೋಗುವ ಮಗನಿಗೆ ಮದುವೆ ಮಾಡಿ ಕಳಿಸಬೇಕೆಂದು ತಾಯ್ತಂದೆ ಬಯಸಿದರು. ಆಗಿನ ಕಾಲಕ್ಕೆ ಗಂಡು ಮಕ್ಕಳಿಗೂ ತುಂಬ ಚಿಕ್ಕವಯಸ್ಸಿಗೇ ಮದುವೆ ಮಾಡುವುದು ಸಂಪ್ರದಾಯವಾಗಿತ್ತು. ಗುಂಡಪ್ಪ ಈ ಪದ್ಧತಿಯನ್ನು ವಿರೋಧಿಸಿದರು. ತನ್ನ ಬಳಿ ಪ್ರಸ್ತಾಪಕ್ಕೆ ಬಂದ ಸೋದರಿಕೆ ಸಂಬಂಧದ ಕನ್ಯೆಯನ್ನು, ತಾನು ಪದವೀಧರನಾದ ಮೇಲೆ ವಿವಾಹವಾಗುವುದಾಗಿಯೂ, ಅಷ್ಟು ಹೊತ್ತಿಗೆ ಆಕೆಯನ್ನು ಶಾಲೆಗೆ ಕಳಿಸಿ ವಿದ್ಯೆ ಕಲಿಸಬೇಕೆಂದೂ ತಿಳಿಸಿದರು. ರೂಢಿಗತ ಪದ್ಧತಿಯನ್ನು ಬಿಡಲು ಹೆಣ್ಣಿನ ತಂದೆ

ತಾಯಿ ಒಪ್ಪದ ಕಾರಣ ಮದುವೆ ಮಾತು ಮುಂದು ಬಿತ್ತು, ಹೆಣ್ಣು ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸಬೇಕು, ಅವರ ವಿವಾಹವನ್ನು ಚಿಕ್ಕವಯಸ್ಸಿನಲ್ಲಿ ಮಾಡಬಾರದು ಎಂಬ ಆದರ್ಶಗಳನ್ನು ಎಲ್. ಗುಂಡಪ್ಪ ತಮ್ಮ ಎಳವೆಯಿಂದಲೇ ಯೋಚಿಸಿ, ಅನುಸರಿಸಿದರು.

ಅಷ್ಟು ಹೊತ್ತಿಗಾಗಲೇ ಭಾರತ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಟುವಟಿಕೆಗಳು ಆರಂಭವಾಗಿ ಗಾಂಧೀಜಿಯವರ ಪ್ರಭಾವ ಎಲ್ಲರ ಮೇಲೂ ಉಂಟಾಗಿತ್ತು. ವಿದ್ಯಾರ್ಥಿ ಎಲ್. ಗುಂಡಪ್ಪನೂ ಸಹ ಮಹಾತ್ಮಾಗಾಂಧಿಯವರ ಆದರ್ಶ, ಪ್ರಭಾವಗಳಿಗೆ ಒಳಗಾಗಿ ಖಾದಿ ಧರಿಸಲು ಆರಂಭಿಸಿದ್ದ. ತಕಲಿಯಲ್ಲಿ ಚರಕಾದಲ್ಲಿ ನೂಲು ತೆಗೆದು, ಖಾದಿ ಭಂಡಾರಕ್ಕೆ ಕೊಟ್ಟರೆ, ಪ್ರತಿಯಾಗಿ ಖಾದಿ ಬಟ್ಟೆ ಸಿಗುತ್ತಿತ್ತು. ಹಾಗೆ ಖಾದಿ ಧರಿಸಲು ಆರಂಭಿಸಿದ ಗುಂಡಪ್ಪ ತಮ್ಮ ಕಡೆಯ ಕಾಲದವರೆಗೂ ಅದನ್ನೇ ಧರಿಸಿದರು.

ಎಲ್. ಗುಂಡಪ್ಪನವರಿಗೆ ವಿವಾಹವಾದಾಗ ಅವರ ವಯಸ್ಸು 25. ಅಕ್ಕಿ ಹೆಬ್ಬಾಳಿನ ನರಸಿಂಹ ಜೋಯಿಸರು ಮತ್ತು ಲಕ್ಷ್ಮೀನರಸಮ್ಮ ದಂಪತಿಗಳ ಹಿರಿಯ ಪುತ್ರಿ ಶಾರದೆ ಇವರ ಕೈಹಿಡಿದ ಕನ್ಯಾಮಣಿ. ಮದುವೆಯ ಸಮಯಕ್ಕೆ ಆಕೆಗೂ 16 ವರ್ಷವಾಗಿತ್ತು. ಆಗಿನ ಕಾಲಕ್ಕೆ ಹೆಚ್ಚೇ ಎನ್ನಿಸುವ ವಯಸ್ಸು ವಧೂ ವರರದ್ದು. ಆದರಿಂದ ಸಂತೋಷಪಟ್ಟವರು ಗುಂಡಪ್ಪನವರೇ.

ಮದುವೆಯಲ್ಲೂ ಕೂಡ ಉಡುಪಿನ ಬಗ್ಗೆ ತಾವು ಅನುಸರಿಸುತ್ತಿದ್ದ ಆದರ್ಶವನ್ನು ಬಿಡಲಿಲ್ಲಗುಂಡಪ್ಪ. ಅಳಿಯನಿಗೆಂದು ಮಾವನ ಮನೆಯವರು ತಂದಿದ್ದ ಮಾಮೂಲಿ ನೂಲಿನ ಸಂಕಲಿಕೆ ಪಂಚೆ ಶಲ್ಯಗಳನ್ನು ಸ್ವೀಕರಿಸಲು ನಿರಾಕರಿಸಿದರು. ಪೇಚಿಗೆ ಸಿಕ್ಕಿದ ಹೆಣ್ಣಿನವರು ಅವಾಂತರ ಅವಾಂತರವಾಗಿ ಅಕ್ಕಿಹೆಬ್ಬಾಳಿನಿಂದ ಮೈಸೂರಿಗೆ ಹೋಗಿ ಖಾದಿಯ ಪಂಚೆ ಶಲ್ಯಗಳನ್ನು ತಂದ ಮೇಲೇ ಗುಂಡಪ್ಪ ಹಸೆಮಣೆ ಏರಿದ್ದು. ಮದುವೆಯಲ್ಲಿ ಪ್ರತಿ ಮಂತ್ರದ ಅರ್ಥವನ್ನು ಮಾವನರನ್ನು ಕೇಳಿ ಕೇಳಿ ತಿಳಿದುಕೊಂಡು ಶಾಸ್ತ್ರಗಳನ್ನು ನೆರವೇರಿಸಿದರಂತೆ. ಕುರುಡು ಸಂಪ್ರದಾಯಗಳನ್ನು ತಿರಸ್ಕರಿಸಲು ಆಗಲೇ ಆರಂಭಿಸಿದ್ದ ಗುಂಡಪ್ಪ, ವಧೂವರರ ಭೂಮದೂಟದಲ್ಲಿ ಎಂಜಲು ಶಾಸ್ತ್ರವನ್ನು ಮಾಡಲೊಪ್ಪದೆ ತಮ್ಮ ತಂದೆತಾಯಿಗಳ ಮನಸ್ಸು ಕುಗ್ಗಿಸಿದರು. ಆದರೆ, ಹೆಣ್ಣು ಕೊಟ್ಟ ಮಾವ ಇಂತಹ ವಿಚಾರವಂತ, ವಿದ್ವತ್ಪೂರ್ಣ ಅಳಿಯ ಸಿಕ್ಕಿದನೆಂದು ತುಂಬ ಸಂತೋಷಪಟ್ಟರಂತೆ.

ಮದುವೆಯಾದ ಮೇಲೂ ವಿದ್ಯಾರ್ಥಿಯಾಗಿದ್ದ ಗುಂಡಪ್ಪ ಸ್ನಾತಕೋತ್ತರ ಪದವಿ ಮುಗಿಸಿ ಎಂ.ಎ. ಪದವೀಧರರಾದರು.

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಬಿ.ಎಂ.ಶ್ರೀ; ಎ. ಆರ್. ಕೃಷ್ಣಶಾಸ್ತ್ರೀ, ಟಿ. ಎಸ್. ವೆಂಕಣ್ಣಯ್ಯ ಅವರ ನೇತೃತ್ವದಲ್ಲಿ ಎಂ. ಎ. ಓದಿದರು. ಅಂದಿನ ಕನ್ನಡ ಎಂ.ಎ. ತರಗತಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಮಾತೃಭಾಷೆಯಲ್ಲದ ಒಂದು ದ್ರಾವಿಡ ಭಾಷೆಯನ್ನು ಅಧ್ಯಯನ ಮಾಡಬೇಕೆಂಬ ನಿಯಮವಿತ್ತು. ಎಲ್. ಗುಂಡಪ್ಪನವರು ತಮಿಳನ್ನು ಆರಿಸಿಕೊಂಡರು. ಐಚ್ಛಿಕ ಭಾಷೆಯಾಗಿ ವ್ಯಾಸಂಗ ಮಾಡಿದರು. ಮೈಸೂರು ಸರ್ಕಾರದ ವಿದ್ಯಾಧಿಕಾರಿಗಳಾಗಿದ್ದ ಪಿ.ಎಂ. ಸೋಮಸುಂದರಂ ಅವರ ಮಾರ್ಗದರ್ಶನದಲ್ಲಿ ತಮಿಳು ಭಾಷೆಯಲ್ಲಿ ಹೆಚ್ಚಿನ ಪಾಂಡಿತ್ಯ ಪಡೆದರು.

ಬಾಲ್ಯದಲ್ಲೆ ಕಾವ್ಯ ಮನೋಧರ್ಮ ಬೆಳೆಸಿಕೊಂಡ ಗುಂಡಪ್ಪನವರು, ಸಂಸ್ಕತದಲ್ಲಿ, ಕನ್ನಡದಲ್ಲಿ ಕವಿತೆಗಳನ್ನು ರಚಿಸಲು ಆರಂಭಿಸಿದ್ದರು. ಹೈಸ್ಕೂಲು ಕಲಿಯುತ್ತಿರುವ ಸಂದರ್ಭದಲ್ಲಿ ಚಿಕ್ಕಮಗಳೂರಿನಲ್ಲಿ ಶೃಂಗೇರಿಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳಿಗೆ ಸಂಸ್ಕೃತದಲ್ಲಿ ಶ್ಲೋಕ ಬರೆದು ಅರ್ಪಿಸಿದ್ದರು. ಮೈಸೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ಮುಂದುವರಿದಾಗ, ಅಲ್ಲಿದ್ದ ಸಾಹಿತ್ಯಕ ಸಾಂಸ್ಕೃತಿಕ ವಾತಾವರಣ ಮತ್ತು ಶ್ರೇಷ್ಠ ಮಟ್ಟದ ಕಲಿಕೆ ಅವರ ಪ್ರೌಢಿಮೆಯನ್ನು ಮತ್ತಷ್ಟು ಹೆಚ್ಚಿಸಿತು.

ಬಿ.ಎಂ.ಶ್ರೀ ಅವರ ಇಂಗ್ಲಿಷ್ ಗೀತೆಗಳಿಂದ ಸ್ಫೂರ್ತಿ ಪಡೆದ ಇವರು ಒಬ್ಬ ತರುಣ ಕವಿಯಾಗಿ, ಗುರುಗಳಾದ ವೆಂಕಣ್ಣಯ್ಯನವರ ಗಮನ ಸೆಳೆದರು. ವೆಂಕಣ್ಣಯ್ಯನವರು ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದ ಮೂಲಕ ತಮ್ಮ ವಿದ್ಯಾರ್ಥಿಗಳು ರಚಿಸಿ ಮೆಚ್ಚುಗೆ ಪಡೆದ ಎರಡು ಕವನ ಸಂಕಲನಗಳನ್ನು - 'ತಳಿರು' ಮತ್ತು 'ಕಿರಿಯ ಕಾಣಿಕೆ'- ಪ್ರಕಟಿಸಿದರು.

'ಕಿರಿಯ ಕಾರಣಿಕೆ' ಯಲ್ಲಿ ಗುಂಡಪ್ಪನವರ 'ಚಟಾಕಿ' ಯೂ ಸೇರಿದಂತೆ ಏಳು ಪದ್ಯಗಳು ಪ್ರಕಟವಾಗಿವೆ. ಆ ವಯಸ್ಸಿನಲ್ಲೇ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಆಳವಾದ ಚಿಂತನೆ ನಡೆಸಿದ್ದ ಗುಂಡಪ್ಪನವರು 'ವಿಧವೆ' ಎನ್ನುವ ಪದ್ಯದಲ್ಲಿ ಹೀಗೆ ಬರೆದಿದ್ದಾರೆ.

ತಾಯಿ ಬದುಕಿರುವಾಗ ತಬ್ಬಲಿಯು ನೀನು
ನಿನ್ನ ಮನೆಯಿರುವಾಗ ಪರದೇಶಿ ನೀನು,

ನಿನ್ನ ಜನ ದೊರೆವಾಗ ಗತಿಯೇನೆ ನೀನು

ಸಾಯುವೆಯೇ ಸತ್ತಂತೆ ಬಾಳುವಳು ನೀನು.

ಇವೇ ಅಲ್ಲದೆ 'ರೈತರ ಗೋಳು' ಎಂಬ ಕವನದಲ್ಲಿ ಭಾರತದ ಬಡ ರೈತನ ಬವಣೆಯನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ.

ಗುರುಗಳು ಶಿಷ್ಯರಿಗೆ ಬೆನ್ನು ತಟ್ಟಿದ್ದು

ಎಲ್ ಗುಂಡಪ್ಪನವರು, ಜಿ.ಪಿ. ರಾಜರತ್ನಂ ಅವರು ಎ.ಆರ್.ಕೃ ಮತ್ತು ಬಿ.ಎಂ.ಶ್ರೀ ಅವರ ಶಿಷ್ಯರು. ಗೊರೂರು ಇವರ ಮಿತ್ರರು. ಈ ಮೂವರಿಗೂ ಒಂದು ವರುಷ ದೇವರಾಜ ಬಹದ್ದೂರ್ ಸಾಹಿತ್ಯ ಪಾರಿತೋಷಕ ಬಂದಿತು. ಗೊರೂರು ಅವರಿಗೆ ನಮ್ಮ ಊರಿನ ರಸಿಕರು ಗ್ರಂಥಕ್ಕೆ, ಜಿ.ಪಿ. ರಾಜರತ್ನಂ ಅವರಿಗೆ ಚೀನಾದೇಶದ ಬೌದ್ಧಯಾಂತ್ರಿಕರು ಗ್ರಂಥಕ್ಕೆ, ಎಲ್. ಗುಂಡಪ್ಪನವರ ಭಾಸನ ಏಕಾಂಕ ನಾಟಕಗಳು ಅನುವಾದ ಕೃತಿಗೆ ದೊರಕಿದವು. ''ಈ ಸಂತೋಷಕ್ಕಾಗಿ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳು ತಮ್ಮ ಮನೆಯಲ್ಲಿ ಈ ಮೂವರೂ ಮತ್ತೆ ಕೆಲವು ಮಿತ್ರರೊಡನೆ ಒಂದು ಭೋಜನ ಕೂಟನ್ನು ಕೊಟ್ಟರು. ಅದಾದ ಮೇಲೆ ಕೆಲವು ದಿನದ ನಂತರ ಶ್ರೀಮಾನ್ ಬಿ.ಎಂ.ಶ್ರೀ ಅವರು ಒಂದು ಭೋಜನ ಕೂಟ ನೀಡಿದರು. ಆ ಕಾಲದಲ್ಲಿ ಕಿರಿಯರನ್ನು ಹಾಗೆ ಬೆನ್ನು ತಟ್ಟುವುದು ಅಂದಿನ ಹಿರಿಯರ ಗುಣವಾಗಿತ್ತು.''

ಹಾಗೆ ಗುರುಗಳ ಮೆಚ್ಚಿಗೆ ಪಡೆದು, ಅವರಿಂದಲೇ ಭೋಜನಕೂಟದ ಭಾಗ್ಯ ಪಡೆದವರಲ್ಲಿ ಎಲ್. ಗುಂಡಪ್ಪನವರೂ ಒಬ್ಬರಾಗಿದ್ದರು.

ಸಂಗ್ರಹ : ಅನಾಜಿ

ಆಧಾರ

ಗೊರೂರು ರಾಮಸ್ವಾಮಿ ಅಯ್ಯಂಗಾರರ ಲೇಖನ

ರಾಜಮಾರ್ಗ ಗ್ರಂಥ ಪುಟ 22

ಸ್ನಾತಕೋತ್ತರ ಪದವಿ ಕೈಗೆ ಬಂತು, ಜೊತೆ ಜೊತೆಗೇ ಸಂಸಾರವೂ ಸೇರಿತ್ತು. ಆಗಿನ ಕಾಲದಲ್ಲಿ ಪರೀಕ್ಷೆ ಪಾಸು ಮಾಡಿದ ಮೇಲೆ ಮೂವತ್ತು ರೂಪಾಯಿ ವೇತನದ ಸರ್ಕಾರಿ ಕೆಲಸ ಸಿಕ್ಕಿದರೆ ದೊಡ್ಡ ಅದೃಷ್ಟ. ಕೆಲಸವಿಲ್ಲದ ಜನ ಅನೇಕರಿದ್ದರು. ಅವರಲ್ಲಿ ಶ್ರೀಯುತ ಜಿ.ಪಿ. ರಾಜರತ್ನಂ ಹಾಗೂ ಶ್ರೀ ಎಲ್. ಗುಂಡಪ್ಪನವರೂ ಸೇರಿದ್ದರು. ಶ್ರೀ ರಾಜರತ್ನಂ ಅವರಿಗೆ ಬೌದ್ಧ ಜೈನ ಧರ್ಮದ ಗ್ರಂಥಗಳ ವಿಷಯದಲ್ಲಿ ಕೆಲಸ

ದೊರಕಿತು. ಶ್ರೀ ಗುಂಡಪ್ಪನವರಿಗೆ 'ಮೈಸೂರು ವ್ಯವಸಾಯ ಇಲಾಖೆಯಲ್ಲಿ' ಒಂದು ಉದ್ಯೋಗ ದೊರಕಿತು. 'ಮೈಸೂರು ವ್ಯವಸಾಯ ಶೋಧಕ ಸಂಘ'ದ ಕಾರ್ಯದರ್ಶಿಯವರಿಗೆ ಕನ್ನಡ ಸಹಾಯಕರಾಗಿ ಸೇವೆ ಸಲ್ಲಿಸಿದರು. - 1930ರಿಂದ 1933ರವರೆಗೆ. ಆಗ ಡಾ|| ಕೋಲ್ಮನ್, ಡಾ|| ಕುನ್ಹಿ ಕಣ್ಣನ್, ಡಾ|| ಬಾದಾಮಿ ಮುಂತಾದವರ ಸಂಶೋಧನಾ ಫಲಗಳನ್ನೊಳಗೊಂಡ ಅನೇಕ ವೈಜ್ಞಾನಿಕ ಲೇಖನಗಳನ್ನು ಕನ್ನಡಿಸಿ ಪ್ರಕಟಣೆಗೆ ಅಣಿ ಮಾಡುವ ಕೆಲಸ, ಇದರ ಜೊತೆಗೇ ವ್ಯವಸಾಯಗಾರರಿಗೆ ನಿತ್ಯೋಪಯೋಗಿಯಾದ ಅನೇಕ ವಿಷಯಗಳ ಭಾಷಾಂತರವನ್ನೂ ಮಾಡಿದರು.

ಆಮೇಲೆ 1933ರಿಂದ 1942ರ ಜೂನ್‌ವರೆಗೆ ಮೈಸೂರು ವಿಶ್ವವಿದ್ಯಾನಿಲಯ ಕೈಗೊಂಡ 'ಇಂಗ್ಲಿಷ್ - ಕನ್ನಡ ನಿಘಂಟು' ರಚನೆಯ ಕಾಲದಲ್ಲಿ ಭಾಷಾ ಪಂಡಿತರಾಗಿ ಸೇವೆ ಸಲ್ಲಿಸಿದರು.

ಈ ಕೆಲಸ ಮುಗಿದ ಬಳಿಕ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ 1958ರ ತನಕ ವಿದ್ಯಾರ್ಥಿಗಳಿಗೆ ಬೋಧಿಸಿದರು. ಯಾವ ಪದೋನ್ನತಿಯನ್ನು ಪಡೆಯದೇ ಅಧ್ಯಾಪಕರಾಗಿಯೇ ನಿವೃತ್ತಿ ಹೊಂದಿದರು.

'1957ರಲ್ಲಿ ವಿಶ್ವ ವಿದ್ಯಾನಿಲಯದ ಆದೇಶದ ಪ್ರಕಾರ ಕನ್ನಡ ಸಾಹಿತ್ಯ ಪರಿಷತ್ತಿಗೆ ಸೇವೆಯ ಎರವಲು. ಆ ಕಾಲದಲ್ಲಿ 'ಕನ್ನಡ ನಿಘಂಟ'ನ ಸಂಪಾದಕನಾಗಿ 1957ರಿಂದ 1963ರವರೆಗೆ, ಪರಿಷತ್ತು ರಚಿಸುತ್ತಿದ್ದ 'ಕನ್ನಡ ನಿಘಂಟಿನ' ಸಂಪಾದಕತ್ವ. ಆ ಅವಧಿಯಲ್ಲಿ ನಿಘಂಟಿನ ಪ್ರಥಮ ಸಂಚಿಕೆಯ ಮುದ್ರಣಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿ ಮುಗಿಸಲಾಗಿತ್ತು.' ಎಂದು ಎಲ್ಲ ಗುಂಡಪ್ಪನವರು ತಾವೇ ಸಿದ್ಧಪಡಿಸಿರುವ ಲಘು ಪರಿಚಯದಲ್ಲಿ ಹೇಳಿಕೊಂಡಿದ್ದಾರೆ. ಈ ಸಮಯದಲ್ಲಿ ನಿಘಂಟನಿನ ಹಿರಿಯರು ಅವರನ್ನು ಸರಿಯಾಗಿ ಕಾಣಲಿಲ್ಲ ಎಂದು ತುಂಬಾ ನೊಂದಿದ್ದರು.

ಅನಂತರ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಬೆಂಗಳೂರು ಕಚೇರಿಯಲ್ಲಿ ಎರಡು ವರ್ಷಕಾಲ ಕನ್ನಡ ಭಾಷಾ ವಿಷಯದ ಸಲಹೆಗಾರನಾಗಿ ನೇಮಕಗೊಂಡರು. ಆಗ ಪ್ರಕಟವಾಗಿದ್ದು 'ಪತ್ರಿಕಾ ನಿಘಂಟು'. ಅದೇ ಸಮಯದಲ್ಲಿ ಹೈದರಾಬಾದಿನಲ್ಲಿ ಕೇಂದ್ರ ಸರ್ಕಾರ ನಡೆಸಿದ 'ಭಾಷಾಂತರಕಾರರ ಸಮ್ಮೇಳನಕ್ಕೆ ಆಹ್ವಾನ ಪ್ರತಿನಿಧಿಯಾಗಿ ಭಾಗವಹಿಸಿ, ಲೇಖನ ವಾಚನ ಮಾಡಿದರು.

೧೯೬೬ರಿಂದ ೧೯೭೨ರ ಮಾರ್ಚಿ ತಿಂಗಳು ಕೊನೆಯವರೆಗೆ ಬೆಂಗಳೂರು ಬಸವನಗುಡಿಯಲ್ಲಿನ 'ಬಿ.ಎಂ.ಎಸ್' ಮಹಿಳಾ ಕಾಲೇಜಿನ ಕನ್ನಡ ಶಾಖೆಯ ಮೇಲ್ವಿಚಾರಣೆ ವಹಿಸಿಕೊಂಡು, ವಿದ್ಯಾರ್ಥಿಗಳಿಗೆ ಕನ್ನಡ ಬೋಧಿಸಿದರು.

ಗಾಂಧಿಶತಮಾನೋತ್ಸವ ಸಂಬಂಧದಲ್ಲಿ 'ಶತಮಾನೋತ್ಸವ ಸಂಚಿಕೆಯ' ಸಂಪಾದಕತ್ವ ಇವರು ನೆರವೇರಿಸಿದ ಮತ್ತೊಂದು ಕೆಲಸ. - 'ಕರ್ನಾಟಕ ಪರಂಪರೆ Karnataka through the Ages ಭಾಷಾಂತರ ಸಮಿತಿಯ ಸದಸ್ಯರಾಗಿದ್ದರು. ಮತ್ತು ಕೆಲವು ಲೇಖನಗಳ ಬಾಷಾಂತರ ಕಾರ್ಯ ಮಾಡಿದರು.

ಈ ಎಲ್ಲ ಉದ್ಯೋಗ ನಿಮಿತ್ತ ಕೆಲಸಗಳ ಮಧ್ಯೆಯೂ, ಗುಂಡಪ್ಪನವರು, ತಮ್ಮ ಬರಹದ ಕೆಲಸಗಳನ್ನು ಅವಿರತವಾಗಿ ಮುಂದುವರಿಸಿದರು. ಅನೇಕ ಸ್ವಂತ ಕೃತಿಗಳನ್ನು ಬರೆದು ತಾವೇ ಪ್ರಕಟಿಸಿದರು. ಇಂಗ್ಲಿಷ್‌ನಿಂದ, ಸಂಸ್ಕೃತದಿಂದ, ತಮಿಳಿನಿಂದ ಮೇರು ಕೃತಿಗಳನ್ನು ಕನ್ನಡಕ್ಕೆ ತಂದರು. ಆಕಾಶವಾಣಿಯಲ್ಲಿ 'ಚಿಂತನ'ಗಳನ್ನು ಪ್ರಸಾರ ಮಾಡಿದರು. ಉದ್ದಾಮ ಪಂಡಿತರನ್ನು ಸಂದರ್ಶನ ಮಾಡಿದರು.

ಇಷ್ಟೆಲ್ಲ ಕಾರ್ಯಗಳ ಮಧ್ಯೆಯೂ ಅವರು ಒಬ್ಬ ಪ್ರೇಮಮಯ ತಂದೆಯಾಗಿ, ಅಣ್ಣನಾಗಿ, ಸಹಾಯ ಕೇಳಿದವರಿಗೆ ಶಕ್ತಿಮೀರಿ ನೆರವು ಕೊಡುವ ಸ್ನೇಹ ಜೀವಿಯಾಗಿ ಮೆರೆದರು. ಅಕ್ಕಿ ಹೆಬ್ಬಾಳಿನ ಶಾರದೆ ಅವರಿಗೆ ಸರೀಜೋಡಿ. ಗುಂಡಪ್ಪನವರು ಎಷ್ಟು ಗಂಭೀರವೋ ಅಷ್ಟೇ ಸರಸಿ, ಹಾಸ್ಯಮಯಿ ಈ ಶಾರದೆ. ಕೇವಲ ನಾಲ್ಕನೇ ತರಗತಿವರೆಗೆ ಓದಿದ್ದರೂ,ಪತಿಯ ಸಂಪರ್ಕದಿಂದ ಕಾವ್ಯಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದ್ದರು. ಸಂಪ್ರದಾಯದ ಹಾಡುಗಳನ್ನು ಬಹಳ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಆಗಿನ ಕಾಲಕ್ಕೆ ತಕ್ಕಂತೆ ರಂಗೋಲಿ ಹಾಕುವುದು, ಹೂ ಕಟ್ಟುವುದು ಇವೇ ಮುಂತಾದ ಕೈ ಕೆಲಸಗಳಲ್ಲಿ ವಿಪರೀತ ನಿಪುಣೆ. ಮನೆಗೆ ಎಷ್ಟು ಜನ ಬಂದರೂ ಲೀಲಜಾಲವಾಗಿ ಅಡಿಗೆ ಮಾಡಿ, ಪ್ರೀತಿಯಿಂದ ಉಣಬಡಿಸುವ ಪಾಕಪ್ರವೀಣೆ. ಮೀಗಿಲಾಗಿ ಗುಂಡಪ್ಪನವರ ಬುದ್ಧಿಮತ್ತೆ ಯೋಗ್ಯತೆಗಳನ್ನು ಅರಿತು, ಅವರಿಗೆ ಅನುಕೂಲಳಾಗಿ ನಡೆದುಕೊಂಡ ಜಾಣೆ.

ಗುಂಡಪ್ಪ-ಶಾರದಮ್ಮ ಇಡೀ ಕುಟುಂಬ ವರ್ಗಕ್ಕೆ ಭಾವ - ಅಕ್ಕ ಇಲ್ಲವೇ ಅಣ್ಣ - ಅತ್ತಿಗೆ ಯಾರಿಗೆ ಏನೇ ಕಾಯಿಲೆ ಬಂದರೂ, ವಿದ್ಯಾಭ್ಯಾಸದ ಅಗತ್ಯ ಉಂಟಾದರೂ, ಬೆಂಗಳೂರಿನಂಥ ನಗರದಲ್ಲಿ ಉದ್ಯೋಗ ದೊರಕಿ ವಸತಿಯ ಕೊರತೆ ಕಂಡು

ಬಂದರೂ ಅವರೆಲ್ಲ ಆಶ್ರಯಿಸುತ್ತಿದ್ದುದು ಈ ಅಕ್ಕ- ಭಾವರನ್ನೇ. ಅವರ ಮನೆಯಲ್ಲಿ ಎಂದೂ ಹತ್ತು ಜನಕ್ಕೆ ಕಡಿಮೆ ಊಟಕ್ಕೆ ಕುಳಿತದ್ದೇ ಇಲ್ಲ. ಹೀಗೆ ಊಟಕ್ಕೆ ಕುಳಿತಾಗ ಹಲವಾರು ವಿಷಯಗಳು ಚರ್ಚೆಗೆ ಬರುತ್ತಿದ್ದವು. ಗುಂಡಪ್ಪನವರದು ಖಚಿತ ನಿಲುವು. ಸತ್ಯನಿಷ್ಠೆ, ಧರ್ಮ, ನ್ಯಾಯನೀತಿಗಳಿಗೆ ಸರಳತೆಗೆ ಅವರು ಬಹಳ ಬೆಲೆ ಕೊಡುತ್ತಿದ್ದರು. ಮನೆಯಲ್ಲಿದ್ದ ಕಿರಿಯರು ಕೆಲವೊಮ್ಮೆ ಬೇಕೆಂದೇ ರಡ್ಡುವಾದ ಮಾಡುತ್ತಿದ್ದರು. ಆಗ ಗುಂಡಪ್ಪನವರು ಆಡುತ್ತಿದ್ದ ಮಾತುಗಳು ಮುಂದೆ ಅವರೆಲ್ಲರಿಗೂ ಮಾರ್ಗದರ್ಶನ'ವಾಗುವಂತೆ ಇರುತ್ತಿತ್ತೆಂದು ಹೇಳುವುದು ಅಗತ್ಯವೇ ಇರುತ್ತಿರಲಿಲ್ಲ. ಊಟ ಮಾಡಿದ ಕೈಗಳು ಒಣಗಿದರೂ ಯಾರಿಗೂ ಪರಿವೆಯೇ ಇಲ್ಲದೆ ಚರ್ಚೆ ಮುಂದುವರಿಯುವುದು. 'ಮಾರನೇ ದಿನ ಬೆಳಿಗ್ಗೆ ಬೇಗ ಏಳಬೇಕು. ಅದಕ್ಕಾಗಿ ಅಡಿಗೆ ಮನೆ ಚೊಕ್ಕಟ ಮಾಡಬೇಕು. ಅದಕ್ಕೂ ಮೊದಲು ನನ್ನ ಊಟವಾಗಬೇಕು ಎಂದು ಶಾರದಮ್ಮ ಭರತವಾಕ್ಯ ಹಾಡಿ ಎಲ್ಲರನ್ನೂ ಎಬ್ಬಿಸುತ್ತಿದ್ದರು.

ಮನೆಗೆ ನೆಂಟರು ಬಂದಾಗಲೂ ಅಷ್ಟೆ, ಮಿತಭಾಷಿ. ಗುಂಡಪ್ಪನವರು ಎಲ್ಲರ ಯೋಗಕ್ಷೇಮವನ್ನು ವಿಚಾರಿಸಿ, ತಮ್ಮ ಅಧ್ಯಯನ - ಬರೆಹಗಳ ಕೆಲಸದಲ್ಲಿ ಮುಳುಗುವರು.

ಒಮ್ಮೆ ಬೆಳಗಾಯಿತು. ಅವರು ಎಂದಿನಂತೆ ತಮಗೆ ಅನುಕೂಲಕರವಾದ ಒಂದು ಇಳಿಜಾರು ಮೇಜು ಇಟ್ಟುಕೊಂಡು ನೆಲದ ಮೇಲೆ ಕೂತು, ಬರೆಯುತ್ತಿದ್ದರು. ಊರಿನಿಂದ ಅವರ ಸೋದರಿ ಬಂಧುಗಳು - ಕಸಿನ್‌ಗಳು- ಅಣ್ಣ ಅತ್ತಿಗೆಯನ್ನು ನೋಡಲು ಬಂದರು. 'ಗುಂಡಣ್ಣ ಬರೀತಿದಾರೆ, ಗಲಾಟೆ ಮಾಡೋದು ಬೇಡ' ಎಂದು ಹೇಳಿಕೊಂಡೇ ಎಲ್ಲರೂ ಅವರ ಸುತ್ತ ಕುಳಿತು ಅತ್ತಿಗೆಯ ಜೊತೆ ಹರಟೆ ಹೊಡೆದು, ಅತ್ತಿಗೆಯ ಮಕ್ಕಳ ಕೈಲಿ ಹಾಡು ಹೇಳಿಸಿ ಕೇಳಿ, ತಿಂಡಿಕಾಫಿ ಸೇವಿಸಿ ಹೋದರು. ಅವರು ಹೋದ ಎಷ್ಟೋ ಹೊತ್ತಾದ ಮೇಲೆ ಬರವಣಿಗೆ ನಿಲ್ಲಿಸಿದ ಗುಂಡಪ್ಪನವರು ತಮ್ಮ ಸುತ್ತ ಇದ್ದ ಹರದ ಕಂಡು 'ಯಾರಾದರೂ ಬಂದಿದ್ದರೆ ? ಎಂದು ಕೇಳಿದರು. ಅಷ್ಟು ಏಕಾಗ್ರಚಿತ್ತತೆಯನ್ನು ಅವರು ಸಾಧಿಸಿದ್ದರು.

ಬಂಧುಗಳ ವಿಚಾರದಲ್ಲಿ ಉದಾರ ಚರಿತರು. ಬೆಂಗಳೂರಿನಲ್ಲಿ ಅವರು ಸ್ವಂತ ಮನೆ ಕಟ್ಟಿಸಲೇ ಇಲ್ಲ. ಸದಾ ಬಾಡಿಗೆ - ಮನೆಯಲ್ಲೆ. ಆದರೆ ತಮ್ಮ ಹಳ್ಳಿಯಲ್ಲಿ ತಂದೆ ತಾಯಿಯರ ಸಲುವಾಗಿ ಮನೆಕಟ್ಟಿಸಿಕೊಟ್ಟರು. ಸ್ವಂತ ಹೊಲ- ತೋಟ - ಗದ್ದೆಗಳಲ್ಲಿ

ಬೆಳೆದ ಪದಾರ್ಥಗಳನ್ನು ಒಮ್ಮೆಯೂ ಊರಿನಿಂದ ಪಡೆಯಲಿಲ್ಲ. ಬದಲಾಗಿ ಅಲ್ಲಿಗೆ ಹೋದಾಗಲೆಲ್ಲ ಇಲ್ಲಿಂದ ಧಾರಾಳವಾಗಿ ಪದಾರ್ಥಗಳನ್ನು ಕೊಂಡು ಹೋಗಿ ಕೊಡುತ್ತಿದ್ದರು. ತಮ್ಮಂದಿರ ಮಕ್ಕಳನ್ನು ಮನೆಯಲ್ಲಿಟ್ಟುಕೊಂಡು ಓದಿಗೆ ಸಹಾಯ ಮಾಡಿದರು. ಅವರ ಮೈದುನಂದಿರಿಬ್ಬರೂ ಕೂಡ ಶ್ರೀ ಗುಂಡಪ್ಪನವರ ಆಶ್ರಯದಲ್ಲೇ ಇದ್ದವರು. ಹೀಗೆ ತಮ್ಮ ಮಾವನವರಿಗೆ ಅವರ ಕಡೆಗಾಲದಲ್ಲಿ ನೀಡಿದ ವಚನವನ್ನು ಕಡೆಯ ತನಕ ಪಾಲಿಸಿದರು. ಅವರಿಬ್ಬರನ್ನೂ ಒಳ್ಳೆ. ಶಾಲೆಗಳಿಗೆ ಕಾಲೇಜ್‌ಗಳಿಗೆ ಫೀಸ್ ಕೊಟ್ಟು ಕಳಿಸಿದರು. ಸ್ವಂತ ಮಕ್ಕಳು ಫ್ರೀ ಷಿಪ್, ಸ್ಕಾಲರ್ ಷಿಪ್‌ಗಳಲ್ಲಿ ಓದಿದರು. ಮೈದುನಂದಿರ ಮದುವೆಗಳನ್ನೂ ಮಾಡಿ ಕರ್ತವ್ಯ ಪೂರೈಸಿದರು.


ಬೆಂಗಳೂರಿನಲ್ಲಿ ಸಂಸಾರ ಹೂಡಿದ ಹೊಸತರಲ್ಲೇ ವಿದ್ಯಾರ್ಥಿಗಳಿಗೆ ಆಗಿನ ಕಾಲದ ಪದ್ಧತಿಯಂತೆ ವಾರಾನ್ನ ಇವರ ಮನೆಯಲ್ಲೂ ನಡೆಯುತ್ತಿತ್ತು. ಹಾಗೆ ಈ ದಂಪತಿಗಳ ಸಹಾಯ ಪಡೆದ ಹಲವರು ಅವರನ್ನು ಇಂದಿಗೂ ನೆನೆಯುತ್ತಾರೆ. ಒಮ್ಮೆ ಒಬ್ಬ ವಿದ್ಯಾರ್ಥಿ ಊಟ ಮಾಡುವಾಗ ಮೂರ್ಛೆ ಕಾಯಿಲೆಯಿಂದ ಬಳಲಿ ಬಿದ್ದಾಗ ಶಾರದಮ್ಮ ಅವನಿಗೆ ಶುಶ್ರೂಷೆಮಾಡಿದ್ದೇ ಅಲ್ಲದೆ, ನಂತರವೂ ದಂಪತಿಗಳು ಅವನ ಚಿಕಿತ್ಸೆ ನೆರವೇರಿಸಿಕೊಟ್ಟರು. ಅವರಿಂದ ಸಹಾಯ ಪಡೆದ ಮಹನೀಯರೊಬ್ಬರು ಮಧ್ಯಪ್ರದೇಶದಲ್ಲಿ ಎಂಜಿನಿಯರ್ ಆಗಿ ವಿಶ್ರಾಂತರಾದ ನಂತರ, ಹೆಂಡತಿ ಮಕ್ಕಳೊಂದಿಗೆ ಬಂದು ಗುಂಡಪ್ಪನವರನ್ನು ಗೌರವಿಸಿದ್ದನ್ನು ಮಕ್ಕಳು ಕಂಡಿದ್ದರು. ಭಿಕ್ಷಾನ್ನಕ್ಕೆ ಬಂದ ಹುಡುಗರಿಗೆ ಶಾರದಮ್ಮ ಎಂದೂ ತಂಗಳು ಹಾಕುತ್ತಿರಲಿಲ್ಲ. ಬಿಸಿಯಾದ ಅಡುಗೆಯನ್ನೇ ಭಿಕ್ಷಾನ್ನದ ಹುಡುಗನಿಗೆ ಕೊಟ್ಟು ಮಕ್ಕಳಿಗೆ ತಂಗಳು ಬಡಿಸಿದ್ದೂ ಉಂಟು.

ಗುಂಡಪ್ಪನವರು, ಮೂಢನಂಬಿಕೆ ದೇಶಭಕ್ತಿ ಇತ್ಯಾದಿಗಳ ವಿಷಯವಾಗಿ ಎಲ್ಲರ ಬಳಿಯೂ ಚರ್ಚೆ ಮಾಡುವರು. ಮಕ್ಕಳಲ್ಲೂ ಚರ್ಚೆ, ಜಿಜ್ಞಾಸೆಗಳನ್ನು ಪ್ರೋತ್ಸಾಹಿಸು ತ್ತಿದ್ದರು. ಇಂತಹ ಅಭ್ಯಾಸವಿಲ್ಲದ ನೆಂಟರು ಅನೇಕವೇಳೆ ಇವರ ಮನೆಯಲ್ಲಿ ಬಲುಚರ್ಚೆ ಎಂದೋ 'ಜಗಳ ಆಡುತ್ತಾರೆ' ಎಂದೋ ತಪ್ಪು ಭಾವಿಸಿದ ಪ್ರಸಂಗಗಳೂ ಇದ್ದವು.

ಎಲ್. ಗುಂಡಪ್ಪನವರಿಗೆ ಏಳು ಜನ ಮಕ್ಕಳು. ಐವರು ಹೆಣ್ಣುಮಕ್ಕಳು ಇಬ್ಬರು ಗಂಡುಮಕ್ಕಳು. ಗುಂಡಪ್ಪ ದಂಪತಿಗಳು ಹೆಣ್ಣು ಗಂಡು ಎಂಬ ತಾರತಮ್ಯವನ್ನು ತೋರದೆ, ಎಲ್ಲರಿಗೂ ಸಮಾನವಾದ ವಿದ್ಯೆ ಕೊಡಿಸಿದರು. ಎಲ್ಲರೂ, ಎಂ.ಎಸ್.ಸಿ. ಪಿ.ಎಚ್.ಡಿ., ಎಂ.ಎ. ಹೀಗೆ ಉನ್ನತ ಪದವಿಗಳನ್ನು ಪಡೆದಿದ್ದಾರೆ.



ಆಕಾಶವಾಣಿ ಸಂದರ್ಶನ
ಎನ್. ಅನಂತರಂಗಾಚಾರ್,
ರಾವ್ ಬಹದ್ದೂರ್



ಪ್ರೊ. ದವ್ರೇಜ ಅವರೊಡನೆ






ನಾಗರಕೋಯಿಲ್‌ನಲ್ಲಿ ತಮಿಳು ಪ್ರಶಸ್ತಿ ಸ್ವೀಕಾರ



ಮಾಸ್ತಿ ಅವರೊಡನೆ



ಷಷ್ಟಬ್ದ ಸಮಾರಂಭದಲ್ಲಿ



ಪರಿಷತ್ತಿನಲ್ಲಿ

ಮೊದಲು ಮೂವರು ಪುತ್ರಿಯರು 'ಎಲ್. ಜಿ. ಸಹೋದರಿಯರು' ಎಂಬ ಹೆಸರಿನಲ್ಲಿ ಜನಪದ ಗೀತೆಗಳ ಹಾಡುಗಾರಿಕೆಯನ್ನು ಕರ್ನಾಟಕದಲ್ಲೆಲ್ಲ ಜನಪ್ರಿಯಗೊಳಿಸಿದವರಲ್ಲಿ ಮೊದಲಿಗರು. ಗಂಡು ಮಕ್ಕಳಲ್ಲಿ ದೊಡ್ಡವನು ಎಲ್. ಜಿ. ಅಮೃತೇಶ್ವರ . ಮಕ್ಕಳಿಗಾಗಿ ವೈಜ್ಞಾನಿಕ ಕಥೆಗಳನ್ನು ಬರೆದನು. ಕಿರಿಯ ಮಗ ಎಲ್. ಜಿ. ಜ್ಯೋತೀಶ್ವರ ಒಳ್ಳೆ ಕಾಂಪೇರ್ ನಿರೂಪಕ.

ಎಲ್. ಗುಂಡಪ್ಪನವರು ತಮ್ಮ ನಡೆ-ನುಡಿಗಳಿಂದಲೇ ಮಕ್ಕಳಿಗೆ ಮೇಲ್ಪಂಕ್ತಿ ಹಾಕಿ ಕೊಟ್ಟವರು. ಎಷ್ಟು ಪಾಂಡಿತ್ಯವಿತ್ತೋ ಅಷ್ಟೇ ಸರಳ ನಡತೆ. ವ್ಯಕ್ತಿಯ ಗೌರವ ಅವರು ಧರಿಸುವ ಬಟ್ಟೆಯಲ್ಲಿ, ಅವರು ವಾಸಿಸುವ ಮನೆಯ ಅಗಾಧತೆಯಲ್ಲಿ ಅವರ ಶ್ರೀಮಂತಿಕೆಯಲ್ಲಿ ಇಲ್ಲ, ಬದಲಾಗಿ ಅವರ ನಡವಳಿಕೆಯಲ್ಲಿ ಸುಸಂಸ್ಕೃತ ಸ್ವಭಾವದಲ್ಲಿ ಹೃದಯ ಶ್ರೀಮಂತಿಕೆಯಲ್ಲಿ ಅಡಗಿದೆ ಎಂಬುದನ್ನು ತೋರಿಸಿಕೊಟ್ಟರು. ಇದು ಅವರ ಮಕ್ಕಳೆಲ್ಲರಿಗೂ ದಾರಿದೀಪವಾಗಿದೆ.

ತಮ್ಮ ಹೆಣ್ಣು ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ನೀಡಿದ್ದೇ ಅಲ್ಲದೆ, ಅವರಿಗೆ ಉದ್ಯೋಗ ಅರಸಿಕೊಂಡು ದೂರದೂರದ ಊರುಗಳಿಗೆ ಹೋಗಲೂ ಅವಕಾಶ ಕೊಟ್ಟರು. ಹೋದ ಕಡೆ ತಮ್ಮ ಕಾಲ ಮೇಲೆ, ತಮ್ಮ ಬುದ್ಧಿ ಬಲದ ಮೇಲೆ ನಿಲ್ಲುವಂತಹ ಮಾನಸಿಕ ಶಿಕ್ಷಣ ಕೊಟ್ಟರು. ಈ ವಿಷಯದಲ್ಲಿ ಅವರನ್ನು ಸ್ತ್ರೀವಾದಿ ಎನ್ನಬಹುದು.

ಮನೆಯಲ್ಲಿ ಸಾಧ್ಯವಾದಾಗಲೆಲ್ಲ ಗೃಹಕೃತ್ಯಗಳಲ್ಲಿ ನೆರವು ನೀಡುತ್ತಿದ್ದರು. ಅವರ ಸಂಪರ್ಕದಲ್ಲಿದ್ದ ಎಲ್ಲ ಕವಿಗಳೂ, ಸಾಹಿತಿಗಳೂ, ಕಲಾವಿದರೂ ಶಾರದಮ್ಮನವರ ಉಪಚಾರದ ಸವಿಯನ್ನು ಕಂಡವರೇ. ಶ್ರೀಯುತರಾದ ತೀ. ತಾ. ಶರ್ಮ, ಜಿ.ಪಿ. ರಾಜರತ್ನಂ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ, ಪು.ತಿ.ನ. , ತೀನಂ.ಶ್ರೀ - ಇವರೆಲ್ಲ ಶಾರದಮ್ಮನವರಲ್ಲಿ ವಿಶ್ವಾಸವಿಟ್ಟಿದ್ದವರು. ಅವರು ಕಾಲವಶರಾದಾಗ ತಮ್ಮ ಆತ್ಮೀಯರೊಬ್ಬರನ್ನು ಕಳೆದುಕೊಂಡಂತೆ ದುಃಖಿಸಿದರು.

ಗುಂಡಪ್ಪನವರು ಕೆಲಸದಿಂದ ನಿವೃತ್ತಿ ಹೊಂದಿದವರೇ ಹೊರತು ಬರಹದಿಂದ ಅಲ್ಲ. ಅವರು ವಿಪುಲವಾದ ಸಾಹಿತ್ಯ ಸೃಷ್ಟಿಸಿದರು. ಅದಕ್ಕೆ ತಕ್ಕ ವಾತಾವರಣ ಕಲ್ಪಿಸಿಕೊಟ್ಟರು. ಮಕ್ಕಳಿಗೆ, ತಂದೆ ಯಾವಾಗಲೂ ಅಧ್ಯಯನ ಮಾಡುತ್ತಿದುದು ಸರ್ವೇ ಸಾಮಾನ್ಯವಾಗಿತ್ತು. ಮಕ್ಕಳ ಎಲ್ಲ ಆಗು ಹೋಗುಗಳ ಹೊಣೆ ಶಾರದಮ್ಮವರದು. ಎಷ್ಟೋ ಬಾರಿ ಗುಂಡಪ್ಪನವರಿಗೆ ತಮ್ಮ ಯಾವ ಮಗಳು ಯಾವ ಕ್ಲಾಸಿನಲ್ಲಿ ಓದುತ್ತಿದ್ದಾಳೆಂದು ತಿಳಿದಿರುತ್ತಿರಲಿಲ್ಲ.

ವಿದ್ವಾಂಸರ ಮಕ್ಕಳೂ ವಿದ್ವಾಂಸರೇ ಆಗಿರಬೇಕೆಂಬ ನಿಯಮವೇನೂ ಇಲ್ಲವಲ್ಲ! ಆದರೆ ಗುಂಡಪ್ಪನವರು ತಮ್ಮ ಸಾಹಿತ್ಯಕ ಸ್ನೇಹಿತರೊಂದಿಗೆ ನಡೆಸುತ್ತಿದ್ದ ಮಾತುಕತೆಗಳೇ ಮಕ್ಕಳಿಗೆ ಸಾಹಿತ್ಯಾಭ್ಯಾಸವಾಯಿತು. ಅವರ ಮಕ್ಕಳೆಲ್ಲ ಒಳ್ಳೆಯ ಬರಹಗಾರರೇ. ಆದರೆ ಹೊರಗಿನವರು ಮಕ್ಕಳು ತಂದೆಯ ಕೈಲಿ ಬರೆಸಿಕೊಂಡರೇನೋ ಎಂದು ಅನುಮಾನ ಪಡುತ್ತಿದ್ದರು. ಆದರೆ, ಗುಂಡಪ್ಪನವರು ಮಾತ್ರ ಸ್ವಾಧ್ಯಾಯವೇ ಉನ್ನತವಾದದ್ದು ಎಂದು ನಂಬಿದ್ದರಿಂದ ಎಂದೂ ತಮ್ಮ ಮಕ್ಕಳಿಗೆ ಪಾಠ ಹೇಳಲಿಲ್ಲ. ಅವರ ಬರವಣಿಗೆಯನ್ನೂ ತಿದ್ದಲಿಲ್ಲ. ಈ ರೀತಿ ತಂದೆ ತಾಯಿಯರಿಬ್ಬರೂ ಮಕ್ಕಳಲ್ಲಿ ಸ್ವಂತಿಕೆ ಬೆಳೆಸಿದರು.

ತಮ್ಮ ಮೂಲ ನಂಬಿಕೆಯ ಅನುಸಾರ ಗುಂಡಪ್ಪನವರು ತಮ್ಮ ಮಕ್ಕಳು ಸ್ವಾಲಂಬಿಗಳಾದ ಮೇಲೆಯೇ ಮದುಮೆ ಮಾಡಿಕೊಳ್ಳಬೇಕೆಂದು ಬಯಸಿದರು ಮತ್ತು ಹೆಣ್ಣು ಮಕ್ಕಳನ್ನು ಯಾವ ರೀತಿಯಲ್ಲೂ ಮದುವೆ ಆಗಲೇಬೇಕೆಂದು ಒತ್ತಾಯ ಮಾಡಲಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸಮಾಜದಲ್ಲಿ ಪ್ರತಿಷ್ಠಾಪಿತರಾಗಲು ಇದರಿಂದ ಅನುವಾಯಿತು.

ದಂಪತಿಗಳಿಬ್ಬರೂ ಜಾತಿಮತ ಕುಲ ಯಾವುದನ್ನೂ ಯಾರಲ್ಲೂ ಪ್ರಶ್ನಿಸುತ್ತಿರಲಿಲ್ಲ. ಮನೆಯ ಕೆಲಸದವರನ್ನು ಸ್ವಂತ ಮನೆಯವರಂತೆ ಆತ್ಮೀಯತೆಯಿಂದ ಆದರಿಸುವ ಪರಿಪಾಠ ಬೆಳೆಸಿದ್ದರು. ಶ್ರೀಮತಿ ಶಾರದಮ್ಮನವರು ತೀರಿಕೊಂಡಾಗ, ಬೀದಿಯಲ್ಲಿ ಹಣ್ಣು ಮಾರುವವರು, ಇಸ್ತ್ರಿ ಅಂಗಡಿಯವರು ಹೀಗೆ, ಅನೇಕರು ತಮ್ಮ ಶೋಕ ವ್ಯಕ್ತಪಡಿಸಿದರು.

ಕನ್ನಡ - ಕನ್ನಡ ನಿಘಂಟಿನ ಕೆಲಸದಿಂದ ಈಚೆ ಬಂದ ಮೇಲೆ ಶ್ರೀ ಗುಂಡಪ್ಪನವರು ಸಂಯುಕ್ತ ಕರ್ನಾಟಕದ ಶ್ರೀ ರಂಗನಾಥ ದಿವಾಕರ ಅವರ ಕೋರಿಕೆಯ ಮೇರೆಗೆ ಎರಡು ವರ್ಷ ಕಾಲ ಒಬ್ಬರೇ ಕೆಲಸ ಮಾಡಿ ಕನ್ನಡ ಭಾಷೆಯ ಮೊದಲ ಪತ್ರಿಕಾ ನಿಘಂಟನ್ನು ಸಿದ್ಧಪಡಿಸಿದರು.

ಇದಕ್ಕೂ ಮೊದಲು ಬಿ.ಎಂ. ಎಸ್. ಮಹಿಳಾ ಕಾಲೇಜಿನಲ್ಲಿ ಸಂಭಾವನೆ ಪಡೆಯದೆ ಕನ್ನಡ ಅಧ್ಯಾಪಕರಾಗಿ ದುಡಿದರು. ಈ ಎಲ್ಲ ಕೆಲಸಗಳ ಮಧ್ಯೆಯೂ ಅವರ ಬರವಣಿಗೆ ಅವ್ಯಾಹತವಾಗಿ ಸಾಗಿತ್ತು. ಅದರಲ್ಲಿ ಬಹುಮುಖ್ಯವಾದದ್ದೆಂದರೆ ಕುಮಾರವ್ಯಾಸನ 'ಕರ್ನಾಟಕ ಭಾರತ ಕಥಾ ಮಂಜರಿ' - ಕುಮಾರವ್ಯಾಸ ಭಾರತವನ್ನು ಗದ್ಯ ರೂಪದಲ್ಲಿ ಬರೆಯುವುದು. ಈ ಕಾರ್ಯಕ್ಕೆ ಅವರು ತಮ್ಮ ಎಂದಿನ

ಸ್ವಭಾವಕ್ಕೆ ತಕ್ಕಂತೆ ಹಗಲಿರುಳು ಶ್ರಮಿಸಿದರು. ಮಹಾಭಾರತದಲ್ಲಿ 18 ಪರ್ವಗಳಿರುವಂತೆ, ಕುಮಾರವ್ಯಾಸ ಭಾರತದ ಗದ್ಯ ರೂಪವನ್ನು ಪ್ರಕಟಿಸಲು ಅವರಿಗೆ 18 ವರ್ಷಗಳೇ ಹಿಡಿದವು. ಪುಸ್ತಕ ಬಿಡುಗಡೆಯಾಗಲು ಕೆಲವು ದಿನಗಳಿರುವಾಗಲೇ 1977ರಲ್ಲಿ ಅವರ ಪತ್ನಿ ಶಾರದಮ್ಮವರು ಹಠಾತ್ತನೆ ತೀರಿಕೊಂಡರು. ಸರ್ವ ವಿಧದಲ್ಲೂ ತಮಗೆ ಬೆಂಬಲ ಕೊಡುತ್ತಿದ್ದ ಹೆಂಡತಿಯ ಅಗಲಿಕೆಯಿಂದ ಗುಂಡಪ್ಪನವರು ಕಂಗೆಟ್ಟರು. ಮಕ್ಕಳ, ಮೊಮ್ಮಕ್ಕಳ ಸಾನಿಧ್ಯದಲ್ಲಿ ನಿಧಾನವಾಗಿ ಚೇತರಿಸಿಕೊಂಡರೂ ಮೊದಲಿನ ಲವಲವಿಕೆ ಮಾಯವಾಗಿತ್ತು.

ಮುಂದಿನ ದಿನಗಳನ್ನು ಅವರು ತಮ್ಮ ಮೂರನೆಯ ಮಗಳಾದ ಕಮಲಾ ಬಾಲುವಿನ ಜೊತೆ ಕಳೆದರು. ಹಿರಿಯ ಮಗಳು ಪ್ರೊ. ಎಲ್.ಜಿ. ಸುಮಿತ್ರಾ , ಎನ್.ಸಿ.ಇ. ಇ.ಆರ್.ಟಿಯಲ್ಲಿ ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದಳು. ಅವಳ ಜೊತೆ ಕಾಶ್ಮೀರಕ್ಕೆ ಹೋಗಿ ಬಂದರು. ಅಲಹಾಬಾದ್‌ನಲ್ಲಿದ್ದ ನಾಲ್ಕನೇ ಮಗಳು ವೀಣಾಳ ಜೊತೆ ಕಾಶಿಗೆ ಹೋಗಿ, ತಮ್ಮ ಪತ್ನಿಯ ಶ್ರಾದ್ಧಾದಿ ಕರ್ಮಗಳನ್ನು ತಾವೇ ಸ್ವತಃ ಮಾಡಿದರು. 1983ನೇ ಇಸವಿಯಲ್ಲಿ ಅಮೇರಿಕಾದಲ್ಲಿದ್ದ ತಮ್ಮ ಕಡೆಯ ಮಗಳು ಡಾ. ವಾಸಂತಿ ಅಮೇರಿಕಾದ ರಾಬರ್ಟ್ ಕಲೆಟನ್‌ನನ್ನು ವಿವಾಹವಾಗಲು ನಿಶ್ಚಯಿಸಿದಾಗ ತಮ್ಮ ಪೂರ್ಣ ಸಮ್ಮತಿ ನೀಡಿದರು. ಅಲ್ಲದೆ ತಾವೇ ಸ್ವತಃ ಫಿಲೆಡೆಲ್ಫಿಯಾಗೆ ಹೋಗಿ ಹಿಂದೂ ಹಾಗೂ ಪಾಶ್ಚಾತ್ಯ ಪದ್ಧತಿಗಳೆರಡರಲ್ಲೂ ಮಗಳನ್ನು ಮದುವೆ ಮಾಡಿ ಕೊಟ್ಟರು. 1983ರಲ್ಲಿ ಈ ಉದ್ದೇಶಕ್ಕೆಂದೇ ಹೋದವರು ಇನ್ನೊಬ್ಬ ಮಗಳು ವಿಮಲಾ ರಾಜಗೋಪಾಲ್ ಜೊತೆ ಒಂದು ವರ್ಷ ಇದ್ದು, ಅಮೇರಿಕಾ ನೋಡಿದರು.

ಆಗತಾನೇ ಬೆನ್ ಕಿಂಗ್ಸ್ಲ್ ನಟಿಸಿದ್ದ 'ಗಾಂಧಿ' ಚಲನ ಚಿತ್ರ ಪ್ರಪಂಚದ ಎಲ್ಲೆಡೆ ಪ್ರದರ್ಶಿತವಾಗುತ್ತಿತ್ತು. ಬೊಕ್ಕತಲೆ, ಖಾದಿ ವಸ್ತ್ರಧಾರಿ ಎಲ್. ಗುಂಡಪ್ಪನವರನ್ನು ಅಲ್ಲಿಯ ಜನ ಗಾಂಧಿ ಎಂದು ಗುರುತಿಸಿದರು. ಆಗ ಪ್ರೈಮರಿ ಸ್ಕೂಲ್‌ನಲ್ಲಿದ್ದ ಮೊಮ್ಮಗ ರಾಮ ತನ್ನ ಶಾಲೆಯ ಸಹಪಾಠಿಗಳಿಗೆ ತಮ್ಮ ಮನೆಯಲ್ಲಿ ಗಾಂಧಿಯನ್ನು ತೋರಿಸುವ ಕಾರ್ಯಕ್ರಮವನ್ನೇ ಇಟ್ಟುಕೊಂಡಿದ್ದ. ಅವರು ಅಧ್ಯಯನ ನಿರತರಾಗಿ ಸೋಫಾ ಮೇಲೆ ಕುಳಿತಿದ್ದರು. ಮೊಮ್ಮಗ ರಾಮ ತನ್ನ ಸ್ನೇಹಿತರನ್ನು ಒಬ್ಬೊಬ್ಬರನ್ನಾಗಿ ಒಳಕ್ಕೆ ಕಳಿಸಿ 'go see Gandhi' ಎನ್ನುತ್ತಿದ್ದ. ಮಕ್ಕಳಿಗೆಲ್ಲ ತಾವು ಗಾಂಧಿ ನೋಡಿದೆವೆಂದು ಖುಷಿಯೋ ಖುಷಿ - ಸದ್ದು ಮಾಡದೆ ಸಾಲಾಗಿ ಒಂದು ಬಾಗಿಲಿನಿಂದ ಬಂದು ಗಾಂಧಿ ದರ್ಶನ ಮಾಡಿ ಇನ್ನೊಂದು ಬಾಗಿಲಿಂದ ನಿರ್ಗಮಿಸಿದರು ಮಕ್ಕಳು.

ಅಮೇರಿಕಾದಲ್ಲಿದ್ದ ಕಾಲದಲ್ಲಿ ಎಲ್. ಗುಂಡಪ್ಪನವರು ಅಲ್ಲಿನ ಪುಸ್ತಕ ಭಂಡಾರಗಳ ಸದುಪಯೋಗ ಮಾಡಿಕೊಂಡು ಮ್ಯಾಕ್ಸ್ ಮುಲ್ಲರ್ ಇಂಗ್ಲಿಷ್‌ಗೆ ಭಾಷಾಂತರ ಮಾಡಿದ್ದ ಋಗ್ವೇದದ ಸಂಪುಟಗಳನ್ನು ಓದಿದರು. ಗೆಟ್ಟಿಸ್ ಬರ್ಗ್‌ಗೆ ಹೋಗಿದ್ದಾಗ, ಗೈಡ್‌ಗಿಂತ ಹೆಚ್ಚಾಗಿ ಸುತ್ತಲಿನವರಿಗೆ ಅವರ ದೇಶದ ಬಗ್ಗೆ ತಾವೇ ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡಿದರು. ತಾವು ಚರಿತ್ರೆಯನ್ನು ಕಂಡೆ ಎಂದು ಭಾರತಕ್ಕೆ ಹಿಂದಿರುಗಿದ ಮೇಲೆ ಹೇಳಿಕೊಂಡರು.

ಪತ್ನಿ ತೀರಿಕೊಂಡ ಸಂದರ್ಭದಲ್ಲಿ ಅವರಿಗೆ ಮನಸ್ಸಿನ ನೋವನ್ನು ತಾಳಿಕೊಳ್ಳಲು ಸಹಾಯಕವಾದ ಮತ್ತೊಂದು ಅಂಶವೆಂದರೆ, ರಮಣ ಮಹರ್ಷಿಗಳ ರಚನೆಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದು. ಅದಕ್ಕಾಗಿ ಅವರು ಸಂಭಾವನೆ ತೆಗೆದುಕೊಳ್ಳಲು ನಿರಾಕರಿಸಿದರು. ಆದರೆ ರಮಣ ಸಂಘದ ವ್ಯವಸ್ಥಾಪಕರು ಬಲವಂತ ಮಾಡಿದ್ದರಿಂದ ಕೇವಲ 200 ರೂಪಾಯಿಗಳನ್ನು ಸ್ವೀಕರಿಸಿದರು.

ಅಮೇರಿಕಾಕ್ಕೆ ಹೊರಟಾಗ ಗುಂಡಪ್ಪನವರಿಗೆ ಸ್ವಲ್ಪ ದೇಹಾಲಸ್ಯವಾಗಿತ್ತು. ಆದ್ದರಿಂದ ಅವರಿಗೆ ವಿಮಾನದಲ್ಲಿ ಇಳಿದು ಹತ್ತಿ ಮಾಡಲು ವಿಮಾನನಿಲ್ದಾಣದಲ್ಲಿ ಓಡಾಡಲು ವ್ಹೀಲ್ ಚೇರ್‌ನ ವ್ಯವಸ್ಥೆ ಮಾಡಿದ್ದರು ಅವರ ಮಕ್ಕಳು. ನ್ಯೂಯಾರ್ಕ್‌ನ ಕೆನಡಿ ಏರ್‌ಪೋರ್ಟ್‌ನಲ್ಲಿ ಮಗಳು ವಿಮಲಾ, ಅಳಿಯ ರಾಜಗೋಪಾಲ್, ಮೊಮ್ಮಕ್ಕಳು, ಮದುವೆ ಆಗಬೇಕಿದ್ದ ವಾಸಂತಿ ಎಲ್ಲರೂ ಇವರ ಬರುವನ್ನು ಆತಂಕದಿಂದ ಎದುರುನೋಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ಕಚ್ಚೆ ಪಂಚೆ ಉಟ್ಟಿದ್ದ ವಯಸ್ಸಾದವರೊಬ್ಬರು ಸರಸರ ಎಂದು ನಡೆದು ಬರುತ್ತಿದ್ದುದನ್ನು, ಅವರ ಹಿಂದೆ ಗೋಗರೆಯುತ್ತಾ ಖಾಲಿ ಗಾಲಿ ಕುರ್ಚಿ ತಳ್ಳಿಕೊಂಡು ಬರುತ್ತಿದ್ದ ಏರ್‌ಹೋಸ್ಟೆಸ್ ಅನ್ನೂ ನೋಡಿ ಇವರಿಗೆಲ್ಲಾ ಹಿಡಿಸಲಾರದಷ್ಟು ನಗು. ಎಲ್. ಗುಂಡಪ್ಪ ಅವರೆಲ್ಲರಲ್ಲೂ ದೂರಿದರು. 'ನಂಗೆ ಬೇಡ ಅಂದ್ರೂ ಈಕೆ ಒಂದೇ ಸಮನೆ ವ್ಹೀಲ್ ಚೇರ್‌ನಲ್ಲಿ ಕೂತ್ಕೊಳ್ಳಿ ನಿಮಗೆ ಕೈಲಾಗುಲ್ಲ ಅಂತಿದ್ದಾಳೆ. ನಾನೇನು ಅಷ್ಟು ಮುದುಕನೇ ?'

ಇದೇ ನಡಿಗೆಯನ್ನು ಅಮೇರಿಕಾದಲ್ಲಿ ತಪ್ಪದೇ ಅನುಸರಿಸಿದರು. ಪ್ರತಿದಿನ, ಮಗಳ ಮನೆಯ ಒಂದೊಂದು ದಿಕ್ಕಿಗೆ ಹೋಗಿ ಸುತ್ತಮುತ್ತಲವರನ್ನು ಪರಿಚಯ ಮಾಡಿಕೊಂಡರು. ವಿಮಲಳ ಮನೆ ಹತ್ತಿರವಿದ್ದ ಒಂದು ಸಾಕುನಾಯಿಗೆ ಎಲ್ಲರೂ ಹೆದರುತ್ತಿದ್ದರು. ಆದರೆ ಅದು ಗುಂಡಪ್ಪನವರೊಂದಿಗೆ ತುಂಬ ಸಾಧುವಾಗಿ ವರ್ತಿಸುತ್ತಿತ್ತು. ಅದಕ್ಕೆ ಅವರು ಕಾರಣ ವಿವರಿಸಿದರು.



ಅಮೇರಿಕಾದಲ್ಲಿ ಮಗಳು ವಾಸಂತಿ
ಮತ್ತು ರಾಬರ್ಟ್ ಕಲೆಟನ್ ಅವರ
ವಿವಾಹದ ಚಿತ್ರಗಳು









ಅಮೇರಿಕಾದಲ್ಲಿ ಮಗಳು ವಾಸಂತಿ
ಮತ್ತು ರಾಬರ್ಟ್ ಕಲೆಟನ್ ಅವರ
ವಿವಾಹದ ಚಿತ್ರಗಳು







''ಮೂರು ಹೊತ್ತೂ ಕಟ್ಟಿ ಹಾಕಿದ್ದರೆ, ಪಾಪ ಹ್ಯಾಗೆ ಏನು ತಾನೇ ಮಾಡೀತು? ಅದಕ್ಕೂ ತಾನು ಒಂಟಿ ಎನ್ನಿಸುವುದಿಲ್ಲವೇ ? ನಾನು ಕನ್ನಡದಲ್ಲಿ ಮಾತನಾಡುತ್ತೇನೆ. ಅದು ಅಲಿಸುತ್ತ ಅಷ್ಟೆ ''

ಗುಂಡಪ್ಪನವರು ತಮ್ಮ ಕೆಲವು ಮೊಮ್ಮಕ್ಕಳಿಗೆ ಗಾಂಧಿ ತಾತನಂತೆ ಕಂಡರೆ, ಮತ್ತೆ ಕೆಲವರಿಗೆ 'ಡಿಕ್ಷನರಿ ತಾತ' ಅವರ ಮೂರನೇ ಮಗಳ ಕಿರಿಯ ಮಗಳು ತಾನು ಶಾಲೆಗೆ ಹೋಗುವ ಮೊದಲು ತಾತನಿಗೆ ಸ್ಲೇಟ್‌ನಲ್ಲಿ 'ಅ ಆ ಇ ಈ' ಬರೆದು ಕೊಟ್ಟು ತಾನು ಹಿಂದಿರುಗುವಷ್ಟರಲ್ಲಿ ಅವರು ತಿದ್ದಿಟ್ಟಿರಬೇಕೆಂದು ಕಟ್ಟಪ್ಪಣೆ ಮಾಡುತ್ತಿದ್ದಳು. ಅವರೂ ಕೂಡ ಮಗುವಿಗೆ ಮನಸ್ಸಿಗೆ ನೋವಾಗಬಾರದೆಂದು ತಪ್ಪದೆ ಅಆಇಈ A.B.C.D ತಿದ್ದುತ್ತಿದ್ದರು. ಶಾಲೆಯಿಂದ ಬಂದ ಮೇಲೆ ಮೊಮ್ಮಗಳು ಮತ್ತಷ್ಟು ಕನ್ನಡ ಇಂಗ್ಲಿಷ್ ಹೇಳಿಕೊಡುತ್ತಿದ್ದಳು. ಇವರೂ ಶ್ರದ್ಧೆಯಿಂದ ಕಲಿಯುತ್ತಿದ್ದರು. ಅನಂತರ ಒಂದು ದಿನ, ತನಗೆ ಎರಡೂ ಭಾಷೆಗಳೂ ಸ್ವಲ್ಪ ಚೆನ್ನಾಗಿ ಓದುವ ಸಾಮರ್ಥ್ಯ ಬಂದ ಮೇಲೆ ಆ ಮೊಮ್ಮಗಳು ಯಾವುದೋ ಪದದ ಅರ್ಥ ಹುಡುಕಲು ಇಂಗ್ಲಿಷ್ - ಕನ್ನಡ ಡಿಕ್ಷನರಿ ತೆಗೆದಳು. ಅಲ್ಲಿ ತಾತನ ಹೆಸರು ಕಂಡು ವಿಪರೀತವಾಗಿ ಆಶ್ಚರ್ಯಪಟ್ಟಳು. ವಿದ್ಯೆ ಹಂಚುವ ಕೆಲಸವನ್ನು ಯಾವ ಹಂತದಲ್ಲಾರೂ ಸರಿ, ಯಾರಿಂದಲಾದರೂ ಸರಿ ಪ್ರೋತ್ಸಾಹಿಸಬೇಕೆನ್ನುವ ಮನೋಭಾವ ಗುಂಡಪ್ಪನವರದು.

ಸರಳತೆ, ದೈವಭಕ್ತಿ, ಕ್ಷಮಾಗುಣ ಎಲ್ಲವನ್ನೂ ಜೀವನದ ಉದ್ದಕ್ಕೂ ವ್ರತದಂತೆ ಪಾಲಿಸಿದರು. ತಮಗೆ ತಿಳಿದೋ ತಿಳಿಯದೆಯೋ ಕೇಡು ಬಗೆದವರನ್ನು, ದ್ವೇಷಿಸದೆ, ಅವರು ಮನಸಾ ಕ್ಷಮಿಸಿದರು. ಅವರು, ಎಂದು ಯಾರನ್ನೂ ಅವರ ಬೆನ್ನ ಹಿಂದೆ ಆಡಿಕೊಳ್ಳಲಿಲ್ಲ, ಅಪವಾದಗಳನ್ನು ಹರಡಲಿಲ್ಲ, ಚಾರಿತ್ರ್ಯವಧೆ ಮಾಡಲಿಲ್ಲ, ತಮ್ಮ ದೊಡ್ಡಸ್ತಿಕೆ ಮೆರೆಯದೆ, ತಮಗೆ ದೊರಕಬೇಕಾಗಿದ್ದ ಅನೇಕ ಪದವಿ ಗೌರವಗಳನ್ನು ಬಿಟ್ಟುಕೊಟ್ಟರು. ಕೀರ್ತಿಯ ಬೆನ್ನು ಹತ್ತಲಿಲ್ಲ, ಸ್ವಂತ ಬಂಧುಗಳೂ ಕೂಡ ಎಸಗಿದ ದ್ರೋಹಗಳನ್ನು ಬುದ್ಧಿಪೂರ್ವಕವಾಗಿ ಕಡೆಗಣಿಸಿದರು. ವಿದ್ವತ್ ಕ್ಷೇತ್ರದಲ್ಲಿ ಮಾನ್ಯತೆ ಸಿಗದೆ ಕಡೆಗಣಿಸಲ್ಪಟ್ಟಾಗ ಆದ ನೋವುಗಳಲ್ಲೆಲ್ಲ ಅವರು ತೋರಿಸಿದ ಸ್ಥಿತಪ್ರಜ್ಞತೆ ಅಪೂರ್ವವಾದುದು.

ಮೂರನೆಯ ಮಗಳ ಮನೆಯಲ್ಲಿ ಅವಳ ಮಾವನವರೂ ಇದ್ದರು. ಇಬ್ಬರು ಬೀಗರದ್ದು ತದ್ವಿರುದ್ಧವಾದ ವ್ಯತಿರೇಕ ಸ್ವಭಾವಗಳು. ಶಾಂತ ಪ್ರಕೃತಿಯ ಗುಂಡಪ್ಪನವರನ್ನು, ಮೂಗಿನ ತುದಿಯಲ್ಲೇ ಕೋಪ ಇರುತ್ತಿದ್ದ ಅಷ್ಟು

ವಿದ್ಯಾವಂತರಲ್ಲದ ಲೌಕಿಕರಾದ ಬೀಗರು ಅನೇಕ ಬಾರಿ ವಿದ್ವತ್ತಿನ ವಿಚಾರದಲ್ಲಿ ಕೆಣಕುತ್ತಿದ್ದರು. ಗುಂಡಪ್ಪನವರು ತಾಳ್ಮೆಯಿಂದ ಪ್ರತಿಯೊಂದಕ್ಕೂ ಉತ್ತರ ಕೊಡುತ್ತಿದ್ದರು. ಇಬ್ಬರೂ ಎಷ್ಟೋ ಸಲ ಮಧ್ಯರಾತ್ರಿಯವರೆಗೆ ವ್ಯರ್ಥ ಚರ್ಚೆ ನಡೆಸಿದ್ದುಂಟು. ಆದರೂ ಇಬ್ಬರ ನಡುವೆ ಒಂದು ರೀತಿಯ ಸ್ನೇಹ ಏರ್ಪಟ್ಟಿತ್ತು. ಬೀಗರಾದ ಶ್ರೀ ಸುಬ್ಬರಾಯರು ಕೂಡ ಇದ್ದಕ್ಕಿದ್ದ ಹಾಗೆ ತೀರಿಕೊಂಡಾಗ ಗುಂಡಪ್ಪನವರು ಸ್ವಲ್ಪ ವಿಚಲಿತರಾದರು. ಆಗ ಅವರಿಗೆ 83ರ ಇಳಿವಯಸ್ಸು. ಮನಸ್ಸು ಒಂದು ರೀತಿಯ ಸಮಾಧಾನವನ್ನು ಸಾಧಿಸಿತ್ತು. ಆ ಇಳಿವಯಸ್ಸಿನಲ್ಲೂ ಪ್ರತಿದಿನ ಸಂಧ್ಯಾವಂದನೆ, ವಾಕಿಂಗ್ ನಿಲ್ಲಿಸಿರಲಿಲ್ಲ. ಗಹನವಾದ ಗ್ರಂಥಗಳನ್ನು ಬಿಟ್ಟು ಮೊಮ್ಮಕ್ಕಳೊಂದಿಗೆ ಹುರುಡು ಕಟ್ಟಿಕೊಂಡು ಮಕ್ಕಳ ಸಾಹಿತ್ಯ ಓದುತ್ತಿದ್ದರು. ಆಗಲೂ ಕೂಡ ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಳ್ಳುತ್ತಿದ್ದರು. ತಾವು ಊಟ ಮಾಡಿದ ತಟ್ಟೆಯನ್ನು ಕೂಡ ತಾವೇ ತೊಳೆದಿಡುತ್ತಿದ್ದರು. ಸದ್ದು ಗದ್ದಲವಿಲ್ಲದೆ, ತಮ್ಮ ನಡೆ ನುಡಿಯಲ್ಲಿ ತಾವು ಅಧ್ಯಯನ ಮಾಡಿದ ಎಲ್ಲ ಮಹಾನುಭಾವರ ಬೋಧನೆಗಳನ್ನು ಆಚರಣೆಗೆ ತಂದು ಕೊಂಡಿದ್ದರು.

ಕಾಲವಾಗುವುದಕ್ಕೆ ಸುಮಾರು ಎರಡು ವಾರಗಳ ಮುಂಚೆ ಮಗಳೊಂದಿಗೆ ಮಾತನಾಡುತ್ತಾ 'ನಾನು ಎಲ್ಲ ರೀತಿಯ ಜಪ ತಪ ಅನುಷ್ಠಾನ ಮಾಡಿ ನೋಡಿದ್ದೇನೆ. ಮಡಿ-ಹುಡಿ ಆಚರಿಸಿದ್ದೇನೆ. ಶ್ರಾದ್ಧಾದಿ ಕರ್ಮಗಳನ್ನು ಭಕ್ತಿಯಿಂದ ಮಾಡಿದ್ದೇನೆ. ವೇದಗಳ ಸಾರವನ್ನು ಅರಿತುಕೊಂಡಿದ್ದೇನೆ. ಈ ಎಲ್ಲ ಕಾರ್ಯಗಳ ಗುರಿ ಒಂದೇ, ಜೀವನದಲ್ಲಿ ತೃಪ್ತಿ. ಅದೇ ಮೋಕ್ಷ. ನೀನೂ ಅಷ್ಟೇ ಭಗವಂತನನ್ನು ಭಕ್ತಿಯಿಂದ ನೆನೆದುಕೊಂಡು ಇದ್ದಲ್ಲೇ ನಮಸ್ಕರಿಸು ನಿನಗೆ ಒಳ್ಳೆಯದಾಗುತ್ತದೆ' ಎಂದು ಹೇಳಿದರು.

ಇದಾದ ಕೆಲವು ದಿನಗಳಲ್ಲೇ ಬೆಳಿಗ್ಗೆ ಎದ್ದು ಅಳಿಯನ ಜೊತೆ ಕಾಪಿ ಕುಡಿಯುತ್ತಾ, ಪೇಪರ್ ಓದಲು ಹವಣಿಸುತ್ತಿದ್ದಾಗ ಇದ್ದಕ್ಕಿದ್ದ ಹಾಗೆ ಕುಸಿದು ಬಿದ್ದರು. ಹೋದ ಜ್ಞಾನ ಬರಲಿಲ್ಲ. ಆದರೆ, ಬಾಯಲ್ಲಿ ಮಂತ್ರ, ಕೈನಲ್ಲಿ ಕರನ್ಯಾಸ ಅಸ್ಪಷ್ಟವಾಗಿ ನಡೆಯುತ್ತಿತ್ತು.

ಶರಣರ ಜೀವನ ಮರಣದಲ್ಲಿ ಕಾಣು ಎನ್ನುವ ಹಾಗೆ

ಎಲ್. ಗುಂಡಪ್ಪ ಕೊನೆಯುಸಿರೆಳೆದರು.

ಏಸಾ ದೈನ್ಯೇನ ಜೀವನಂ
ಅನಾಯಾಸೇನ ಮರಣಂ
ಎಂಬ ಮಂತ್ರವನ್ನು ಅಕ್ಷರಶಃ ಸಾಧಿಸಿದ ಪುಣ್ಯಜೀವಿ ಎಲ್. ಗುಂಡಪ್ಪನವರು.

ಸ್ವಂತ ರಚನೆಗಳು

ಎಲ್. ಗುಂಡಪ್ಪನವರು ತಾವು ಏಕೆ ಬರೆಹವನ್ನು ಆರಿಸಕೊಂಡರು ಎಂಬುದನ್ನು ಸೊಗಸಾಗಿ ಒಂದು ಕವನದಲ್ಲಿ ವರ್ಣಿಸಿಕೊಂಡಿದ್ದಾರೆ. 'ನಾ ಬರೆಯುವುದೇಕೆ?' ಎಂಬ ಶೀರ್ಷಿಕೆಯ ಪದ್ಯವನ್ನು 1923ರಲ್ಲಿ ತಾತಯ್ಯನವರ ಸಾಧ್ವಿ ಪತ್ರಿಕೆಗೆ ಕಳಿಸಿದ್ದರು.

ಏಕೆ ಬರೆಯುವೆಯೆಂದು ಕೇಳಲ
ದೇಕೆ ? ದಿನ ದಿನ ಮೂಡಿ ಬೆಳೆ ಬೆಳೆ
ದೌಕಿ ಮನವನು ಮೀರಿ ಹರಿವುದು ಭಾವ ಕಾವೇರಿ
ನೂಕಿ ಹರಿವಾ ಹೊನಲಿಗಣೆಯನು
ಹಾಕಿ ತಡೆವರಾದಾರು ? ತಡೆಯಲು
ಲೋಕ ನಾಯಕಗರಿದು. ಕವಿ ಭಾವೈಕ್ಯ ಶರಣನಲ.

ಗುಂಡಪ್ಪನವರು ಚಿಕ್ಕಮಗಳೂರಿನಲ್ಲಿ ಹೈಸ್ಕೂಲಿನ ಪ್ರಕಟವಾಗುತ್ತಿದ್ದ 'ಸ್ಕೂಲ್‌ಫ್ಲೋಕ್' ಪತ್ರಿಕೆಗೆ ಪದ್ಯಗಳನ್ನು ಬರೆದು ಕಳಿಸುತ್ತಿದ್ದರೆಂದು ಅವರ ಸಹ ವಿದ್ಯಾರ್ಥಿಯಾಗಿದ್ದ ಶ್ರೀ ತೋವಿನಕೆರೆ ಸೀತಾರಾಮಜೋಯಿಸರು ತಿಳಿಸಿದ್ದಾರೆ. ಮೈಸೂರಿಗೆ ಕಾಲೇಜಿಗೆ ಹೋದ ಮೇಲೆ ಇಬ್ಬರೂ ಸ್ನೇಹಿತರಾದರು. ತಾವು ಅನೇಕ ವಿಧದಲ್ಲಿ ಗುಂಡಪ್ಪನವರಿಗೆ ಋಣಿಯಾಗಿದ್ದಾಗಿ ಅವರು ಹೇಳಿದ್ದಾರೆ. ಎಷ್ಟೋ ಸಲ ಚಾಮುಂಡಿ ಬೆಟ್ಟದ ಬಂಡೆಯ ಮೇಲೋ ಅಥವಾ ಕುಕ್ಕನಹಳ್ಳಿಯ ಕೆರೆಯ ಬಯಲಿನಲ್ಲೋ ಕುಳಿತು ಕಾಳಿದಾಸ, ಬಾಸ ಮೊದಲಾದವರ ಸಂಸ್ಕೃತ ನಾಟಕಗಳನ್ನು ಜೊತೆಯಾಗಿ ಅಧ್ಯಯನ ಮಾಡಿ ಅದರ ಬಗ್ಗೆ ಟೀಕೆಗಳನ್ನು ಇಂಗ್ಲಿಷ್‌ನಲ್ಲಿ ಬರೆದು ವಿನಿಮಯ ಮಾಡಿಕೊಳ್ಳುತ್ತಿದ್ದರಂತೆ. ಹೀಗೆ ಕಿರಿಯ ವಯಸ್ಸಿನಲ್ಲಿ ಆರಂಭವಾದ ಕಾವ್ಯ ಸಾಹಿತ್ಯ ರಚನಾಸಕ್ತಿ ಗುಂಡಪ್ಪನವರನ್ನು ವಿದ್ವಾಂಸರನ್ನಾಗಿ. ಬರಹಗಾರರನ್ನಾಗಿ ರೂಪಿಸಿತು.

ಸಾಹಿತ್ಯಕ್ಕೆ ಶಾಶ್ವತವಾದ ಒಂದು ಬೆಲೆಯಿದೆ,ಶಕ್ತಿಯಿದೆ ಎಂದು ಅವರು ನಂಬಿದ್ದರು. ಅದನ್ನು ಅರಿತು ಗುರುತಿಸಿ ಬೆಳೆಸಿಕೊಳ್ಳುವುದು ಸಾಹಿತ್ಯ ವ್ಯಾಸಂಗದ ಗುರಿ ಹಾಗೂ ಜನದ ಕರ್ತವ್ಯ ಎಂದೂ ಕೂಡ ಅವರು ಭಾಷಿಸಿದ್ದರು. 'ಬಹು ಹಳೆಯ ಸಾಹಿತ್ಯ ಬಹು ಜನಕ್ಕೆ ನಿಲುಕದು ಅದು ನೆಲದೊಳಗೆ ಮರೆಯಾಗುವ ಮರದ ಬೇರಿನಂತೆ. ಈ ಬೇರನ್ನು ಜನ ಮರೆಯುವುದು ಸಹಜ. ಆದ್ದರಿಂದ ಹಳೆಯ ಸಾಹಿತ್ಯವನ್ನು ಜನರಿಗೆ ಪರಿಚಯ ಮಾಡಿಸಿಕೊಡಬೇಕೆಂಬ ಅವರ ಉದ್ದೇಶ ಎಲ್. ಗುಂಡಪ್ಪನವರನ್ನು 'ಕನ್ನಡ ಸಾಹಿತ್ಯ ಚಿತ್ರಗಳು' ಎಂಬು ಪುಸ್ತಕಗಳನ್ನು ಬರೆಯಲು ಪ್ರೇರೇಪಿಸಿತು.

ಕನ್ನಡದ ಹಳೆಯ ಸಾಹಿತ್ಯರಾಶಿಯಿಂದ ಅದರ ನಾನು ಮುಖಗಳೂ ತೋರಿ ಬರುವಂತೆ ಸುಮಾರು ನೂರು ಚಿತ್ರಗಳನ್ನು ಆಯ್ದು ಪರಿಚಯಿಸಬೇಕೆಂಬ ಗುರಿ ಇಟ್ಟುಕೊಂಡಿದ್ದರು. ಪ್ರಕಟಿಸಿದ್ದು ಈ ಮಾಲಿಕೆಯಲ್ಲಿ - 3 ಪುಸ್ತಕಗಳನ್ನು ಕನ್ನಡ ಸಾಹಿತ್ಯ ಚಿತ್ರಗಳು - ಮೊದಲನೆಯ ಸಾಲು 10 ಕಥೆಗಳನ್ನು ಹೊಂದಿದೆ. 1945ರಲ್ಲಿ ಪ್ರಕಟವಾದ ಈ ಕೃತಿ ಮೂರು ಮುದ್ರಣಗಳನ್ನು ಕಂಡಿತು. ಮೂರನೇ ಮುದ್ರಣ 1950ರಲ್ಲಿ ಹೈಸ್ಕೂಲ್‌ಎರಡನೇ ತರಗತಿಗೆ - ಅಂದರೆ ಈಗಿನ 9ನೇ ಸ್ಟಾಂಡರ್ಡ್‌ಗೆ ಪಠ್ಯಪುಸ್ತಕವಾಯಿತು.

ಕನ್ನಡ ಸಾಹಿತ್ಯ ಚಿತ್ರಗಳು -ಮೂರನೆಯ ಸಾಲು - ಭಾರತದ ನಾಯಕ ಮಣಿಗಳು - ಇದರಲ್ಲಿ ಮಹಾಭಾರತದಲ್ಲಿ ಬರುವ ವೀರರ ಕಥೆಗಳಿವೆ.

ಎಲ್ ಗುಂಡಪ್ಪನವರ ಸ್ವಂತ ಕೃತಿಗಳಲ್ಲಿ ಪದ್ಯಗಳು, ಪ್ರಬಂಧಗಳು, ರೂಪಕ, ಭಾಷಣ, ತುಲನಾತ್ಮಕ ಪ್ರೌಢಲೇಖನ ಮುಂತಾದವು ಸೇರಿವೆ.

ಎಲ್.ಗುಂಡಪ್ಪನವರು ಕನ್ನಡ ನಾಡಿನಾದ್ಯಂತ ಸುಪ್ರಸಿದ್ಧಿರಾಗಿದ್ದು, ತಮ್ಮ 'ಚಟಾಕಿ' ಕವನದಿಂದ.

'ಅಪ್ಪನ ಜೇಬಿನ ದುಡ್ಡುಗಳೆಲ್ಲ ಚಟಪಟ ಗುಟ್ಟುತ ಸಿಡಿಯುವುವು''

ಒಪ್ಪದ ನೀತಿಯ ಮಾತುಗಳೆಲ್ಲ ತಟ್ಟನೆ ದಾರಿಯ ಹಿಡಿಯುವುವು

'ಚಟಾಕಿ' ಮೇಲಿನ ಪದ್ಯವನ್ನು ಪ್ರಾಥಮಿಕ ಶಾಲಾ ಮಕ್ಕಳು ಅವರ ಸ್ವಂತ ಮಕ್ಕಳೂ ಸೇರಿದಂತೆ ನಾಡಿನಾದ್ಯಂತ ಓದಿ, ಬಾಯಿಪಾಠ ಮಾಡಿ ನಲಿದಿದ್ದಾರೆ. ಈ ಕವನ 'ಚಟಾಕಿ ಮತ್ತು ಇತರ ಕವನಗಳು' ಎಂಬ ಕವನ ಸಂಗ್ರಹದಲ್ಲಿದೆ. ಈ

ಸಂಗ್ರಹದಲ್ಲಿದ್ದ ವಿಧವೆ, ಮಲೆನಾಡ ಹುಡುಗಿ, ಅಕ್ಕ, ಎಲಿಯಂಬೆಲ್, ದೇವನ ಹರಿಕಾರರು ಇವೇ ಮುಂತಾದ ಕೃತಿಗಳು ಜನಪ್ರಿಯವಾದುವಲ್ಲದೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಚಾರ್ಯ 'ಶ್ರೀ'ಯವರಿಗೆ ವಿದ್ಯಾರ್ಥಿಗಳು ಅರ್ಪಿಸಿದ 'ಕಿರಿಯ ಕಾಣಿಕೆ' ಯಲ್ಲಿಯೂ, ಇತರ ಅನೇಕ ಸಂಕಲನಗಳಲ್ಲಿಯೂ ಪ್ರಕಟವಾಗಿವೆ.

'ಕನ್ನಡ ಸೇವೆ' ಪ್ರಬಂಧ ಸಂಕಲನವನ್ನು ಎಲ್. ಗುಂಡಪ್ಪನವರು ತಮ್ಮದೇ ಆದ 'ಜ್ಯೋತಿ ಗ್ರಂಥಮಾಲೆ'ಯಲ್ಲಿ ಪ್ರಕಟಿಸಿದ್ದಾರೆ. ಇದೂ ಸಹ ಎರಡು ಮುದ್ರಣಗಳನ್ನು ಕಂಡಿದೆ. ಇದರಲ್ಲಿ 9 ಪ್ರಬಂಧಗಳಿವೆ. ತಾವು ತಮಿಳು ಕಲಿತು ಭಾಷಾಂತರ ಕಾರ್ಯ ಆರಂಭಿಸದ್ದು ಹೇಗೆ ಎನ್ನುವುದನ್ನು 'ಕನ್ನಡ -ಸೇವೆ' ಎಂಬ ಶೀರ್ಷಿಕೆಯ ಪ್ರಬಂಧದಲ್ಲಿ ವಿವರಿಸಿದ್ದಾರೆ.

'ಭಾಷಾಂತರ ಕಲೆ' ಎನ್ನುವ ಪ್ರಬಂಧದಲ್ಲಿ ತಾವು ಭಾಷಾಂತರ ಮಾಡುವಾಗ ಅನುಸರಿಸಿದ ಸೂತ್ರಗಳನ್ನು ವಿಧಾನಗಳನ್ನು ಪ್ರಸ್ತಾಪಿಸಿದ್ದಾರೆ. ಸ್ವಂತ ಇಚ್ಛೆಯಿಂದಲೋ ಸಂದರ್ಭ ಸನ್ನಿವೇಶಗಳ ಒತ್ತಡದಿಂದಲೋ ಅವರ ಲೇಖನ ವ್ಯವಸಾಯದಲ್ಲಿ ಬಹುಭಾಗ ಭಾಷಾಂತರಕ್ಕೇ ಮೀಸಲಾಗಿದೆ.

'ಸರಸ್ವತಿಯ ಪೂಜಾರೂಪವಾದ ಸಾಹಿತ್ಯಸೇವೆಯಲ್ಲಿ ಭಾಷಾಂತರಕಾರನು ಮಾಡುವುದು ದೇವಿ ಮುಖ ನೋಡಿಕೊಳ್ಳಲು ಕನ್ನಡಿ ಹಿಡಿಯುವ ಕೈಂಕರ್ಯ' ಎಂದಿರುವ ಗುಂಡಪ್ಪನವರು 'ಭಾಷಾಂತರಕಾರರನ್ನು ಅವನ ಕಾರ್ಯವನ್ನೂ ಯಾರೂ ಕಣೆಗಣೆಸುವುದು ಉಚಿತವಲ್ಲ' ವೆಂದು ತಿಳಿಸಿದ್ದಾರೆ.

ಕನ್ನಡಿಗರು ತುಂಬು ಉದಾರಿಗಳು. ಆದ್ದರಿಂದ ಹಿಂದೆಂದಿಗಿಂತಲೂ ಹೆಚ್ಚಾಗಿ ಕನ್ನಡತನವನ್ನು ಉಳಿಸಿಕೊಳ್ಳಬೇಕಾಗಿರುವ ಸಂದರ್ಭ ಬಂದಿದೆಯೆಂದು, 1986ರಷ್ಟು ಹಿಂದೆಯೇ ಗುರುತಿಸಿದ್ದ ಎಲ್. ಗುಂಡಪ್ಪನವರು, ತಮ್ಮ 'ಉಳಿಸಿಕೊಳ್ಳಬೇಕಾದ ಕೆಲವು ಮಾತುಗಳು' ಎಂಬ ಪ್ರಬಂಧದಲ್ಲಿ ಕನ್ನಡ ಭಾಷೆಯ ಅನೇಕ ಪದಗಳು ಬಳಕೆಯಲ್ಲಿಲ್ಲದೆಯೇ ಕಣ್ಮರೆಯಾಗುತ್ತಿರುವ ಬಗ್ಗೆ ಎಚ್ಚರಿಸಿದ್ದಾರೆ.

'ನಾಡ ಬಯಲಿನಲ್ಲಿ ಗೌರೀಶಿಖರ' 'ಲಾವಣಿ ಅಥವಾ ವೀರಕಥೆ' ಮತ್ತು 'ಮಲೆರಾಯ' - ಜನಪದಗಳನ್ನು ಕುರಿತಾದ ರಮ್ಯ ಪ್ರಬಂಧಗಳು.

ಎಲ್. ಗುಂಡಪ್ಪನವರು ಅಪಾರ ಕನ್ನಡ ಭಾಷಾ ಪ್ರೇಮಿ. ತಾವು ಮಾತನಾಡುವಾಗಲೂ ಕೂಡ ಇಂಗ್ಲಿಷ್ ಬಳಸದೆಯೇ ಮಾತಾಡುತ್ತಿದ್ದರು. 1958ನೇ ಇಸವಿಯಲ್ಲಿ ತಮಿಳು ಬರಹಗಾರರ ಸಂಘದ ವಾರ್ಷಿಕಾಧಿವೇಶದಲ್ಲಿ ಚೆನ್ನದ

ಪದಕದ ಗೌರವವನ್ನು ಸ್ವೀಕರಿಸಲು ಹೋದಾಗಲೂ ಕೂಡ ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ.

''ತಮಿಳಿಗೆ ಸಲ್ಲಿಸಿರುವ ಸೇವೆಗಾಗಿ' ಎಂದು ನನಗೆ ಈ ಮರ್ಯಾದೆ ಮಾಡಿದ್ದೀರಿ ನನ್ನ ಸ್ವಂತ ಮೇಲ್ಮೆಗಾಗಿ ತಮಿಳು ಕಲಿಯಲು ಪ್ರಯತ್ನಿಸಿದೆ. ತಿಳಿದಷ್ಟನ್ನು ನಾಲ್ವರಲ್ಲಿ ಹಂಚಿ ಅವರೊಡನೆ ಆನಂದಿಸಬಯಸಿದೆ. ಇದನ್ನು 'ಸ್ವಸೇವೆ' ಎಂದೇ ಹೇಳಬೇಕಾಗುತ್ತದೆ. ವಿಶಾಲಾರ್ಥ ಕೊಟ್ಟು 'ನುಡಿ ಸೇವೆ' ಎನ್ನುವುದಾದರೆ ಆ ಸೇವೆ ನನ್ನ ತಾಯ್ನಾಡಿಗೆ - ಕನ್ನಡಕ್ಕೆ ಎಂದು ಬೇಕಾದರೆ ಹೇಳಬಹುದು. ತಮಿಳಿಗೆ ಸೇವೆ ಸಲ್ಲಿಸುತ್ತಿದ್ದೇನೆಂಬ ಭಾವನೆಯೇ ನನಗಿಲ್ಲ.''

ತಾವು ಯಾವ ಸಭೆ ಸಮಾರಂಭಕ್ಕೆ ಹೋದರೂ, ಅವರ ಈ ಅಭಿಪ್ರಾಯ ಬದಲಾಗಲಿಲ್ಲ. ಕನ್ನಡ -ತಮಿಳು ಸಮಾನ ಭಾಷೆಗಳೆಂದು ಅವರು ತಮಿಳರಿಗೇ ದಿಟ್ಟವಾಗಿ ಘೋಷಿಸಿದರು. ಅದು ಹೇಗೆ ಎಂದೂ ಕೂಡ ಸಾಹಿತ್ಯದ ಆಧಾರದ ಮೇಲೆ ವಿಶದಪಡಿಸಿದರು.

'ತಮಿಳು ಪುರಾತನರ ಕಥೆಗಳು ಮತ್ತು ಹರಿಹರನ ರಗಳೆಗಳು' -ಎಲ್. ಗುಂಡಪ್ಪ ಅವರ ಒಂದು ತೌಲನಿಕ ಪ್ರಬಂಧ. 58 ಪುಟಗಳ ಈ ವಿದ್ವತ್‌ಪೂರ್ಣ ಬರವಣಿಗೆಯಲ್ಲಿ ತಮಿಳಿನ 'ಪೆರಿಯ ಪುರಾಣ' ಮತ್ತು ಹರಿಹರನ ರಗಳೆಗಳ ಬಗ್ಗೆ ವಿಸ್ತಾರವಾದ ಅಧ್ಯಯನವಿದೆ.

ಶೇಕ್ಕಿಟರ್ 'ಪೆರಿಯ ಪುರಾಣ'ವನ್ನು ರಚಿಸಿದ ಕವಿ, ಭಕ್ತ ಶಿರೋಮಣಿ. ಅರವತ್ತಮೂರು ಶಿವ ಭಕ್ತರನ್ನು ಕುರಿತಾದ ಕಾವ್ಯ ಪೆರಿಯ ಪುರಾಣ. ಕನ್ನಡದಲ್ಲಿ ಹರಿಹರನು ರಚಿಸಿರುವ ರಗಳೆಗಳಲ್ಲಿ ಕಥೆ ಪೆರಿಯ ಪುರಾಣದಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದನ್ನು ತಿಳಿಸುವಾಗ ಗುಂಡಪ್ಪನವರು ಇಬ್ಬರೂ ಕವಿಗಳ ಕಥಾ ನಿರೂಪಣೆಯಲ್ಲಿರುವ ಸಾಮ್ಯ, ಭಿನ್ನತೆಗಳನ್ನು ಉದಾಹರಣೆಗಳ ಸಹಿತ ನಿರೂಪಿಸಿದ್ದಾರೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗುವಂತಹ ಉಪಯುಕ್ತ ಪ್ರಂಬಧವಾಗಿದೆ ಇದು. ಪ್ರಬಂಧ 'ಹರಿಹರದೇವ' ಶೀರ್ಷಿಕೆಯ ಗ್ರಂಥದಲ್ಲಿ ಸೇರ್ಪಡೆಯಾಗಿದೆ. ಐಬಿಎಚ್ ಪ್ರಕಾಶನದ ಕವಿಕಾವ್ಯ ಪರಂಪರೆ - 6ರಲ್ಲಿ ಪ್ರಕಟಿತ.

ಸರ್ವಜ ಹುಟ್ಟು ತಿರುವಳ್ಳುವರು' ಎಲ್. ಗುಂಡಪ್ಪನವರು ರಚಿಸಿರುವ ಮತ್ತೊಂದು ತುಲನಾತ್ಮಕ ಪ್ರೌಢಲೇಖನ. ಸರ್ವಜನ ಹುಟ್ಟು ಹೇಗೆ ನಿಗೂಢವಾಗಿದೆಯೋ ಹಾಗೆಯೇ ತಿರುವಳುವರದ್ದೂ ಕೂಡ. ಇಬ್ಬರ ಜನನ, ಬಾಲ್ಯ, ಬೆಳವಣಿಗೆಗಳಲ್ಲಿ ಬಹಳ ಮಟ್ಟಿನ ಸಾಮ್ಯ ಕಂಡು ಬರುವಂತೆಯೇ ಸರ್ವಜ 'ವಚನ'ಗಳಲ್ಲೂ ತಿರುವಳ್ಳುವರ್ ಅವರ 'ಕುರುಳ್'ನಲ್ಲೂ ಸಮಾನ ವಿಷಯಗಳಿವೆ. ಧರ್ಮ, ಅರ್ಥ ಕಾಮ ಮೋಕ್ಷಗಳ ವಿಷಯವಾಗಿ ಏಕ ರೀತಿಯ ಮನೋಧರ್ಮ ಕಂಡುಬಂದಿದೆ. ಈ ಅಂಶಗಳನ್ನು ಗುಂಡಪ್ಪನವರು ಮನಮುಟ್ಟುವಂತೆ ವರ್ಣಿಸಿದ್ದಾರೆ.

ಆಕಾಶವಾಣಿಗಾಗಿ ಗದ್ಯ ರೂಪದಲ್ಲಿ 'ಕಣ್ಣಗಿ' ರೂಪಕವನ್ನೂ, 'ಶಿಲಪ್ಪದಿಗಾರಂ' ಬಗ್ಗೆ ಪರಿಚಯ ಕಾರ್ಯಕ್ರಮವನ್ನೂ ಬರೆದು ಕೊಟ್ಟಿದ್ದಾರೆ. ಅಲ್ಲದೆ ಆಕಾಶವಾಣಿಯಲ್ಲಿ ಅವರು 'ಚಿಂತನಕ್ಕಾಗಿ ಬರೆದು ಪ್ರಕಾಶ ಮಾಡಿದ 'ಸೋಸಿ ಮಾತಾಡು' ಮುಂತಾದ ಲೇಖನಗಳು ಅವರ ಜೀವನ ದೃಷ್ಟಿಯನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ.

'ಪ್ರಬುದ್ಧ ಕರ್ನಾಟಕ' ಪತ್ರಿಕೆಗಾಗಿ ಅನೇಕ ಪುಸ್ತಕಗಳನ್ನು ವಿಮರ್ಶೆ ಮಾಡಿದ್ದಾರೆ. 'ಕನ್ನಡ ನುಡಿ' ಪತ್ರಿಕೆಯಲ್ಲಿ ಭಾಸನ ಕರ್ಣ ಮತ್ತು ಅವ್ವೈಯಾರ್ ಕೃತಿಗಳು ಎಂಬ ಲೇಖನಗಳು ಮೂಡಿ ಬಂದಿವೆ. ಕವಿವಾಣಿ - ಕವಿಮಹಿಮೆ ಎಂಬ ಶೀರ್ಷಿಕೆಯಲ್ಲಿ 12 ಪ್ರಸಂಗಗಳನ್ನು 'ಕರ್ಮವೀರ'ದಲ್ಲಿ ಪ್ರಕಟಿಸಿದ್ದಾರೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ 'ಯುದ್ಧ ಸಿದ್ಧತೆ ಮತ್ತು ವ್ಯೂಹ ರಚನೆ' ಎಂಬ ಲೇಖನ ಮೂಡಿ ಬಂದಿದೆ.

ಎಲ್. ಗುಂಡಪ್ಪನವರ ಈ ಎಲ್ಲ ಬರಹಗಳನ್ನೂ ಅವಲೋಕಿಸಿದಾಗ, ತಾವು ಅಧ್ಯಯನ ಮಾಡಿ ಮನನ ಮಾಡಿಕೊಂಡ ವಿಷಯಗಳನ್ನು ಕನ್ನಡ ಜನತೆಯೊಂದಿಗೆ ರಂಚಿಕೊಳ್ಳಬೇಕೆಂಬ ಅವರ ಆಶಯ ಎದ್ದು ಕಾಣುತ್ತದೆ.

ಕುಮಾರವ್ಯಾಸ ವಿರಚಿತ 'ಕರ್ಣಾಟಕ ಭಾರತ ಕಥಾ ಮಂಜರಿ' - ಕುಮಾರವ್ಯಾಸ ಭಾರತವೆಂದು ಜನಪ್ರಿಯವಾಗಿರುವ ಕಾವ್ಯ. ಇದನ್ನು ಗುಂಡಪ್ಪನವರು ಗದ್ಯಾನುವಾದ ಮಾಡಿದ್ದಾರೆ. 'ಗದುಗಿನ ಭಾರತ'ವೆಂದು ಸಹ ಪ್ರಸಿದ್ಧವಾಗಿರುವ ಈ ಕಾವ್ಯದ ಗದ್ಯಾನುವಾದವನ್ನು ಶೃಂಗೇರಿ ಶ್ರೀ ಶಾರದಾ ಪೀಠಾಧಿೇಶ್ವರ ಜಗದ್ಗುರು ಶ್ರೀ ಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರಿಗೆ ಭಕ್ತಿಯಿಂದ ಗುರುಕಾಣಿಕೆಯೆಂದು ಅರ್ಪಿಸಿದ್ದಾರೆ.

ತಮ್ಮ ವಾಡಿಕೆಯಂತೆ ಗುಂಡಪ್ಪನವರು ಸುಮಾರು 10 ಪುಟಗಳ ಲೇಖನವನ್ನು ಬರೆದಿದ್ದಾರೆ. ಕವಿ ನಾರಣಪ್ಪನ ಜೀವಿತ ಚರಿತ್ರೆ, ಅವನ ಕಾವ್ಯ ರಚನೆಯಲ್ಲಿ ಕಂಡುಬರುವ ವಿಶೇಷತೆ, ಭಾಷಾಶೈಲಿ,ಇವು ಎಲ್ಲವನ್ನೂ ಒಪ್ಪವಾಗಿ ವಿಮರ್ಶಿಸಿದ್ದಾರೆ.

ಜನಸಾಮಾನ್ಯರ ಅಭಿರುಚಿಗೆ ಗದುಗಿನ ಭಾರತ ಅಷ್ಟು ಮೆಚ್ಚಾಗಿರುವುದಕ್ಕೆ ನಾರಣಪ್ಪನು ಪಂಡಿತನಂತಲ್ಲದೆ ಸಾಮಾನ್ಯ ರೀತಿಯ ಹಳ್ಳಿಗನ ಹಾಗೆ ಬರೆದಿರುವುದೇ ಮುಖ್ಯ ಕಾರಣ.

ನಾರಣಪ್ಪ ವಿಪ್ರ ಕುಟುಂಬಿ, ಸಾತ್ತ್ವಿಕ, ಶಾಂತ ಇವನಲ್ಲಿ ಭಗವದ್ಭಕ್ತಿ ತುಂಬಿದೆ. ತನ್ನ ಸುತ್ತಮುತ್ತ ಕಂಡುಬರುವ ಜನರೆಲ್ಲ ಭಗವಂತನ ಸ್ವರೂಪವೆಂದು ನಂಬಿ, 'ಜಂಗಮ ಜನಾರ್ಧನ'ರೆಂದು ಕೈಮುಗಿದು, ಅದೇ ಭಾವನೆಯಿಂದ ಗ್ರಂಥವನ್ನು ಬರೆದು ಜನತಾಜನಾರ್ಧನನಿಗೆ ಕಾಣಿಕೆಯಾಗಿ ಅರ್ಪಿಸಿದ್ದಾನೆ ಎಂಬುದಾಗಿ ಅರಿಕೆಯಲ್ಲಿ ನಾರಣಪ್ಪನ ಬಗ್ಗೆ ಬರೆದಿದ್ದಾರೆ. ಕವಿ ನಾರಣಪ್ಪನ ವ್ಯಕ್ತಿತ್ವದಿಂದ ಪ್ರಭಾವಿತರಾದರೆಂದು ಕಾಣುತ್ತದೆ. ಎಲ್. ಗುಂಡಪ್ಪನವರು ಎಸ್.ಎಸ್. ಎನ್. ಬುಕ್ ಡಿಪೋದ ಶ್ರೀ ರಾಮರಾಯರಿಗೆ ಸಹಾಯ ಮಾಡುವ ಉದ್ದೇಶದಿಂದ ಗದ್ಯಾನುವಾದ ಪೂರ್ಣ ಹಕ್ಕನ್ನು 'ಅರಿಶಿನ-ಕುಂಕುಮ, ಆಶೀರ್ವಾದ ಸಹಿತ' ಎಂದು ಬರೆದುಕೊಟ್ಟು ಬಿಟ್ಟರು.

ಗದುಗಿನ ಭಾರತ ಪದ್ಯಕಾವ್ಯ. ಇದರ ಭಾಷೆ ನಡುಗನ್ನಡ ಈಗ ಪ್ರಚಾರ ದಲ್ಲಿರುವ ಹೊಸಗನ್ನಡದಷ್ಟು ಸರಳವಲ್ಲ. ಓದಬೇಕೆಂಬ ಉತ್ಸಾಹವಿದ್ದು ತಕ್ಕಷ್ಟು ಸಾಹಿತ್ಯಾಭ್ಯಾಸವಿಲ್ಲದ ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗಲೆಂಬ ಉದ್ದೇಶದಿಂದ ಕುಮಾರವ್ಯಾಸನ ಪದ್ಯಕಾವ್ಯಕ್ಕೆ ಗದ್ಯಾನುವಾದ ಮಾಡಿದರು ಎಲ್. ಗುಂಡಪ್ಪನವರು.

ಕವಿಯೇ ಗದ್ಯದಲ್ಲಿ ಕಥೆ ಹೇಳತೊಡಗಿದ್ದರೆ ಹೀಗೆ ಹೇಳುತ್ತಿದ್ದಿರಬಹುದೆಂದು ಊಹಿಸಿಕೊಂಡು, ಅದೇ ರೀತಿ ಸರಳವಾದ ಭಾಷೆಯಲ್ಲಿ ಬರೆಯಲು ಪ್ರಯತ್ನ ಮಾಡಿದ್ದಾರೆ. ಅಭಿಪ್ರಾಯ ಸ್ಪಷ್ಟವಾಗಿಲ್ಲದಿರುವಂತಹ, ಪುನರುಕ್ತವೆಂದು ತೋರುವಂತಹ ಪದ್ಯಗಳನ್ನು ಬಿಟ್ಟು ಉಳಿದೆಲ್ಲವನ್ನೂ ಗದ್ಯಕ್ಕೆ ತಂದಿದ್ದಾರೆ. ಗದ್ಯಾನುವಾದ ಪೂರ್ತಿಯಾಗಿ ಸಿದ್ಧಪಡಿಸಿ ಬೆಂಗಳೂರಿನ ಎಸ್.ಎಸ್.ಎನ್. ಬುಕ್ ಡಿಪೋ ಮಾಲೀಕರಾದ ಶ್ರೀರಾಮರಾಯರ ಬಳಿ ಕೊಟ್ಟರು. ಹಸ್ತಪ್ರತಿ ಅವರ ಬಳಿಯೇ ಹನ್ನೆರಡು ವರ್ಷಗಳ ಕಾಲ ಅಡಗಿಕೊಂಡಿತ್ತು. 1976ರಲ್ಲಿ ಹೇಮಂತ ಸಾಹಿತ್ಯದ ಶ್ರೀ ವೆಂಕಟೇಶ್ ಹಸ್ತಪ್ರತಿಯನ್ನು ಪಡೆದುಕೊಂಡು ಪ್ರಕಟಿಸಿದರು.

ಈ ಗದ್ಯಾನುವಾದ ಬಿಡುಗಡೆಯಾಗುವ ಕೆಲದಿನಗಳ ಮೊದಲು ಗುಂಡಪ್ಪನವರ ಪತ್ನಿ ಶ್ರೀಮತಿ ಶಾರದಮ್ಮ ಹಠಾತ್ತಾಗಿ ತೀರಿಕೊಂಡರು. ವಿಯೋಗವನ್ನು ಸಹಿಸಿಕೊಂಡೇ ಗುಂಡಪ್ಪನವರು ಕಾವ್ಯದ ಬಿಡುಗಡೆಗೆ ಸಹಕರಿಸಿದರು. ಶ್ರೀಯುತರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜಿ.ಪಿ. ರಾಜರತ್ನಂ, ವಿ. ಸೀತಾರಾಮಯ್ಯ, ಜಿ.ವೆಂಕಟಸುಬ್ಬಯ್ಯ ಅವರುಗಳು ಉಪಸ್ಥಿತರಿದ್ದು, ಪುಸ್ತಕದ ಬಗ್ಗೆ, ಗುಂಡಪ್ಪನವರ ವ್ಯಕ್ತಿತ್ವ ವಿದ್ವತ್ತುಗಳ ಬಗ್ಗೆ ಮಾತನಾಡಿದರು. ಅವರೆಲ್ಲ, ಶ್ರೀಮತಿ ಶಾರದಮ್ಮನವರೊಡನೆ ತಮಗಿದ್ದ ವಿಶ್ವಾಸದ ಸಂಬಂಧವನ್ನು ಜ್ಞಾಪಿಸಿಕೊಂಡು ಶ್ರದ್ಧಾಂಜಲಿ ಅರ್ಪಿಸಿದರು. ಹೀಗೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ಶ್ರದ್ಧಾಂಜಲಿ ಕಾರ್ಯಕ್ರಮವೂ ಆಯಿತು.

ಶ್ರೀ ಎಲ್. ಗುಂಡಪ್ಪನವರು ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ 'ಕನ್ನಡ ವ್ಯಾಕರಣ ಪಾಠಗಳು' ಬರೆದರು. ಆ ಪುಸ್ತಕ ಈಗ ಲಭ್ಯವಿಲ್ಲ.

'ಕುಮಾರವ್ಯಾಸ ಭಾರತ' ಗದ್ಯಾನುವಾದದ ಹಕ್ಕನ್ನು ಗುಂಡಪ್ಪನವರು ಪ್ರಕಾಶಕರಿಗೇ ಬರೆದುಕೊಟ್ಟು ಬಿಟ್ಟಿದ್ದರಿಂದ, ಪುಸ್ತಕಗಳು ಅಧಿಕ ಸಂಖ್ಯೆಯಲ್ಲಿ ಮಾರಾಟವಾದರೂ ಕೂಡ ಗುಂಡಪ್ಪನವರಿಗೆ ಆರ್ಥಿಕ ಲಾಭ ಆಗಲೇ ಇಲ್ಲ. ಇಂದಿಗೂ ಆ ಗ್ರಂಥ ಜನಪ್ರಿಯ ಮತ್ತು ದುಬಾರಿ ಬೆಲೆಗೆ ಮಾರಾಟವಾಗುತ್ತಲೇ ಇದೆ. ಆದರೆ ತಮಗೆ ಪ್ರಕಾಶಕರು ಹಣ ಕೊಡಲಿಲ್ಲವೆಂದು ಗುಂಡಪ್ಪನವರು ಸ್ವಲ್ಪವೂ ವ್ಯಥೆ ಪಡಲಿಲ್ಲ. 'ಎಲ್ಲವೂ ಭಗವಂತನ ಚಿತ್ತ' ಎಂದು ಫಲಾಫಲಗಳನ್ನು ವಾಸ್ತವವಾಗಿ ದೇವರಿಗೇ ಅರ್ಪಿಸಿದ ಧೀಮಂತ ವ್ಯಕ್ತಿ ಅವರು.

1975ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ನೀಡಿ, ಅವರು ಮಾಡಿದ್ದ ಸಾಹಿತ್ಯ ಸೇವೆಯನ್ನು ತಡವಾಗಿಯಾದರೂ ಗುರುತಿಸಿ ಗೌರವಿಸಿತು.

ಕನ್ನಡ ನಿಘಂಟು ಕ್ಷೇತ್ರಕ್ಕೆ ಎಲ್. ಗುಂಡಪ್ಪನವರ ಕೊಡುಗೆ ಅಪೂರ್ವವಾದದ್ದು

ಎಲ್. ಗುಂಡಪ್ಪನವರು ಕೈಗೊಂಡ ಭಾಷಾಂತರ ಕಾರ್ಯವೆಲ್ಲ ಅವರ ವೈಯಕ್ತಿಕ ದುಡಿಮೆಯ ಫಲ. ಆದರೆ ಸಾಂಘಿಕ ಪರಿಶ್ರಮದಲ್ಲಿ ಅವರು ಭಾಗವಹಿಸಿದ ಹಿರಿಯ ಪಾತ್ರವೆಂದರೆ ನಿಘಂಟು ರಚನೆ.

ಮೈಸೂರು ವಿಶ್ವವಿದ್ಯಾನಿಲಯದವರು ಸಿದ್ಧಪಡಿಸಿದ ಇಂಗ್ಲಿಷ್ - ಕನ್ನಡ ನಿಘಂಟಿನ ರಚನಾ ಕಾರ್ಯದಲ್ಲಿ ಶ್ರಮಿಸಿದ ಸಂಪಾದಕ ಮಂಡಲದಲ್ಲಿ ಎಲ್. ಗುಂಡಪ್ಪನವರು ದೀರ್ಘ ಕಾಲ ಪ್ರಮುಖ ಪಾತ್ರ ವಹಿಸಿದರು. ವಿದ್ಯಾರ್ಥಿ ದೆಸೆಯಿಂದಲೇ ಗುಂಡಪ್ಪನವರನ್ನು ನಿಕಟವಾಗಿ ಬಲ್ಲ ದಿವಗಂತ ಶ್ರೀ ನಿಟ್ಟೂರು ಶ್ರೀನಿವಾಸರಾಯರು, ಎಲ್. ಗುಂಡಪ್ಪನವರು ಕನ್ನಡ - ಕನ್ನಡ ನಿಘಂಟಿನ ಕಾರ್ಯವನ್ನು ನಿರ್ವಹಿಸಿದರೆಂದು ಹೇಳಿ ಕೊಂಡಾಡಿದ್ದಾರೆ. 1.7.1957ರಿಂದ 1.4.1963ರವರೆಗೆ ಸುಮಾರು 6 ವರ್ಷಗಳ ಕಾಲ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಮೇಲೆ ಎ.ಆರ್. ಕೃಷ್ಣಶಾಸ್ತ್ರಿ ಹಾಗೂ ತೀನಂಶ್ರೀ ಅವರ ಕೋರಿಕೆಯ ಮೇರೆಗೆ ನಿಘಂಟಿನ ಕಾರ್ಯವನ್ನು ಕೈಗೆತ್ತಿಕೊಂಡು ನಿರ್ವಹಿಸಿದರು.

ಅವರು ಸಂಪಾದಿಸಿದ ಮತ್ತೊಂದು ನಿಘಂಟು, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಸಂಸ್ಕೃತದಲ್ಲಿ ರಚಿಸಿದ ಶ್ರೀ ಚಾಮುಂಡಿಕಾ ಲಘು ನಿಘಂಟು. ಇವರೊಂದಿಗೆ ಸಹ ಸಂಪಾದಕರಾಗಿದ್ದವರು ಎಂ.ಎಸ್. ಸುಬ್ರಹ್ಮಣ್ಯಶಾಸ್ತ್ರಿಗಳು. ಅಮರಕೋಶದಂತೆ ಉಪಯುಕ್ತವಾದ ಈ ಕೋಶದಲ್ಲಿ ಸಸ್ಯ ಪ್ರಭೇದಗಳು, ಪಕ್ಷಿ ಪ್ರಭೇದಗಳು ಇತ್ಯಾದಿಗಳಿವೆ. ಹೀಗೆ ಗುಂಡಪ್ಪನವರು ಸಂಸ್ಕೃತ - ಕನ್ನಡ ನಿಘಂಟು ಸಂಪಾದನೆಯನ್ನೂ ಮಾಡಿದ್ದಾರೆ.

ಇವರು ಕೈಗೊಂಡ ಮತ್ತೊಂದು ಪ್ರಮುಖ ಕೆಲಸವೆಂದರೆ ಇಂಗ್ಲಿಷ್ - ಕನ್ನಡದಲ್ಲಿ ಪತ್ರಿಕಾ ನಿಘಂಟು. ಕನ್ನಡದ ಪತ್ರಿಕೆಗಳಲ್ಲಿ ಸ್ವತಂತ್ರವಾಗಿ ಬರೆಯುವಾಗ, ಏಕರೂಪ ಪದಗಳನ್ನು ಬಳಕೆಗೆ ತರುವ ಪ್ರಯತ್ನ ಇದಾಗಿದೆ. ಲೋಕ ಶಿಕ್ಷಣ ಟ್ರಸ್ಟ್‌ನ ಶ್ರೀ ಆರ್. ಆರ್. ದಿವಾಕರ್ ಅವರು ಬೆಂಗಳೂರಿನಲ್ಲಿ ಪತ್ರಿಕಾ ಭಾಷಾ ತಜ್ಞರ ಹಾಗೂ ಸಂಪಾದಕರ ಸಭೆಯೊಂದನ್ನು 1959ರಲ್ಲಿ ಕರೆದರು. ಪತ್ರಿಕೆಗಳಲ್ಲಿ ಏಕರೂಪ ಪದಗಳ

ಬಳಕೆಯನ್ನು ತರುವ ನಿಟ್ಟಿನಲ್ಲಿ ಪ್ರಯತ್ನ ಮಾಡುವುದು ಇದರ ಉದ್ದೇಶವಾಗಿತ್ತು. ಪತ್ರಿಕೆಗಳಲ್ಲಿ ಸಾಮಾನ್ಯವಾಗಿ ಬಳಸುವ ಒಂದು ಸಾವಿರ ಪದಗಳನ್ನು ಕಲೆಹಾಕಿ, ಅದಕ್ಕೆ ಸರಿ ಎನಿಸಿದ ಸಮಾನ ಕನ್ನಡ ಪದಗಳನ್ನು ಸದಸ್ಯರು ಸೂಚಿಸಿದರು. ಈ ಶಬ್ದಗಳ ಸಂಗ್ರಹಕ್ಕೆ ಕೊನೆಯ ರೂಪು ಕೊಡುವ ಕೆಲಸವನ್ನು ಸಮಿತಿ ಎಲ್. ಗುಂಡಪ್ಪನವರಿಗೆ ವಹಿಸಿತು.

ಈ ಕರಡು ಶಬ್ದ ಸಂಗ್ರಹವನ್ನು ಆಧಾರವಾಗಿಟ್ಟುಕೊಂಡು ಎಲ್. ಗುಂಡಪ್ಪನವರು ಕನ್ನಡದ ಮೊದಲ ಪತ್ರಿಕಾ ನಿಘಂಟನ್ನು ಸಿದ್ಧಪಡಿಸಿದರು. ಈ ನಿಘಂಟನ್ನು ಬಿಡುಗಡೆ ಮಾಡಿದ ಪತ್ರಿಕಾ ಪದಕೋಶ ಸಂಪಾದಕ ಪ್ರೊ. ಜಿ. ವೆಂಕಟಸುಬ್ಬಯ್ಯನವರು. ''ಇದರಲ್ಲಿ ಸುಮಾರು ಎರಡು ಸಾವಿರ ಶಬ್ದಗಳಿವೆ. ಈ ಚಿಕ್ಕ ನಿಘಂಟು ಸಿದ್ಧವಾಗಲು 6 ವರ್ಷಗಳು ಬೇಕಾದವು. ಇದೇ ಕನ್ನಡದ ಮೊದಲ ಪತ್ರಿಕಾ ನಿಘಂಟು. ಇಂಥ ಮತ್ತೊಂದು ಪ್ರಯತ್ನ ನಡೆಯಬೇಕಾದರೆ ಕನ್ನಡ ನಾಡು 33 ವರ್ಷಗಳ ಕಾಲ ಕಾಯಬೇಕಾಯಿತು'' ಎಂದಿದ್ದಾರೆ. ಇಂದಿನ ಅನೇಕ ಹಿರಿಯ ಪತ್ರಕರ್ತರೂ, ಸಾಹಿತಿಗಳೂ 'ಪತ್ರಿಕಾ ನಿಘಂಟು ಎಂದಿಗೂ ಅತ್ಯಂತ ಪ್ರಸ್ತುತ ಹಾಗೂ ಆಧುನಿಕ ಆಕರ ಗ್ರಂಥ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಮಾತುಗಳಿಂದ ಎಲ್. ಗುಂಡಪ್ಪನವರು ಪತ್ರಿಕಾ ನಿಘಂಟಿನ ಕಾರ್ಯ ನಿರ್ವಹಿಸಿದ ಮೊದಲ ವಿದ್ವಾಂಸರಾಗಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ.

ಎಲ್. ಗುಂಡಪ್ಪನವರು ಬೇರೊಂದು ರೀತಿಯ ಶಬ್ದಕೋಶ ಕೆಲಸವನ್ನು ಮಾಡಿದ್ದಾರೆ. ತಾವು ಅನುವಾದ ಮಾಡಿದ ಪ್ರತಿ ಗ್ರಂಥದ ಕೊನೆಯಲ್ಲೂ ಪದಗಳ ಅರ್ಥಕೋಶವನ್ನು ಅಕಾರಾದಿಯಿಂದ ವಿವರವಾಗಿ ನೀಡಿದ್ದಾರೆ. ತಿರುಕ್ಕುರಳ್, ಪೆರಿಯ ಪುರಾಣಂ ಇವೇ ಮೊದಲಾದ ತಮಿಳು ಗ್ರಂಥಗಳಲ್ಲೂ ಈ ಬಗೆಯ ಶಬ್ದಕೋಶಗಳಿವೆ. ಆದಿಪುರಾಣ ಸಂಗ್ರಹದಲ್ಲಿ ಟಿಪ್ಪಣಿಗಳು, ಅರ್ಥಕೋಶಗಳು ವಿಪುಲವಾಗಿವೆ. ಸಾಧ್ಯವಾದೆಡೆಯಲ್ಲೆಲ್ಲ ತಮಗೆ ಅಗತ್ಯ ಎನಿಸಿದ ಕಡೆಗಳಲ್ಲೆಲ್ಲ ಎಲ್. ಗುಂಡಪ್ಪನವರು ಈ ರೀತಿಯ ಶಬ್ದ ವಿವರಣೆಗಳನ್ನು ಒದಗಿಸಿದ್ದಾರೆ. ಈ ಎಲ್ಲ ಅರ್ಥಕೋಶಗಳನ್ನು ಕ್ರೋಡೀಕರಿಸಿ, ಒಂದು ಗ್ರಂಥವಾಗಿ ಪ್ರಕಟಿಸಿದರೆ, ಕನ್ನಡಿಗರಿಗೆ, ಭಾಷಾ ಅಧ್ಯಯನ ಶೀಲರಿಗೆ ಮತ್ತು ಸಂಶೋಧನ ವಿದ್ಯಾರ್ಥಿಗಳಿಗೆ ಒಂದು ಉತ್ತಮ ಆಕರ ಗ್ರಂಥ ದೊರಕುವುದರಲ್ಲಿ ಸಂಶಯವಿಲ್ಲ.

ಗ್ರಂಥ ಸಂಪಾದನೆ

ಎಲ್. ಗುಂಡಪ್ಪನವರ ಕಾವ್ಯ ಪ್ರೌಢಿಮೆ ಮೆರೆದಿರುವುದು ಮತ್ತೊಂದು ಕ್ಷೇತ್ರವೆಂದರೆ ಗ್ರಂಥ ಸಂಪಾದನಾ ಕ್ಷೇತ್ರ. ಈ ಕ್ಷೇತ್ರದಲ್ಲಿ ಅವರ ಸಾಮರ್ಥ್ಯ, ಪಾಂಡಿತ್ಯಗಳಿಗೆ ಸಾಹಿತ್ಯಲೋಕದಲ್ಲಿ ಆ ಚಂದ್ರಾರ್ಕವಾದ ಕೀರ್ತಿ ತಂದುಕೊಟ್ಟಿರುವ ಗ್ರಂಥ 'ಆದಿಪುರಾಣ ಸಂಗ್ರಹ'.

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ಪ್ರಧಾನ ಸಂಪಾದಕರಾಗಿದ್ದ ಶ್ರೀ ಬಿ. ಎಂ.ಶ್ರೀ ಅವರು, ಆದಿಪುರಾಣ ಸಂಗ್ರಹ ಕಾರ್ಯವನ್ನು ತಮ್ಮ ಶಿಷ್ಯನಿಗೆ ವಹಿಸಿಕೊಟ್ಟರು. ಗ್ರಂಥ ಹೊರಬರುವ ಮೊದಲೇ ಅವರು ದಿವಂಗತರಾದರು. ಅವರ ನಂತರ ಪ್ರಧಾನ ಸಂಪಾದಕರಾಗಿದ್ದ, ಗುಂಡಪ್ಪನವರ ಪೂಜ್ಯ ಗುರುಗಳಾದ ಶ್ರೀ ಎ.ಆರ್. ಕೃಷ್ಣಶಾಸ್ತ್ರಿ ಅವರು ಹಸ್ತಪ್ರತಿಯನ್ನು ಪರಿಶೀಲಿಸಿ ಮೇಲ್ಪಾಡುಗಳನ್ನು ಸೂಚಿಸಿ ಅಚ್ಚುಕೂಟಕ್ಕೆ ಕಳಿಸಿಕೊಟ್ಟರು. ಗ್ರಂಥವು ಪ್ರಕಟವಾಗುವ ಹೊತ್ತಿಗೆ ಪ್ರಧಾನ ಸಂಪಾದಕರಾಗಿದ್ದಶ್ರೀ ಕೆ.ವಿ. ಪುಟ್ಟಪ್ಪ ಅವರು ಗ್ರಂಥಕ್ಕೆ ಮುನ್ನುಡಿ ಬರೆದಿದ್ದಾರೆ.

ಪಂಪನು ರಚಿಸಿರುವ ಆದಿಪುರಾಣವನ್ನು ಸಂಗ್ರಹಿಸುವಲ್ಲಿ ಎಲ್. ಗುಂಡಪ್ಪನವರು ತಮ್ಮ ಪಾಂಡಿತ್ಯವನ್ನೆಲ್ಲಾ ಧಾರೆ ಎರೆದಿದ್ದಾರೆ. ಮಹಾ ವಿದ್ವಾಂಸರು ಮಾತ್ರ ಮೂಲಗ್ರಂಥಗಳನ್ನು ಓದಬಲ್ಲರು. ಉಳಿದವರಿಗೆ ಅದು ಕಷ್ಟ. ಹಳಗನ್ನಡ ಕಾವ್ಯದ ದುರ್ಗಮ ವನದಲ್ಲಿ ಸುತ್ತಾಡಿ ಪ್ರವಾಸಗಳಿಗೆ ಒಂದು ರಾಜರಸ್ತೆ ನಿರ್ಮಿಸುವಲ್ಲಿ ಎಲ್. ಗುಂಡಪ್ಪನವರು ಯಶಸ್ವಿಯಾಗಿದ್ದಾರೆ.

ಈ ಸಂಗ್ರಹಕ್ಕೆ ಎಲ್. ಗುಂಡಪ್ಪನವರು ಬರೆದಿರುವ 79 ಪುಟಗಳ ಸುಧೀರ್ಘ ವಿದ್ವತ್ಪೂರ್ಣ ಪೀಠಿಕೆ, ನಂತರದ ಅನುಬಂಧಗಳು ಗ್ರಂಥದ ಕೊನೆಯಲ್ಲಿರುವ ಟಿಪ್ಪಣಿಗಳು ಮತ್ತು ಅರ್ಥಕೋಶಗಳು ಪಂಪನ ಆದಿಪುರಾಣವನ್ನು ಸಾಹಿತ್ಯಾಸಕ್ತರಿಗೆ ಸುಲಭ ಸಾಧ್ಯವನ್ನಾಗಿ ಮಾಡಿವೆ. ಹಲವು ಮುದ್ರಣಗಳನ್ನು ಕಂಡಿರುವ ಈ ಗ್ರಂಥವು 1958ನೆಯ ವರ್ಷದ ಇಂಟರ್‌ಮಿಟಿಯಟ್ ಪರೀಕ್ಷೆಗೆ ಪಠ್ಯಪುಸ್ತಕವಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ಆದಿಪುರಾಣ ಸಂಗ್ರಹದ ಪೀಠಿಕೆಯು ಕೆ.ಎ.ಎಸ್. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ.

ಪುಸ್ತಕವನ್ನೋದಿದ ಹಲವು ಜೈನಬಂಧುಗಳು, ಇಲ್ಲಿ ಕೊಟ್ಟಿರುವ ಜೈನಧರ್ಮ ನಿರೂಪಣೆ ಸಂಗ್ರಹವಾದರೂ ಸಮಗ್ರವಾಗಿದೆಯೆಂದೂ, ಸಂಪ್ರದಾಯ ಶುದ್ಧವಾಗಿ ಶಾಸ್ತ್ರಸಮ್ಮತವಾಗಿದೆಯೆಂದೂ ಸಂತೋಷ ಸೂಚಿಸಿದ್ದಾರೆ.

ಗುಂಡಪ್ಪನವರು ಸಂಪಾದಿಸಿರುವ ಆದಿಪುರಾಣ ಸಂಗ್ರಹ ನಮ್ಮೆಲ್ಲರ ಪಾಲಿಗೆ ಬೈಬಲ್ ಎನ್ನಬಹುದು ಎಂಬುದು ಹಲವು ಸಾಹಿತ್ಯ ವಿದ್ಯಾರ್ಥಿಗಳ ಅಭಿಪ್ರಾಯ. ಕೇವಲ ಟೀಕಿಕೆಯನ್ನು ಓದಿ ತಾವು ಪರೀಕ್ಷೆ ಪಾಸ್ ಮಾಡಿದ್ದಾಗಿಯೂ ಅವರೆಲ್ಲ ಹೇಳಿದ್ದಾರೆ . ಶ್ರೀ ಮಂಜೇಶ್ವರ ಗೋವಿಂದ ಪೈ ಅವರು 1960ನೆಯ ಇಸವಿಯಲ್ಲಿ ಎಲ್. ಗುಂಡಪ್ಪನವರಿಗೆ ಪತ್ರ ಬರೆದು ತಮ್ಮ ಅಭಿಪ್ರಾಯವನ್ನು ಹೀಗೆ ತಿಳಿಸಿದ್ದಾರೆ.

''ನಿಮ್ಮ 'ಆದಿ ಪುರಾಣ ಸಂಗ್ರಹ'ವು ಪಂಪ ಮಹಾಕವಿಯ ಸಮಗ್ರ 'ಆದಿಪುರಾಣ'ಕ್ಕೆ ಮಹಾರಾಜನ ಕಿರೀಟಕ್ಕೆ ಯುವರಾಜನ ಮುಕುಟ (ಕರೊನೆಟ್) ಹೇಗೋ ಹಾಗಿದೆ, ಮತ್ತು ತಮಿಳು ತಿರುಕ್ಕುಱಳಿಗೆ ನಿಮ್ಮ ತಿರುಕ್ಕುಱಳಿನ ಕನ್ನಡ ಧರ್ಮಭಾಗವು ನೆರೆಯವರ ತೋಟದಿಂದ ಆಯ್ದು ತಂದ ಹೂವುಗಳಿಂದ ತನ್ನ ಮನೆಯಲ್ಲಿ ಕೋದದಾಮದಂತಿದೆ.''

ಗುಂಡಪ್ಪನವರು ಜೈನ ಧರ್ಮಕ್ಕೆ ಸಲ್ಲಿಸಿದ ಈ ಸೇವೆಗಾಗಿ, ಧರ್ಮಸ್ಥಳದ ಈಗಿನ ಹೆಗಡೆಯವರ ತಂದೆಯವರು ತಾವು ಪ್ರತಿ ವರ್ಷ ನಡೆಸುವ ಧರ್ಮ ಸಮ್ಮೇಳನಕ್ಕೆ ಅವರನ್ನು ಆಹ್ವಾನಿಸಿ ಗೌರವಿಸಿದರು.

ಎಲ್. ಗುಂಡಪ್ಪನವರು ಸಂಪಾದನೆ ಮಾಡಿರುವ ಮತ್ತೊಂದು ಮಹತ್ವದ ಕೃತಿ 'ನಾಡಪದಗಳು'.

ಮತಿಘಟ್ಟದಲ್ಲಿ ಗುಂಡಪ್ಪನವರ ಅಜ್ಜಿ ಹಾಡಿನ ವಿಶ್ವಕೋಶದಂತಿದ್ದರು. ಊರಿನ ಹೆಂಗಸರೆಲ್ಲ ಅವರ ಬಳಿ ಹಾಡು ಹೇಳಿಸಿಕೊಳ್ಳುವುದಕ್ಕೆ ಬರುತ್ತಿದ್ದರು. ಮನೆಯ ಸುತ್ತಮುತ್ತ ಒಕ್ಕಲಿಗರ ಮನೆಗಳು ಸಣ್ಣ ಹಳ್ಳಿ. ಯಾರ ಮನೆಯಲ್ಲಿ ರಾಗಿಕಲ್ಲು ಪದ ಹೇಳಿದರೂ ಚೆನ್ನಾಗಿ ಕೇಳುತ್ತಿತ್ತು. ತಾಯಿಯ ನೆರವಿನಿಂದ ಆಗಾಗ ಕೋಲಾಟ ನಡೆಯುತ್ತಿದ್ದ ಸ್ಥಳಕ್ಕೆ ಹೋಗಿ ನೋಡುತ್ತಿದ್ದರು. ಹೀಗೆ, ಅಕ್ಷರಾಭ್ಯಾಸಕ್ಕೆ ಮೊದಲೇ, ಚಿಕ್ಕಂದಿನಲ್ಲೇ ಹಳ್ಳಿಯಹಾಡುಗಳ ಪರಿಚಯವಾಯಿತು. ಗುಂಡಪ್ಪನವರು ವಿದ್ಯಾಭ್ಯಾಸಕ್ಕೆಂದು ಹದಿನೈದು ಇಪ್ಪತ್ತು ವರ್ಷ ಹೊರಗಿದ್ದು ಊರಿಗೆ ಹಿಂದಿರುಗುವ

ಹೊತ್ತಿಗೆ ಈ ಹಾಡುಗಳ ಸೊಗಸು, ಅರ್ಥ ಎಲ್ಲವೂ ಚೆನ್ನಾಗಿ ಮನದಟ್ಟಾಗಿತ್ತು. ಆದರೆ, ಆ ಹಾಡು ಹಾಡುತ್ತಿದ್ದವರು ಹಲವರು ನಿಧನರಾಗಿದ್ದರು. ಕೆಲವು ಹೆಣ್ಣುಮಕ್ಕಳು ಮದುವೆಯಾಗಿ ಬೇರೆ ಊರಿಗೆ ಹೋಗಿದ್ದರು. ಹೀಗಾಗಿ ಪದಗಳು ಮತ್ತಷ್ಟು ನಷ್ಟವಾಗುವ ಮುನ್ನ ಅವುಗಳನ್ನು ಸಂಗ್ರಹಿಸಬೇಕೆಂಬ ಆಸೆ ಬಲವಾಯಿತು. ಪೂರಕವಾಗಿ ಕಾಲೇಜು ವ್ಯಾಸಂಗವನ್ನು ನಿಲ್ಲಿಸಿ ಹಳ್ಳಿಗೆ ಬಂದು ನಿಂತ ಹಿರಿಯ ತಮ್ಮ ರಾಮಸ್ವಾಮಿ ಹಾಗೂ ಕಿರಿಯ ತಮ್ಮ ಕೃಷ್ಣಮೂರ್ತಿ. ಹಳ್ಳಿಯ ಪದ್ಧತಿಗಳಲ್ಲಿ ಹಳ್ಳಿಯವರಲ್ಲಿ ಶ್ರದ್ಧೆ ಮೂಡಿಸಲು ಯತ್ನಿಸಿದರು. ಆರೇಳು ವರ್ಷ ಶ್ರಮಪಟ್ಟು ಹಾಡುಗಳನ್ನು ಸಂಗ್ರಹಿಸಿದರು.

ಈ ಹಾಡುಗಳಲ್ಲಿ ಕೆಲವು ಜಯ ಕರ್ನಾಟಕ, ಸರಸ್ವತಿ, ಪ್ರಬುದ್ಧ ಕರ್ಣಾಟಕ, ವಿಚಾರವಾಹಿನಿ ಮೊದಲಾದ ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾದವು. ಹಿರಿಯರಾದ ಮಾಸ್ತಿಯವರು ಈ ಪ್ರಯತ್ನವವ್ನು ಮೆಚ್ಚಿ ಹರಿಸಿದರು. ಸಂಗ್ರಹಿತವಾದ ಪದಗಳನ್ನು ಹಾಡಿಸಿ ಕೇಳಿದ್ದಲ್ಲದೆ, ಸಾಹಿತಿಗಳ ಗೋಷ್ಠಿಗಳನ್ನು ಸೇರಿಸಿ ಅಲ್ಲೂ ಹಾಡಿಸಿ ಪ್ರಚಾರಮಾಡಿದರು.

ಈ ಎಲ್ಲ ಪ್ರಯತ್ನಗಳಿಂದ ಎಲ್. ಗುಂಡಪ್ಪನವರಿಗೆ ತುಂಬು ಪ್ರೋತ್ಸಾಹ ಸಿಕ್ಕಿ, ಪುಸ್ತಕ ರೂಪದಲ್ಲ ಪ್ರಕಟಿಸುವ ಸಾಹಸ ಮಾಡಿದರು.

ಈ ಸಂಗ್ರಹದ ಬಹು ಆಕರ್ಷಕ ಅಂಶವೆಂದರೆ ಅದನ್ನು ಸಂಪಾದನೆಮಾಡಿ ಪದಗಳನ್ನು ವಿಂಗಡಣೆ ಮಾಡಿರುವ ರೀತಿ. ಪ್ರತಿಯೊಂದು ವಿಂಗಡಣೆಗೂ ತೆನೆ ಎಂದು ಹೆಸರಿಸಿದ್ದಾರೆ. ಕೋಲಾಟದ ಪದಗಳು, ತಿಂಗಳು ಮಾವನ ಪದಗಳು, ರಾಗಿಕಲ್ಲಿನ ಪದಗಳು ಎಂಬಿತ್ಯಾದಿಯಾಗಿ ಒಟ್ಟು ಎಂಟು ತೆನೆಗಳಿವೆ. ಮೊಟ್ಟಮೊದಲ ಸಲವಾಗಿ ಬ್ರಾಹ್ಮಣರ ಹಾಡುಗಳನ್ನು ಜನಪದಗೀತೆಗಳೆಂದು ಗುರ್ತಿಸಿರುವುದನ್ನು ನಾವು ಕಾಣಬಹುದು. ಲಾವಣಿಗಳ ಸಂಗ್ರಹದಲ್ಲಿ ಟಿಪ್ಪು ಸುಲ್ತಾನನ ಬೀಳಿನ ಹಾಡನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ತಂದಿದ್ದಾರೆ ಗುಂಡಪ್ಪನವರು. ಪುಸ್ತಕದ ಕೊನೆಯಲ್ಲಿ ಟಿಪ್ಪಿ ಅನುಬಂಧಗಳು ಗುಂಡಪ್ಪನವರ ವಿಶಿಷ್ಟ ಛಾಪು ಮೂಡಿಸಿವೆ. ಪ್ರತಿ ತೆನೆಗೂ ಆ ಹಾಡುಗಳಿಗೆ ಸಂಬಂಧಪಟ್ಟ ರೇಖಾಚಿತ್ರಗಳಿವೆ.

ಈ ರೀತಿ ಸರ್ವಾಂಗ ಸುಂದರವಾಗಿ ಮೂಡಿ ಬಂದಿರುವ 'ನಾಡಪದಗಳು' ಜಾನಪದ ಸಂಗ್ರಹ ಹೇಗಿರಬೇಕೆಂಬುದಕ್ಕೆ ಮಾದರಿಯಾಗಿದೆ. ಸಂಗ್ರಾಹಕರ ಹಾಗೂ

ಸಂಪಾದಕರ ಕೆಲಸಗಳಲ್ಲಿ ಇರುವ ವ್ಯತ್ಯಾಸ ಮತು ಸಂಬಂಧಗಳನ್ನು ಈ ಸಂಗ್ರಹದಿಂದ ತಿಳಿಯಬಹುದು. ಬಿಎಂಶ್ರೀ ಅವರು ತಮ್ಮ ಶಿಷ್ಯನ ಈ ಕೃತಿಯನ್ನು ಅಚ್ಚಿಗೆ ಸಿದ್ಧಪಡಿಸಿದಾಗಲೇ ಮೊದಲಿನಿಂದ ಕೊನೆಯವರೆಗೂ ಓದಿ ನೋಡಿ ಪರಿಷ್ಕರಿಸಿ ಕೊಟ್ಟರು. ತಮಗೆ ಗುರದಕ್ಷಿಣೆ ಸಂದಿತೆಂದು ಸಂತೋಷಪಟ್ಟರು. ಪದಗಳ ಸಂಗ್ರಹದ ಒಂದು ಹಸ್ತಪ್ರತಿಯನ್ನು ಆಗ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರಿಗೆ ಅರ್ಪಿಸಿದಾಗ, ಅವರಿಂದ ಸಂತೋಷದ ಕುರುಹಾಗಿ ನೂರು ರೂಪಾಯಿ ಮೆಚ್ಚು ದೊರಕಿತು. ಪುಸ್ತಕ 1947ರಲ್ಲಿ ಮುದ್ರಿತವಾಯಿತು. ಪುಸ್ತಕದ ಪ್ರಕಟಣೆಗಾಗಿ ತಾವು ಸಾಲಗಾರರಾಗಿದ್ದನ್ನು ಎಲ್. ಗುಂಡಪ್ಪನವರು ಬಿನ್ನಹದಲ್ಲಿ ತಿಳಿಸಿದ್ದಾರೆ.

ಒಂದು ನೋವಿನ ಸಂಗತಿ ಎಂದರೆ, ಕರ್ನಾಟಕ ಜಾನಪದ ಅಕಾಡೆಮಿಯು ಕೆಲವು ವರ್ಷಗಳ ಹಿಂದೆ ಪ್ರಕಟಿಸಿದ 'ಜಾನಪದ ತಲೆಮಾರು' ಪುಸ್ತಕದಲ್ಲಿ ಸಂಗ್ರಹದ ಬಗೆಗೆ ಒಡಕು ಮಾತು ಮುದ್ರಿತವಾಗಿದೆ. 'ನಾಡಪದಗಳು' ಪುಸ್ತಕ ಈಗ ಅಲಭ್ಯವಾಗಿರುವುದರಿಂದ ಸಾಹಿತ್ಯಾಭ್ಯಾಸಿಗಳು ಆ ಮಾತುಗಳನ್ನು ನಂಬಿಬಿಡುವ ಅಪಾಯ ಇದೆ.

'ಮತಿಘಟ್ಟ ಕೃಷ್ಣಮೂರ್ತಿಯವರ ಮೊದಲ ಕೃತಿ 1947ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ 'ನಾಡಪದಗಳು'. ಇದು ಅವರ ಅಣ್ಣನವರಾದ ಎಲ್. ಗುಂಡಪ್ಪನವರ ಹೆಸರಿನಲ್ಲಿ ಪ್ರಕಟವಾಗಿದ್ದರೂ, ಈ ಕೃತಿಯಲ್ಲಿರುವ ಗೀತೆಗಳನ್ನು ವಾಸ್ತವವಾಗಿ ಸಂಗ್ರಹಿಸಿದವರು ಕೃಷ್ಣಮೂರ್ತಿ ಮತ್ತು ಇವರ ಅಣ್ಣ ಮುತ್ತು ರಾಮಸ್ವಾಮಿ' ಎಂದು ಜಾನಪದ ತಲೆಮಾರು - 1 ಗ್ರಂಥದಲ್ಲಿ ತಪ್ಪು ಮಾಹಿತಿ ನೀಡಲಾಗಿದೆ.

ವಾಸ್ತವವಾಗಿ ಪುಸ್ತಕದಲ್ಲಿ ಆಯ್ದವರು ಮುತ್ತುರಾಮಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿಗಳು ಎಂದು ಮುದ್ರಿತವಾಗಿದೆ. ನಂತರ ಎಲ್. ಗುಂಡಪ್ಪನವರ ಹೆಸರು ಸಂಪಾದಕ ಪ್ರಕಾಶಕ ಎಂದು ಮುದ್ರಿತವಾಗಿದೆಯೇ ಹೊರತು ಪುಸ್ತಕ ಎಲ್. ಗುಂಡಪ್ಪನವರ ಹೆಸರಿನಲ್ಲಿ ಪ್ರಕಟವಾಗಿಲ್ಲ. ಎಲ್. ಗುಂಡಪ್ಪನವರು ಸ್ವತಃ ಉದ್ದಾಮ ಪಂಡಿತರು. ತಮ್ಮ ಕುಟುಂಬ ವರ್ಗದವರನ್ನೂ ಶಿಷ್ಯರನ್ನೂ ಉತ್ತೇಜಿಸಿ, ಮುನ್ನಡೆಸುತ್ತಿದ್ದರು. ಬೇರೆಯವರ ಕೃತಿಗಳನ್ನು ತಮ್ಮ ಹೆಸರಿನಲ್ಲಿ ಹಾಕಿಕೊಳ್ಳುವ

ಅಗತ್ಯವಾಗಲೀ ಮನೋಧರ್ಮವಾಗಲೀ ಅವರಿಗೆ ಎಳ್ಳಷ್ಟೂ ಇರಲಿಲ್ಲ. ಅಲ್ಲದೆ ಪುಸ್ತಕದ ಬಿನ್ನಹದಲ್ಲಿ ಗುಂಡಪ್ಪನವರು ನೀಡಿರುವ ವಿವರಣೆಗಳಿಂದ 'ನಾಡಪದಗಳು' ಪುಸ್ತಕವು ಎಲ್. ಗುಂಡಪ್ಪನವರ ಹೆಸರಿನಲ್ಲಿ ಪ್ರಕಟವಾಗಲಿಲ್ಲ ಎನ್ನುವುದು ಸುಸ್ಪಷ್ಟ. ಸತ್ಯಸಂಧರಾದ ಗುಂಡಪ್ಪನವರ ಹೆಸರು ಕೆಡಿಸಲು ಮಾಡಿರುವ ಪ್ರಯತ್ನ ಇದೆಂದು ಹೇಳಬಹುದು.

ಆರ್ಥಿಕವಾಗಿ ಸಾಹುಕಾರರಲ್ಲದ ಎಲ್. ಗುಂಡಪ್ಪನವರು ಈ 'ನಾಡಪದಗಳು' ಪುಸ್ತಕದ ಪ್ರಕಟಣೆಗಾಗಿ ಸಾಲ ಮಾಡಿದಾಗ ಅವರ ಕುಟುಂಬದವರೂ ಕೂಡ ನಾನಾ ಕ್ಲೇಷಗಳಿಗೆ ಗುರಿಯಾದರು. '

ಸಂಸ್ಕೃತದಿಂದ

ಬಾಲ್ಯದಲ್ಲೇ ಕಾವ್ಯ ಮನೋಧರ್ಮ ಬೆಳೆಸಿಕೊಂಡಿದ್ದ ಎಲ್. ಗುಂಡಪ್ಪನವರು, ಚಿಕ್ಕಮಗಳೂರಿನಲ್ಲಿ ಹೈಸ್ಕೂಲು ಕಲಿಯುತ್ತಿದ್ದ ಸಂದರ್ಭದಲ್ಲಿ ಜಗದ್ಗುರು ಶ್ರೀ ಚಂದ್ರಶೇಖರ ಸ್ವಾಮಿಗಳಿಗೆ ಸಂಸ್ಕೃತದಲ್ಲಿ ಶ್ಲೋಕ ಬರೆದು ಅರ್ಪಿಸುವಷ್ಟು ಕಾವ್ಯ ಪ್ರೌಢಿಮೆ ಬೆಳೆಸಿಕೊಂಡಿದ್ದರು.

ತಮಗೆ ಮೆಚ್ಚಾದ ಸಾಹಿತ್ಯವನ್ನು, ಅದು ಬೇರೆ ಭಾಷೆಯಲ್ಲಿದ್ದರೆ ಕನ್ನಡಕ್ಕೆ ಭಾಷಾಂತರಿಸಬೇಕೆನ್ನುವ ಪ್ರವೃತ್ತಿ ಅವರಲ್ಲಿ ಚಿಕ್ಕಂದಿನಿಂದಲೇ ಬೆಳೆದುಕೊಂಡು ಬಂದಿತ್ತು. ಈ ಪರಿಪಾಠ ಅವರನ್ನು ಭಾಸ ಮಹಾಕವಿಯ ನಾಟಕಗಳನ್ನು ಕನ್ನಡಕ್ಕೆ ತರಲು ಪ್ರೇರೇಪಿಸಿತು. ಭಾಸ ಮಹಾಕವಿಯ ಕೃತಿಗಳನ್ನು ಭಾಷಾಂತರಿಸುವುದಕ್ಕೂ ಮೊದಲು ಅವರು 1923ರಲ್ಲೇ ಮುಕುಂದಮಾಲಾ ಸ್ತೋತ್ರವನ್ನು ಅನುವಾದ ಮಾಡಿದರು.

ಜಯದೇವ ಕವಿಯ ಗೀತ ಗೋವಿಂದ ಕಾವ್ಯವನ್ನೂ ಸಹ ಭಾಷಾಂತರ ಮಾಡಿದರು. ಈ ಎರಡೂ ಕೃತಿಗಳೂ ಹಸ್ತಪ್ರತಿಯಲ್ಲಿವೆ.

ಕುಲಶೇಖರ ಆಳ್ವಾರರು ಸಂಸ್ಕೃತದಲ್ಲಿ ರಚಿಸಿರುವ ಮುಕುಂದಮಾಲಾ ಸ್ತೋತ್ರದಲ್ಲಿ ಭಗವದ್ಗೀತೆಯ ಸಾರಸರ್ವಸ್ವ ಅಡಗಿದೆ. ಒಟ್ಟು 40 ಶ್ಲೋಕಗಳಿವೆ. ಇದನ್ನು ಅನೇಕರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಮೂಲದ ಕಾವ್ಯ ಸೌಂದರ್ಯವನ್ನು ಗಮನಿಸಕೊಂಡು ಕನ್ನಡಕ್ಕೆ ಪದ್ಯರೂಪದಲ್ಲಿ ಅಳವಡಿಸಿ ಯಶಸ್ವಿಯಾದವರಲ್ಲಿ ಎಲ್. ಗುಂಡಪ್ಪನವರು ಒಬ್ಬರು. ತ್ರಿಪದಿ, ರಗಳೆ.

ಕಂದ ಮೊದಲಾದ ಛಂದೋ ರಚನೆಗಳಲ್ಲಿ ನಿಷ್ಣಾತರಾದ ಎಲ್. ಗುಂಡಪ್ಪನವರು ಅನುವಾದಕ್ಕೆ ಭಾಮಿನಿ ಷಟ್ಪದಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅನುವಾದಿಸಿದ ಮೇಲೆ ಮತ್ತೆ ಮತ್ತೆ ಮೂಲಕ್ಕೆ ಹೋಲಿಸಿ ನೋಡಿದ್ದಾರೆ. ಹಸ್ತಪ್ರತಿ ಹಂತದಲ್ಲೇ ಬರೆದುದನ್ನು ತಾವೇ ಇನ್ನೊಮ್ಮೆ ಪರಿಶೀಲಿಸಿ ತಿದ್ದಿದ ಪಾಠಗಳು ಇಲ್ಲಿವೆ. ಓದುಗರಿಗೆ ನೀಡುವ ಅನುವಾದ ಸಾಕಷ್ಟು ಪರಿಷ್ಕೃತವಾಗಿದೆ.

ಗುಂಡಪ್ಪನವರು ತಮ್ಮ ಈ ಅನುವಾದವನ್ನು ಸೌಮ್ಯ ಕೇಶವದೇವರಿಗೆ ಅರ್ಪಿಸುತ್ತಾ ಕೃತಿಯ ಕೊನೆಯಲ್ಲಿ ಹೀಗೆ ಮಂಗಳ ಹಾಡಿದ್ದಾರೆ.

ಶ್ರೀ ಮುಕುಂದನ ನುತಿಯನಿದ ಸು
ಪ್ರೇಮದಿ ಕನ್ನಡಿಸಿ ವರದಂಗೆ
ಕಾಮನಯ್ಯಗೆ ಸೌಮ್ಯ ಕೇಶವ ದೇವಗರ್ಪಿಸಿದೆ
ಆ ಮುಕುಂದನು ಸರ್ವಲೋಕದ
ಕಾಮವನು ಸಲಿಸುತ್ತ ಯೋಗ
ಕ್ಷೇಮ ದೀಕ್ಷೆಯ ವಹಿಸಿ ನೀಡಲಿ ಜಗಕೆ ಮಂಗಳವ

ಎಲ್. ಗುಂಡಪ್ಪನವರು ಜಯದೇವಿ ಕವಿ ವಿರಚಿತ 'ಗೀತಗೋವಿಂದ' ಕಾವ್ಯದ ಶ್ಲೋಗಳನ್ನು ಸಹ ಅನುವಾದಿಸಿದ್ದಾರೆ.

'ಶ್ರೀ ಮುಕುಂದಮಾಲಾ ಸ್ತೋತ್ರ' ಹಾಗೂ 'ಗೀತಗೋವಿಂದ' ಎರಡೂ ಹಸಪ್ರತಿಯಲ್ಲಿವೆ.

ಎಲ್. ಗುಂಡಪ್ಪನವರು ಸಂಸ್ಕೃತದಿಂದ ಕನ್ನಡಕ್ಕೆ ತಂದ ಇತರ ಕೃತಿಗಳೆಂದರೆ, ಭಾಸ ಮಹಾಕವಿ ವಿರಚಿತ ನಾಟಕಗಳು

'ಭಾಷಾಂತರದಲ್ಲಿ ಸಾಧ್ಯವಾದ ಮಟ್ಟಿಗೂ ಅಚ್ಚಗನ್ನಡ ಪದಗಳನ್ನು ಬಳಸಬೇಕೆಂಬ ಗುರಿ ಇಟ್ಟುಕೊಂಡಿದ್ದೇನೆ. ಕೇವಲ ಭಾವವೇ ಅಲ್ಲದೆ ಪದದ ಅರ್ಥವೂ ಅದೇ ಕ್ರಮದಲ್ಲಿ ಮೂಡುವಂತೆ ಕನ್ನಡಿಸಲು ಪ್ರಯತ್ನ ಮಾಡಿದ್ದೇನೆ' ಎಂದು 'ಚಾರುದತ್ತ' ನಾಟಕದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಈ ಒಂದು ಆಶಯ ಉದ್ದೇಶ ಅವರ ಎಲ್ಲ ಭಾಷಾಂತರಗಳಲ್ಲೂ ಸಾಮಾನ್ಯವಾಗಿ ಕಾಣಸಿಗುವ ಅಂಶ.

ಮೈಸೂರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ಎಲ್. ಗುಂಡಪ್ಪನವರಿಗೆ ಸಂಸ್ಕೃತದ ಬಗ್ಗೆ ತಿಳುವಳಿಕೆ ಒಂದು ಅಚ್ಚುಕಟ್ಟಾದ ಮಾರ್ಗ

ಹಿಡಿಯಲು ಅನುಕೂಲ ಮಾಡಿಕೊಟ್ಟವರು ಅವರ ಪೂಜ್ಯ ಗುರುಗಳಾದ ಸಂಸ್ಕೃತ ಪ್ರೊಫೆಸರಾಗಿದ್ದ ಎಂ. ಹಿರಿಯಣ್ಣ ಎಂ.ಎ., ಎಲ್.ಟಿ. 'ಅವರು ನನಗೆ ಸಂಸ್ಕೃತ ನಿಜವಾದ ಸವಿಯನ್ನು ತೋರಿಸಿಕೊಟ್ಟು ಅದರಲ್ಲಿ ಆಕ್ಕರೆಯನ್ನು ಉಕ್ಕಿಸಿದರು. ಸಂಸ್ಕೃತದ ಒಳ್ಳೆಯ ಕೃತಿಗಳನ್ನು ಕನ್ನಡಿಸುವ ನನ್ನ ಪ್ರಯತ್ನವನ್ನು ಮೆಚ್ಚಿ ಹರಸಿ ಹುರಿದುಂಬಿಸಿದರು. ನನಗಿದ್ದ ಹಲವು ಸಂದೇಹಗಳನ್ನು ಪರಿಹರಿಸಿದರು' ಎಂಬುದಾಗಿ ಎಲ್. ಗುಂಡಪ್ಪನವರು ತಮ್ಮ ಗುರುಗಳಿಗೆ ವಂದನೆ ಸಲ್ಲಿಸಿದ್ದಾರೆ.

'ಭಾಸನ ಏಕಾಂಕ ನಾಟಕಗಳನ್ನು ಪರೀಕ್ಷೆಯ ಅವಶ್ಯಕತೆಗಾಗಿ ಓದಿದಾಗ' ಅವನ್ನು ಕನ್ನಡಿಸಬೇಕೆಂಬ ಆಸೆ ತಲೆದೋರಿತು. ಹೀಗೆ ಅವರು ಅನುವಾದಿಸಿದ ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತ ಘಟೋತ್ಕಚ, ಕರ್ಣಭಾರ, ಊರುಭಂಗ- ಈ ಐದು ಏಕಾಂಕ ನಾಟಕಗಳನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರು 1933ರಲ್ಲಿ ಪ್ರಕಟಿಸಿದರು.

ನಾಡಿನ ಹಲವು ಹಿರಿಯ ವಿದ್ವಾಂಸರು ಈ ಭಾಷಾಂತರವನ್ನು ಮೆಚ್ಚಿ ಪ್ರೋತ್ಸಾಹಿಸಿದರು. ಅನೇಕ ರಸಿಕರು ಇಲ್ಲಿನ ಕೆಲವು ನಾಟಕಗಳನ್ನು ಅಭಿನಯಿಸಿದರು. ಮೈಸೂರು, ಮದರಾಸು ಮತ್ತು ಆಂಧ್ರ ವಿಶ್ವವಿದ್ಯಾನಿಲಯಗಳಲ್ಲಿ ಕಾಲೇಜು ತರಗತಿಗಳಲ್ಲಿ ಪಠ್ಯಪುಸ್ತಕವಾಗಿ ನಿಯಮಿಸಲ್ಪಟ್ಟಿತು. ಇದು ಪ್ರಕಟವಾದ ವರ್ಷದಲ್ಲಿ ದೇವರಾಜ ಬಹದ್ದೂರ್ ಧರ್ಮನಿಧಿಯ ಸಾಹಿತ್ಯ ಶಾಖೆಯವರು 'ಭಾಸನ ಏಕಾಂಕ ನಾಟಕಗಳು' ಪುಸ್ತಕಕ್ಕೆ 300 ರೂಪಾಯಿ ಬಹುಮಾನ ನೀಡಿ ಗೌರವಿಸಿದರು.


ಈ ಪುಸ್ತಕ ಮೂರು ಮುದ್ರಣಗಳನ್ನು ಕಂಡಿತು. 1945ರಲ್ಲಿ ಎರಡನೇ ಮುದ್ರಣ, ಮೂರನೇ ಮುದ್ರಣ 1947ರಲ್ಲಿ. ಈ ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ., ಬಿ.ಎಸ್.ಸಿ., ಪರೀಕ್ಷೆಗಳಿಗೆ ಪಠ್ಯ ಪುಸ್ತಕವಾಗಿ ಗೊತ್ತು ಮಾಡಿದ್ದರಿಂದ 1947ರಲ್ಲಿ ಪುನರ್ಮುದ್ರಣವಾಯಿತು.

'ಮಧ್ಯಮ ವ್ಯಾಯೋಗ' ನಾಟಕವನ್ನು ಶಂಭು ಹೆಗಡೆಯವರು ನವದೆಹಲಿಯಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಯಕ್ಷಗಾನ ಶೈಲಿಯಲ್ಲಿ ಪ್ರದರ್ಶಿಸಿದರು.

ಕೆ.ವಿ. ಸುಬ್ಬಣ್ಣನವರ 'ನೀನಾಸಂ - ತಿರುಗಾಟದಲ್ಲಿ' 'ದೂತ ಘಟೋತ್ಕಚ' ರಾಜ್ಯದಾದ್ಯಂತ ಪ್ರದರ್ಶಿತವಾಯಿತು.



ಪತ್ನಿಯೊಡನೆ





ಅಮೇರಿಕಾದಲ್ಲಿ ಪುಸ್ತಕ ವಾಚನ ಮತ್ತು ಸಂಧ್ಯಾವಂದನೆ

ಭಾಸ ಕವಿಯ ಪ್ರತಿಜ್ಞಾ ಯೌಗಂಧರಾಯಣ ನಾಟಕವನ್ನು ಕನ್ನಡಿಸಿದಾಗ, 'ಪ್ರಬುದ್ಧ ಕರ್ನಾಟಕದಲ್ಲಿ' ಕಂತುಗಳಲ್ಲಿ ಪ್ರಕಟವಾಯಿತು. ಅನಂತರ ಪತ್ರಿಕೆಯ ಸಂಪಾದಕರ ಅನುಮತಿ ಪಡೆದು ಎಲ್. ಗುಂಡಪ್ಪನವರು ನಾಟಕವನ್ನು 1937ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿದರು.

'ಚಾರುದತ್ತ' ನಾಟಕವನ್ನು 1939ರಲ್ಲೂ 'ಪಂಚರಾತ್ರ' ನಾಟಕವನ್ನು 1946ರಲ್ಲೂ ಪ್ರಕಟಿಸಿದರು. ಇವರು ಕನ್ನಡಕ್ಕೆ ತಂದಿರುವ ಭಾಸ ಕವಿಯ ಮತ್ತೊಂದು ನಾಟಕ ಎಂದರೆ 'ಸ್ವಪ್ನ ವಾಸವದತ್ತ'.

ಪ್ರತಿ ಪುಸ್ತಕಕ್ಕೂ ಅವರು ಬರೆದಿರುವ ಮುನ್ನುಡಿಯಲ್ಲಿ ಭಾಸಕವಿಯ ಅಧ್ಯಯನಕ್ಕೆ ಅಗತ್ಯವಾದ ಅನೇಕ ಮಾಹಿತಿಗಳು ದೊರಕುತ್ತವೆ. ಹಾಗೆಯೇ ಕೃತಿಗಳ ಕೊನೆಯಲ್ಲಿ ಒದಗಿಸಿರುವ ಟಿಪ್ಪಣಿಗಳಿಂದ ಸಂಶೋಧನೆ ಮಾಡಬಯಸುವವರಿಗೆ ಉಪಯುಕ್ತ ವಿಷಯಗಳು ಸಿಗುತ್ತವೆ. ಎಲ್. ಗುಂಡಪ್ಪನವರ ಈ ನಾಟಕಗಳ ಅನುವಾದಗಳು ವಿದ್ವಾಂಸರನ್ನು ಸಂತೋಷಗೊಳಿಸಿದೆ. ಅವರ ಪೂಜ್ಯ ಗುರುಗಳಾಗಿದ್ದ ಶ್ರೀ ಎಂ. ಹಿರಿಯಣ್ಣನವರು ಶಿಷ್ಯನ ಈ ಭಾಷಾಂತರವನ್ನು ತುಂಬ ಮೆಚ್ಚಿಕೊಂಡಿದ್ದಾರೆ

ಧಾರವಾಡ ಕರ್ನಾಟಕ ಕಾಲೇಜಿನ ಸಂಸ್ಕೃತ ಪ್ರೊಫೆಸರ್ ಆಗಿದ್ದ ಶ್ರೀ ಆರ್.ವಿ. ಜಾಗೀರ್‌ದಾರ್ (ಶ್ರೀರಂಗ) ಅವರು 'ಭಾಸ ಮಹಾಕವಿಯನ್ನು ಕನ್ನಡಿಗರ ಮುಂದಿರಿಸುವ ಕೈಚಳಕವು ಎಲ್. ಗುಂಡಪ್ಪನವರಲ್ಲಿ ಇದೆ' ಎಂದು ಕೊಂಡಾಡಿದ್ದಾರೆ.

ಸಂಸ್ಕೃತದ ಈ ಮಹಾಕೃತಿಗಳನ್ನು ಕನ್ನಡಕ್ಕೆ ತಂದ ಎಲ್. ಗುಂಡಪ್ಪನವರು ಅನಂತರದ ದಿನಗಳಲ್ಲಿ ಸಂಸ್ಕೃತದ ಪ್ರಾರ್ಥನಾ ಶ್ಲೋಕಗಳನ್ನು ತಮ್ಮ ಮೊಮ್ಮಕ್ಕಳ ಸಲುವಾಗಿ ಅನುವಾದಿಸಿದ್ದಾರೆ. ಆದರೆ ಅವು ಹಸ್ತಪ್ರತಿಯಲ್ಲಿವೆ.

ಇಂಗ್ಲಿಷ್‌ನಿಂದ

ಬಹಳ ಹಿಂದಿನದೆಂಬ ಒಂದು ಕಾರಣದಿಂದ
ಲೆಲ್ಲವೂ ನಿರ್ದೋಷವಾಗಲರಿದು
ಅಂತೆಯೇ ದೂಷಿತಪೂರ್ಣವಾಗಲರಿದು
ಬಲ್ಲವರವೆಲ್ಲವನು ಪರಿಕಿಸುತ ಸತ್ಕಾವ್ಯ
ವೊದಂನೇ ಮೆಚ್ಚುತ್ತಾದರಿಸುತಿಹರು
ದಡ್ಡರಿದನರಿಯದೆಯೆ ಮತ್ತೊಬ್ಬರಭಿಮತದೆ
ತಮ್ಮ ಬುದ್ಧಿಯ ನೆಲೆಯ ಕದಲಿಸುವರು

-1925ರಲ್ಲಿ ಎಲ್. ಗುಂಡಪ್ಪನವರು ಅನುವಾದಿಸಿದ ಮಹಾಕವಿ ಕಾಳಿದಾಸನ ಈ ಪದ್ಯದಲ್ಲಿ ಶ್ರೀಯುತರ ಕಾವ್ಯರಚನೆಯ ಆಶಯ ಅಡಗಿದೆ. ಇದೇ ರೀತಿ ಅವರು ಆರಿಸಿಕೊಂಡ ಸಾಹಿತ್ಯ ಕೃತಿಗಳು ಮೇಲ್ನೋಟಕ್ಕೆ ಬಹ ಹಿಂದಿನದು ಎನ್ನಿಸಿದರೂ, ಅವು ಇಂದಿಗೂ ಮುಂದಿಗೂ ಪ್ರಸ್ತುತ.

ಈ ಹಿನ್ನೆಲೆಯಲ್ಲಿ ಎಲ್. ಗುಂಡಪ್ಪನವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿರುವ ಕೃತಿಗಳು ಎಷ್ಟು ಮಹತ್ತ್ವ ಪೂರ್ಣವಾಗಿದೆ ಎಂಬುದು ವಿದಿತವಾಗುತ್ತದೆ.

ಅನುವಾದಕನಾಗಿ ಎಲ್. ಗುಂಡಪ್ಪನವರು ಮಹತ್ತರ ಧ್ಯೇಯ ಇಟ್ಟುಕೊಂಡಿದ್ದರು. ಯಾವುದನ್ನೂ ರೂಪಾಂತರ ಮಾಡದೆ, ಯಥಾವತ್ತಾಗಿ ಭಾಷಾಂತರ ಮಾಡುವುದರಿಂದ ಮೂಲ ಕೃತಿಯ ಪರಿಚಯವನ್ನು ಕನ್ನಡಿಗರಿಗೆ ಪರಿಚಯಿಸುವುದು ಹಾಗೂ ಭಾಷಾಂತಗೊಳಿಸುತ್ತಿರುವ ಭಾಷೆಯ ಸೊಗಸನ್ನು ಓದುಗರಿಗೆ ಮನದಟ್ಟು ಮಾಡಿಕೊಡುವುದು.

ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ತಾವು ವಿದ್ಯಾರ್ಥಿಯಾಗಿದ್ದಾಗಲೇ ಭಾಷಾಂತರ ಮಾಡುವ ಅಭ್ಯಾಸ ಬೆಳೆಸಿಕೊಂಡಿದ್ದರು. ಇಂಗ್ಲಿಷ್ ಕವಿ ಮಾಥ್ಯೂ ಅರ್ನಾಲ್ಡನ ಒಂದೆರಡು ಚಿಕ್ಕ ಪದ್ಯಗಳನ್ನು ಕನ್ನಡಕ್ಕೆ ತಂದಿದ್ದರು. ಗುರುಗಳಾದ ಬಿಎಂಶ್ರೀಯವರ 'ಇಂಗ್ಲಿಷ್ ಗೀತಗಳು' ಕೃತಿಯ ಭಾಷಾಂತರ ಕಾರ್ಯ ಗುಂಡಪ್ಪನವರ ಮೇಲೆ ತುಂಬ ಪ್ರಬಾವ ಬೀರಿತು. ಹಾಗಾಗಿ ಎಂ. ಎ. ವಿದ್ಯಾರ್ಥಿಯಾಗಿ ಎಲ್. ಗುಂಡಪ್ಪನವರು ಕನ್ನಡಸಿದ ಮ್ಯಾಥ್ಯೂ ಆರ್ನಾಲ್ಡರ 'ಸೊಹ್ರಾಬ್ ಮತ್ತು ರುಸ್ತುಂ' ನೀಳ್ಗವನಕ್ಕೆ ಆಧುನಿಕ ಕನ್ನಡ ಕವಿತಾ ರಚನೆಗಾಗಿ 1930ರಲ್ಲಿ ಮೈಸೂರು ವಿಶ್ವವಿದ್ಯಾನಿಯಲಯದ 'ರಜತೋತ್ಸವ ಸ್ವರ್ಣಪದಕ' ಲಭಿಸಿತು. ಆನಂತರ ಷಾನಾಮದ ಆಧಾರದ ಮೇಲೆ ಸೊಹ್ರಾಬ್ - ರುಸ್ತುಮರ ಕತೆಯನ್ನು ಬಹು ವಿಶದವಾಗಿ ಬರೆದರು. ನೀಳ್ಗವನವನ್ನೂ, ಕತೆಯನ್ನೂ ಒಂದುಗೂಡಿಸಿ ಪುಸ್ತಕವನ್ನು ಹೊರತಂದರು. ಈ ಕತೆಯನ್ನು ಸ್ವಲ್ಪ ಪರಿಷ್ಕರಿಸಿ ವಯಸ್ಕರ ಶಿಕ್ಷಣದ ಮಾಲೆಯಲ್ಲಿ ಮುದ್ರಿಸಲಾಯಿತು.

ಆನಂತರದ ಮಹತ್ತ್ವದ ಕೃತಿ 'ಟಾಲ್‌ಸ್ಟಾಯ್ ಅವರ ಕತೆಗಳು' ರಷ್ಯಾದ ಕಾಂಟ್‌ಲಿಯೋ ಟಾಲ್‌ಸ್ಟಾಯ್ ಋಷಿ ಸದೃಶ ವ್ಯಕ್ತಿತ್ವದವರು, ಉತ್ತಮ ಕಲೆಗಾರರು ಶ್ರೇಷ್ಠ ಸಾಹಿತಿಗಳು. ರಷ್ಯ ದೇಶದ ಪುನರುಜ್ಜೀವನಕ್ಕಾಗಿ ವಿಶೇಷವಾಗಿ ದುಡಿದವರು.

ಇವರ 20 ಕಥೆಗಳನ್ನು ಗುಂಡಪ್ಪನವರು ಮೊದಲ ಮುದ್ರಣದಲ್ಲಿ ಪ್ರಕಟಿಸಿದರು. ಪ್ರಕಾಶಕರು ಬೆಂಗಳೂರಿನ ಭಾರತಿ ಪ್ರಕಟಣ ಮಂದಿರ ಇವರು. 1934ರಲ್ಲಿ ಮುದ್ರಣ ಕಂಡ ಈ ಪುಸ್ತಕ ದಿಂದ 1935ನೇ ಇಸವಿಯಲ್ಲಿ ಆಯ್ದ ಕೆಲವು ಕತೆಗಳನ್ನು (ಎಲ್. ಎಸ್.) ಲೋಯರ್ ಸೆಕೆಂಡರಿ ಪರೀಕ್ಷೆಗೆಂದು ಪಠ್ಯ ಪುಸ್ತಕವನ್ನಾಗಿ ಮಾಡಲಾಯಿತು.

ಇದೇ ಸಂಗ್ರಹಕ್ಕೆ ಇನ್ನೂ 3 ಕಥೆಗಳನ್ನು ಸೇರಿಸಿ, ಗುಂಡಪ್ಪನವರು 23 ಕಥೆಗಳನ್ನು ಮತ್ತೆ 1964ರಲ್ಲಿ ಪ್ರಕಟಿಸಿದರು. 2005ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಮತ್ತೆ ಈ ಪುಸ್ತಕವನ್ನು ಕನ್ನಡ ಜನತೆಗೆ ಅರ್ಪಿಸಿದಾಗ ಎಲ್. ಗುಂಡಪ್ಪನವರು ಬದುಕಿರಲಿಲ್ಲ, ಆದರೆ ತಮ್ಮ ಕಥೆಗಳ ಕೃತಿಗಳ ಮೂಲಕ ಓದುಗರ ಹೃದಯದಲ್ಲಿ ಹಸಿರಾಗಿದ್ದರು. ಕೃತಿ ಪರ್ಕಟವಾದ ಕೆಲವೇ ತಿಂಗಳುಗಳಲ್ಲಿ ಸಾವಿರ ಪ್ರತಿಗಳೂ ಖರ್ಚಾಗಿ, ಪ್ರಾಧಿಕಾರವು ಮತ್ತೊಂದು ಆವೃತ್ತಿ ತಂದಿದ್ದು ಇದಕ್ಕೆ ಸಾಕ್ಷಿ. ಈ ಕಥೆಗಳಲ್ಲಿ ಬರುವ ಜನರ ಹೆಸರು ಮತ್ತು ಸ್ಥಳಗಳನ್ನು ನಮ್ಮ ದೇಶಕ್ಕೆ ಹೊಂದುವಂತೆ ಮಾರ್ಪಡಿಸಿ ಅನೇಕರು ಇದು ನಮ್ಮ ದೇಶದ್ದೇ ಕಥೆ ಎನ್ನುವಂತೆ ಬರೆದಿದ್ದಾರೆ. ಆದರೆ, ಇಂಥ ರೂಪಾಂತರಗಳಿಂದ ಮೂಲಕಥೆಯ ನಿಜಸ್ವರೂಪ , ಆ ದೇಶದವರ ಆಚಾರ ವಿಚಾರಗಳು ತಿಳಿಯುವುದಿಲ್ಲ. ಅಲ್ಲದೆ, ನಮ್ಮ ಮತದವರೂ ಸಾಧಿಸಿರುವ ಆತ್ಮ ಸಂಸ್ಕಾರವನ್ನೇ ಇತರ ದೇಶದವರೂ ಸಾಧಿಸಿದ್ದಾರೆಂಬ ತಿಳುವಳಿಕೆ ಮೂಡಲು ಸಹಾಯಕವಾಗುವುದಿಲ್ಲ. ಆದ್ದರಿಂದ ಈ ಕಥೆಗಳನ್ನು ಯಾವ ರೀತಿಯಲ್ಲೂ ಮಾರ್ಪಡಿಸದೆ ಇದ್ದಂತೆಯೇ ಭಾಷಾಂತರ ಮಾಡಿದ್ದೇನೆ' ಎಂದು ಎಲ್. ಗುಂಡಪ್ಪನವರು ಮೊದಲ ಮುದ್ರಣದ ಮುನ್ನುಡಿಯಲ್ಲಿ ತಿಳಿಸಿದ್ದಾರೆ.

ಟಾಲ್‌ಸ್ಟಾಯ್ ಅವರ ಕಥೆಗಳನ್ನೇ ಅಲ್ಲದೆ, Family Happiness ಕುಟುಂಬ ಸೌಖ್ಯ Krutzer Sonata ಕ್ರೂಟ್ಸರ್ ಸೊನಾಟ ಎಂಬ ಟಾಲ್‌ಸ್ಟಾಯ್ ವಿರಚಿತ ಕಾದಂಬರಿಗಳನ್ನು ಅನುವಾದಿಸಿದ್ದಾರೆ.

ಎಲ್. ಗುಂಡಪ್ಪನವರು ಇಂಗ್ಲಿಷ್ ಭಾಷೆಯ ಶ್ರೇಷ್ಠ ಕೃತಿಗಳನ್ನೇ ಭಾಷಾಂತರಕ್ಕೆ ಆರಿಸಿಕೊಂಡಿದ್ದಾರೆ.

ಆರ್. ಎಲ್. ಸ್ಟೀವನ್‌ಸನ್ನನ Dr. Jekyll and Mr. Hide ಎಂಬ ಖ್ಯಾತ ಕಾದಂಬರಿ ನರ - ರಾಕ್ಷಸ ಎಂಬ ಶೀರ್ಷಿಕೆಯಲ್ಲಿ ಕರ್ಮವೀರ ಸಾಪ್ತಾಹಿಕದಲ್ಲಿ ಧಾರವಾಹಿಯಾಗಿಯೂ ಪ್ರಕಟವಾಯಿತು. ರಾಬರ್ಟ್ ಲೂಯಿ ಸ್ಟೀವನ್ಸ್‌ನ್

ಬರೆದಿರುವ Bottle Imp ಎಂಬ ಕಾದಂಬರಿ ಬುಡ್ಡಿಯ ಭೂತ ಎಂಬ ಹೆಸರನ್ನು ತಳೆದಿದೆ. ಈ ಕೃತಿ ಹಸ್ತಪ್ರತಿಯಲ್ಲಿದೆ.

ಥಾಮಸ್ ಆಲ್ವ ಎಡಿಸನ್ ಮತ್ತು ಫ್ಲಾರೆನ್ಸ್ ನೈಟಿಂಗೇಲ್ ಅವರು ಅನುವಾದಿಸಿದ ಎರಡು ಜೀವನ ಚರಿತ್ರೆಗಳು

ಈಗ ಎಲ್ಲೆಡೆ ಜನಪ್ರಿಯವಾಗಿರುವ ನಾಸಿರುದ್ದೀನ್ ಖೋಜಾನ ಕಥೆಗಳನ್ನು ರಷ್ಯದ ಸೊಲೊವ್ಯೇವ್ ಲಿಯೋನಿದ್ ಎಂಬ ಲೇಖಕ 'ಅಡ್ವೆಂಚರ್ಸ್ ಇನ್ ಬುಖಾರ'ಎಂಬ ಕಾದಂಬರಿಯಲ್ಲಿ ಬಹು ಸ್ವಾರಸ್ಯಕರವಾಗಿ ಚಿತ್ರಿಸಿದ್ದಾನೆ. ಈ ಪುಸ್ತಕವನ್ನು ಎಲ್. ಗುಂಡಪ್ಪನವರು ಅಚ್ಚುಕಟ್ಟಾಗಿ 'ನಗೆ- ಹೊಗೆ' ಕೃತಿಯಾಗಿ ಭಾಷಾಂತರಿಸಿದ್ದಾರೆ.

ಖೋಜಾ ನಾಸಿರುದ್ದೀನ್ ಇಂದಿಗೂ ಒಂದು ದಂತಕಥೆ. ಶೋಷಿತರ ಪರವಾಗಿ ದನಿ ಎತ್ತುವ ವಿಲಕ್ಷಣ ವಿಚಕ್ಷಣೆಯ ಸಂಘಟಕ ಹಾಗೂ ಅಧಿಕಾರಸಾಹಿಯ ದಬ್ಬಾಳಿಕೆಗಳನ್ನು ಬಹಳ ಚಾಕಚಕ್ಯತೆಯಿಂದ ತಪ್ಪಿಸಿಕೊಳ್ಳುವ ಒಬ್ಬ ಮಾನವತಾವಾದಿ.

ಈ ಕೃತಿಯ ಅನುವಾದದಿಂದ ಎಲ್. ಗುಂಡಪ್ಪನವರು ಶೋಷಿತರ ಬಗ್ಗೆ ತಮ್ಮ ಕಾಳಜಿಗೆ ದನಿ ಕೊಟ್ಟಿದ್ದಾರೆ. ಪುಸ್ತಕ ಈಗ ಲಭ್ಯವಿಲ್ಲ.

ತಮಿಳಿನಿಂದ

ಎಲ್. ಗುಂಡಪ್ಪನವರು ಕನ್ನಡ - ತಮಿಳು ಭಾಷೆಗಳನ್ನು ಬೆಸೆಯಲು ಮಾಡಿದ ಕೆಲಸ ಅದ್ವಿತೀಯವಾದದ್ದು. ಈ ವಿದ್ವತ್ಪೂರ್ಣ ಕಾರ್ಯ ಅವರಿಗೆ ತಮಿಳು ನಾಡಿನಲ್ಲಿ ಅಪಾರ ಕೀರ್ತಿ ಮನ್ನಣೆಗಳನ್ನು ತಂದುಕೊಟ್ಟಿತು. ತಮಿಳು ಪ್ರಾಚೀನ ಕೃತಿಗಳನ್ನು ಆಧುನಿಕ ಕೃತಿಗಳನ್ನೂ, ಗದ್ಯಪದ್ಯ ಎಂಬ ಭೇದವಿಲ್ಲದೆ ಕನ್ನಡಿಸಿದರು. ಕನ್ನಡ ತಮಿಳುಗಳು ಒಂದೇ ಕುಟುಂಬದ ಭಾಷೆಗಳೆಂದು ಎಲ್ಲ ಸ್ತರಗಳಲ್ಲೂ ತೋರಿಸಲು ಪ್ರಯತ್ನಿಸಿದ್ದಾರೆ. ಈ ನಿಟ್ಟಿನಲ್ಲಿ ಅವರು ಮಾಡಿರುವ 'ತಿರುಕ್ಕುರಳ್' ಕೃತಿಯ ಅನುವಾದ ಅದ್ವಿತೀಯ ವಾದದ್ದು. ತಮಿಳು ಹಳೆಯ ಕನ್ನಡಕ್ಕೆ ಎಷ್ಟು ಹತ್ತಿರವಾದದ್ದು ಎಂದು ತೋರಿಸುವ ಉದ್ದೇಶದಿಂದ ಮೊದಲು 'ತಿರುಕ್ಕುರಳ್'ನ ಹಳಗನ್ನಡ ಭಾಷಾಂತರವನ್ನು 1952ರಲ್ಲಿ ಪ್ರಕಟಿಸಿದರು. ಆದರೆ ತಾವು ಮಾಡಿದ ಕೆಲಸ ಜನಸಾಮಾನ್ಯರನ್ನು ಹೆಚ್ಚಾಗಿ ತಲುಪಬೇಕೆಂದು 1960ರಲ್ಲಿ ಅದೇ ಕೃತಿಯ ಹೊಸಗನ್ನಡ ಭಾಷಾಂತರವನ್ನು ಹೊರತಂದರು. 'ದಕ್ಷಿಣ ಭಾರತ ಭಾಷಾಗ್ರಂಥ

ಸಹಾಯಕ ಸಂಸ್ಥೆ'ಯ ನೆರವಿನಿಂದ ಉ.ವೇ. ಸ್ವಾಮಿನಾಥ ಅಯ್ಯರ್ ಅವರು ಸಂಪಾದಿಸಿದ್ದ 'ಪೆರುಂಗತ್ತೈ' ಯನ್ನು 'ಉದಯಚರಿತ್ರೆ' ಸಂಗ್ರಹವಾಗಿ ಅನುವಾದಗೊಂಡಿತು. 'ನಾಲ್ಮಣಿ ಕಡಿಗೈ' ಎಂಬ ವಿಳಂಬಿನಾಗನಾರನ 104 ನೀತಿಪದ್ಯಗಳು 'ನಾಲ್ಮಣಿ ಕಡುಕು' ; ಸಾಹಿತ್ಯ ಅಕಾಡೆಮಿಗಾಗಿ 'ಭಾರತಿಯವರ ಕವಿತೆಗಳು' ; ಮಹೋಪಾಧ್ಯಾಯ ಸ್ವಾಮಿನಾಥ ಅಯ್ಯರ್ ಅವರ 'ನನ್ನ ಚರಿತ್ರೆ ('ಎನ್ ಚರಿತ್ತಿರಮ್') ; ರಾಜಾಜಿ ವಿರಚಿತ ಭಾರತ ಕಥೆ 'ವ್ಯಾಸರ್ ವಿರುನ್ದು'- 'ವ್ಯಾಸರ ಔತಣ' ಇವು ಎಲ್ಲ ಗುಂಡಪ್ಪ ಅವರ ಇತರ ಕೆಲವು ಮುಖ್ಯ ತಮಿಳು ಅನುವಾದಗಳು.

ತಿರುವಾಚಕಂ, ಶಿಲಪ್ಪದಿಗಾರಂ , ಪೆರಿಯಪುರಾಣ ಅವ್ವೈಯರ್ - ಇವು ಅವರು ಅನುವಾದಿರುವ ಇತರ ಪುರಾತನ ತಮಿಳು ಕಾವ್ಯಗಳು.

ಗುಂಡಪ್ಪನವರ ತಮಿಳು ಸೇವೆಯನ್ನು ಮನ್ನಿಸಿ, ಮದರಾಸಿನ ತಮಿಳು ಬರಹಗಾರರ ಸಂಘದವರು ನಾಗರಕೋಯಿಲಿನಲ್ಲಿ 1958ರಷ್ಟು ಹಿಂದೆಯೇ ಚಿನ್ನದ ಪದಕ ನೀಡಿ ಗೌರವಿಸಿದ್ದಾರೆ.

ತಮ್ಮ ಈ ಸಾಹಿತ್ಯ ಸೇವೆಗೆ ಸಿಕ್ಕಿದ ಮನ್ನಣೆ ಸಾಲದು ಎಂಬ ಅಂಶವನ್ನು ಕೂಡ ಅವರು ಗಮನಿಸದೆ ಅವ್ಯಾಹತವಾಗಿ ಮುವ್ವತ್ತು, ನಲವತ್ತು ಐವತ್ತರ ದಶಕಗಳಲ್ಲಿ ತಮಿಳಿನಿಂದ ಕನ್ನಡಕ್ಕೆ ತಂದದ್ದೇ ಹೆಚ್ಚು. ಈ ಅನೇಕ ಭಾಷಾಂತರಗಳನ್ನು ಸ್ವ ಇಚ್ಛೆಯಿಂದ , ಸ್ವತಂತ್ರವಾಗಿ ಕೈಗೊಂಡರು. ಕೆಲವನ್ನು ಸ್ವಪ್ರಯತ್ನದಿಂದ ಪ್ರಕಟವೂ ಮಾಡಿದರು.

ತಮ್ಮ ಜೀವಿತದ ಎಂಬತ್ತನೇ ವಯಸ್ಸನ್ನು ಸಮೀಪಿಸುತ್ತಿರುವಾಗಲೂ ಕೂಡ ಅವರು 'ರಮಣ ಮಹರ್ಷಿಗಳ ಕೃತಿಗಳನ್ನು ಪ್ರತಿಫಲಾಪೇಕ್ಷೆಯಿಲ್ಲದೆ, ಸಂಭಾವನೆಯನ್ನು ನಿರೀಕ್ಷಿಸದೆ ಕನ್ನಡಕ್ಕೆ ಅನುವಾದಿಸಿ ಕೊಟ್ಟರು. ಇಡೀ ಕೃತಿ ಹಸ್ತಪ್ರತಿಯಲ್ಲಿದೆ.

ನೀಲಂ ಪದ್ಮನಾಭನ್ ಅವರ 'ಪಲ್ಲಿ ಕೊಂಡ ಪುರಂ' ಕಾದಂಬರಿಯನ್ನು 'ಅನಂತಶಯನ' ಎಂದು ನ್ಯಾಷನಲ್ ಬುಕ್ ಟ್ರಸ್ಟ್‌ಗಾಗಿ ಅನುವಾದ ಮಾಡಿಕೊಟ್ಟ ಆಧುನಿಕ ಕಾದಂಬರಿ. ಈ ಕೆಲಸಗಳ ಮಧ್ಯೆ , ಆಕಾಶವಾಣಿಯು ಪ್ರತಿ ವರ್ಷ ನಡೆಸುವ ಅಖಿಲ ಭಾರತ ಭಾಷಾ ಕವಿಗಳ ಗೋಷ್ಠಿಯ ರಾಷ್ಟ್ರೀಯ ಕಾರ್ಯಕ್ರಮಗಳಿಗಾಗಿ ಆಧುನಿಕ ತಮಿಳು ಕವಿಗಳ ಹಲವು ಕವಿತೆಗಳನ್ನು ಪ್ರಸಾರಕ್ಕೆಂದು ಸಿದ್ಧಪಡಿಸಿದ್ದಲ್ಲದೆ, ಕನ್ನಡ

ಅವತರಣಿಕೆಗಳನ್ನು ಬಾನುಲಿಯಲ್ಲಿ ಪ್ರಸಾರ ಮಾಡಿದರು.

ತಾವು ಅನುವಾದಿಸಿದ ಕಾವ್ಯಗಳನ್ನೂ, ಕನ್ನಡ - ತಮಿಳಿನ ಬಾಂಧವ್ಯವನ್ನೂ ಕುರಿತು ಅನೇಕ ಲೇಖನಗಳನ್ನು ಬರೆದರು.

ಹೀಗೆ ಎಲ್. ಗುಂಡಪ್ಪನವರು ಅದ್ವಿತೀಯ ಭಾಷಾಂತರಕಾರರಾಗಿ ರೂಪುಗೊಂಡಿದ್ದು ಕನ್ನಡ ನಾಡಿನ ಸೌಭಾಗ್ಯ ಎನ್ನಬಹುದು.

ಎಲ್. ಗುಂಡಪ್ಪನವರ ಜೀವನ ಹಾಗೂ ಬರೆಹಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗುವ ಒಂದು ಅಂಶ - ಅವರಿಗೆ ದೇವರಲ್ಲಿರುವ ದೃಢಭಕ್ತಿ, ಜೀವನದ ಒಳಿತಿನಲ್ಲಿ ಅಚಲವಾದ ನಂಬಿಕೆ. ಪುತಿನ, ದ.ರಾ.ಬೇಂದ್ರೆ ಮತ್ತಿತರರು ಹೇಳುತ್ತಿದ್ದ ಹಾಗೆ ಅವರು ಸತ್ಪುರುಷರು. ತಾವು ಅಧ್ಯಯನ ಮಾಡಿದ ಮಹಾಗ್ರಂಥಗಳ ಸಾರಸರ್ವಸ್ವವನ್ನು ಜೀರ್ಣಿಸಿಕೊಂಡು ತಮ್ಮ ಜೀವಿತಕಾಲದಲ್ಲಿ ಅಳವಡಿಸಿಕೊಂಡರು. ಅದ್ವೈತ ಅವರಿಗೆ ಕೇವಲ ಅಧ್ಯಯನದ ಪಾಂಡಿತ್ಯದ ವಿಷಯವಾಗದೆ, ಜೀವನಸೂತ್ರವೂ ಆಗಿತ್ತು. ನುಡಿದಂತೆ ನಡೆಯುವ ಅವರ ಸ್ವಭಾವದಿಂದ ಸ್ವತಃ ಅವರಿಗೇ ಅನೇಕ ವೇಳೆ ತೊಂದರೆಗಳು ಎದುರಾದರೂ, ದಿಟ್ಟತನದಿಂದ ಎದುರಿಸಿ ಬಾಳಿದರು. ಸಂಪತ್ತಿಗಿಂತ ನೈತಿಕತೆ, ಆತ್ಮಬಲ ಹೆಚ್ಚಿನದೆಂಬುದನ್ನು ತಮ್ಮ ಮಕ್ಕಳಿಗೂ ತಮ್ಮ ನಡತೆಯಿಂದ ತೋರಿಸಿಕೊಟ್ಟರು.

ಮಹಾತ್ಮಾ ಗಾಂಧಿಯವರಿಂದ ಪ್ರಭಾವಿತರಾದ ಅವರು ತಮ್ಮ ಜೀವನದ ಉದ್ದಕ್ಕೂ ಖಾದಿಯನ್ನೇ ಉಟ್ಟರು, ಸತ್ಯವನ್ನೇ ಹೇಳಿದರು. ಕೆಲಸವನ್ನೇ ದೇವರೆಂದು ನಂಬಿದ್ದರು. ತಮ್ಮ ಕೆಲಸವನ್ನು ತಾವೇ ಎಷ್ಟರ ಮಟ್ಟಿಗೆ ಮಾಡಿಕೊಳ್ಳುತ್ತಿದ್ದರೆಂದರೆ ನೆಂಟರು ಇಷ್ಟರು ಬಂದಾಗಲೂ ಕೂಡ ತಮ್ಮ ಊಟದ ತಟ್ಟೆ ತಾವೇ ತೊಳೆದಿಡುತ್ತಿದ್ದು. ಸರಳತೆಯೇ ಮೈವೆತ್ತಂತಿದ್ದ ಅವರು ತಾವು ಇದ್ದೆಡೆ ಶಾಂತಿ ನೆಲಸುವಂತಹ ವಾತಾವರಣ ಸೃಜಿಸುತ್ತಿದ್ದರು.

ಹಾಸನದಲ್ಲಿ ಕಾಲೇಜಿನ ಅಧ್ಯಾಪಕರಾಗಿದ್ದಾಗ, ಅಲ್ಲಿನ ಚರ್ಚ್‌ನ ಪಾದ್ರಿಯ ಕುಟುಂಬದ ಮಹಿಳೆಗೆ ಕನ್ನಡ ಹೇಳಿಕೊಟ್ಟರು. ಚರ್ಚ್‌ನ ಪ್ರಾರ್ಥನೆಗಳನ್ನು ಕೇಳಿಬಂದರೂ ತಮ್ಮ ದಿನದ ತ್ರಿಕಾಲಸಂಧ್ಯೆ ಬಿಡಲಿಲ್ಲ. ಹಾಲೆಂಡಿನಿಂದ ಬಂದಿದ್ದ ದವ್ರೇಜ ಎಂಬ ವಿದ್ವಾಂಸರಿಗೆ ತಮ್ಮ ಮನೆಯಲ್ಲೇ ಕನ್ನಡ - ತಮಿಳು ಪಾಠ ಹೇಳಿದರು. ದೆಹಲಿಗೆ ಮಗಳ ಮನೆಗೆ ಹೋಗಿದ್ದಾಗ ಗುರು ಗೋವಿಂದ ಸಿಂಗರ ಜಯಂತ್ಯುತ್ಸವ ನೋಡಲು ಗುರುದ್ವಾರಕ್ಕೆ ಹೋಗಿದ್ದರು. ಅಲ್ಲಿಯ ಪ್ರಾರ್ಥನೆಯಲ್ಲಿ

ಭಾಗವಹಿಸಿದಾಗ ಗುರುದ್ವಾರದ ಪೂಜಾರಿಗಳಿಗೆ ಆಶ್ಚರ್ಯ ! ಏಕೆಂದರೆ ಗುಂಡಪ್ಪನವರು ಪಂಜಾಬಿ ಭಾಷೆಯ ಗುರುಗ್ರಂಥಸಾಹಿಬ್ ಪಠಣದ ಸಮಯದಲ್ಲಿ ಮಾಡಬೇಕಾದ ಎಲ್ಲ ವಿಧಿಗಳನ್ನೂ ಎದ್ದು ನಿಲ್ಲುವುದು, ಕಿವಿಮೇಲೆ ಕೈಯಿಟ್ಟು ಧ್ಯಾನಮಾಡುವುದು, ನಮಸ್ಕಾರ ಮಾಡುವುದು - ಚಾಚೂ ತಪ್ಪದೆ ಅನುಸರಿಸಿದರು ! ಅಲ್ಲಿನ ಜಥೇದಾರ್ ಈ ಬಗ್ಗೆ ಅವರನ್ನು ಪ್ರಶ್ನಿಸಿದಾಗ 'ಇದರಲ್ಲೇನಪ್ಪಾ ವಿಶೇಷವಿದೆ ? ಎಲ್ಲ ಮಂತ್ರ ತಂತ್ರಗಳೂ ಒಂದೇ ಅಲ್ಲವೇ ? ನಮ್ಮ ಪೂಜಾ ವಿಧಾನದಲ್ಲೂ ಈ ಎಲ್ಲ ಕರ್ಮಗಳೂ ಇಲ್ಲವೆ ? ನಾನು ಹಾಗೇ ಮಾಡಿದೆ ಅಷ್ಟೆ' ಎಂದರಂತೆ.

ಅಮೇರಿಕದಲ್ಲಿದ್ದಾಗ ಯಹೂದಿಗಳ ಪ್ರಾರ್ಥನಾ ಮಂದಿರವಾದ ಸಿನೆಗಾಗ್‌ಗೂ ಹೋಗಿ ಬಂದರು. ಅಲ್ಲದೆ, ತಮ್ಮ ಅಮೇರಿಕನ್ ಅಳಿಯ ಸಂಜಾತ ಆತ ಮತ್ತು ಮಗಳ ಜೊತೆ ಒಂದು ಐರಿಷ್ ಜನರ ಸಾಂಪ್ರದಾಯಿಕ ಸಮಾರಂಭಕ್ಕೆ ಹಸಿರು ಶಾಲು ಹೊದ್ದು ಹೋಗಿದ್ದರು. ಏಕೆಂದರೆ ಹಸಿರು ಐರಿಷ್ ಜನರಿಗೆ ಪವಿತ್ರವಾದ ಬಣ್ಣ. ಇಡೀ ಸಮುದಾಯ ಇವರನ್ನು ಕಂಡು ತುಂಬಾ ಆನಂದಪಟ್ಟಿತ್ತು.

'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ವಾಕ್ಯವನ್ನು ಅಕ್ಷರಶಃ ಪಾಲಿಸಿದ ಗುಂಡಪ್ಪನವರು, ಕನ್ನಡನಾಡು ಕಂಡ ಒಬ್ಬ ಅತಿ ವಿರಳರಾದ ಮಹಾನುಭಾವರು. ಅವರ ಈ ವ್ಯಕ್ತಿತ್ವವನ್ನು ಅವರ ಸಮಕಾಲಿನರಲ್ಲೆ ಬಲ್ಲವರು ಬಹಳವಾಗಿಲ್ಲ.

ಕಟ್ಟಿಗೆಯ ಬಲು ಕಡೆಯೆ ಬೆಂಕಿ ಹುಟ್ಟುವುದು
ಗಟ್ಟಿನೆಲವನು ಬಗೆಯೆ ನೀರು ಸಿಕ್ಕುವುದು
ಕೆಚ್ಚೆದೆಯ ಸಾಹಸವ ಪಡೆದ ಮಾನವಗೆ
ಹೆಚ್ಚೇನು ? ಅಸಾಧ್ಯವೇನಿಲ್ಲ ಜಗದೊಳಗೆ -
ಹಿಡಿದ ಕೆಲಸವನೆಲ್ಲ ಸನ್ಮಾರ್ಗದಲ್ಲಿ
ಬಿಡದೆ ಮಾಡಲು ಬಹುದು ಫಲವು ಫಲವು ಕಡೆಯಲ್ಲಿ

ಭಾಸನ ಪ್ರತಿಜ್ಞಾ ಯೌಗಂಧರಾಯಣದ ಈ ಕವನ ಎಲ್. ಗುಂಡಪ್ಪನವರ ಜೀವನ - ಸಾಧನೆಗಳನ್ನು ಅಚ್ಚುಕಟ್ಟಾಗಿ ಪ್ರತಿಬಿಂಬಿಸುತ್ತದೆ.

ಗುಂಡಪ್ಪನವರಿಗೆ ಸಂದ ಸಂಭಾವನೆ, ಗೌರವಗಳು

1. ಆಧುನಿಕ ಕನ್ನಡ ಕವಿತಾ ರಚನೆಗಾಗಿ ಮೈಸೂರು ವಿಶ್ವವಿದ್ಯಾನಿಲಯ 1930ರಲ್ಲಿ 'ಸಿಲ್ವರ್ ಜೂಬಿಲಿ ಕನ್ನಡ ಸ್ವರ್ಣಪದಕ'ವನ್ನು ನೀಡಿದೆ.

2. ತಿರುಕ್ಕುಅಳ್ ಮೊದಲಾದ ತಮಿಳುಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವುದರ ಮೂಲಕ ತಮಿಳು - ಕನ್ನಡ ಬಾಂಧವ್ಯ ಸಾಧನೆಗಾಗಿ ದುಡಿಯುವುದನ್ನು ಮೆಚ್ಚಿದ ತಮಿಳು ಸಾಹಿತಿಗಳು 1958ರಲ್ಲಿ ನಾಗರ್‌ಕೋಯಿಲಿನಲ್ಲಿ ಸೇರಿದ 'ತಮಿಳು ಲೇಖಕರ ಸಮ್ಮೇಳನ'ದಲ್ಲಿ ಬಂಗಾರದ ಪದಕ ಕೊಟ್ಟು ಗೌರವಿಸಿದರು. ಬೆಂಗಳೂರಿನ ಮತ್ತು ಪರಸ್ಥಳಗಳಲ್ಲಿನ ಹಲವು ತಮಿಳು ಸಂಘಗಳು ಶಾಲು ಬಿನ್ನವತ್ತಳೆಗಳನ್ನು ನೀಡಿ ಗೌರವಿಸಿವೆ.

3. ಗಾಂಧೀ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಕೊಂಡು ನಿಷ್ಠೆಯಿಂದ ನಡೆಸುತ್ತಿರುವ ಗಾಂಧೀ ಮಾರ್ಗಾನುಯಾಯಿ ಎಂದೂ, ಸತತ ಖಾದೀಧಾರಿ ಎಂದೂ, ಗಾಂಧೀ ಶತಮಾನೋತ್ಸವ ಸಮಿತಿಯವರು 'ಬಂಗಾರದ ಪದಕ ಕೊಟ್ಟು ಗೌರವಿಸಿದ್ದಾರೆ.

4. ಚನ್ನರಾಯಪಟ್ಟಣದಲ್ಲಿ ನಡೆದ ಹಾಸನ ಡಿಸ್ಟ್ರಿಕ್ಟಿನ ಸಾಹಿತ್ಯ ಸಮ್ಮೇಳನದಲ್ಲಿ ಆ ಡಿಸ್ಟ್ರಿಕ್ಟಿನ ವಿದ್ವತ್ಸಾಹಿತಿಯೆಂದು ಮನ್ನಣೆ ಮಾಡಿದ್ದಾರೆ.

5. ಗುಂಡಪ್ಪನವರ ಸಾಹಿತ್ಯ ಸೇವೆಯನ್ನು ಗಮನಿಸಿ ಕರ್ಣಾಟಕ ಸರ್ಕಾರದವರು 1974ನೇ ನವೆಂಬರ್ ತಿಂಗಳಿಂದ ಆಜೀವ ಪರ್ಯಂತ ಮಾಸಾಶನ ನೀಡಿದರು.

6. ಕರ್ನಾಟಕ ರಾಜ್ಯ ಅಕಾಡೆಮಿಯು 1975ರಲ್ಲಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು.

ಗುಂಡಪ್ಪನವರ ಮಕ್ಕಳು

1. ಎಲ್. ಜಿ. ಸುಮಿತ್ರಾ ಎಂ.ಎಸ್‌ಸಿ. (ಗಣಿತ)
ಆಕಾಶವಾಣಿಯಲ್ಲಿ ಡೈರೆಕ್ಟರ್ ಆಗಿದ್ದು ಎನ್‌ಸಿಇಆರ್‌ಟಿಯಲ್ಲಿ ಪ್ರೊಫೆಸರ್ ಆಗಿ ನಿವೃತ್ತಿ
'ಜಾನಪದ ಸಂಗೀತ' ದಲ್ಲಿ ಡಾಕ್ಟರೇಟ್

2. ವಿಮಲಾ ರಾಜ್‌ಗೋಪಾಲ್ ಎಂ.ಎ. (ಇಂಗ್ಲಿಷ್ ಸಾಹಿತ್ಯ)
ಆಕಾಶವಾಣಿಯಲ್ಲಿ ಅಧಿಕಾರಿಯಾಗಿದ್ದು, ವಿವಾಹಾನಂತರ ಅಮೇರಿಕಾದಲ್ಲಿ ನೆಲೆಸಿದ್ದಾರೆ. ಫಿಲಿಡೆಲ್ಫಿಯಾದ ಎಲ್ವಿನ್ ಇನ್‌ಸ್ಟಿಟ್ಯೂಟ್ ಫಾರ್ ದಿ ಮೆಂಟಲಿ ಚಾಲೆಂಜ್ಡ್ ಸಂಸ್ಥೆಯಲ್ಲಿ ಮ್ಯೂಸಿಕ್ ತೆರಪಿಸ್ಟ್.
ಯೂನಿವರ್ಸಿಟಿ ಆಫ್ ಫಿಲೆಡೆಲ್ಫಿಯಾದಲ್ಲಿ ಕನ್ನಡ ಉಪನ್ಯಾಸಕಿ

3. ಕಮಲಾ ಎ. ಎಸ್. ಬಾಲು ಎಂ.ಎಸ್‌ಸಿ (ಗಣಿತ)
ಆಕಾಶವಾಣಿ (ದೆಹಲಿ) ಯಲ್ಲಿ ವಾರ್ತಾ ವಾಚಕಿ. ನಂತರ ಬೆಂಗಳೂರಿನಲ್ಲಿ ಉದ್ಘೋಷಕಿ
ಅಖಿಲ ಕರ್ನಾಟಕ ಲೇಖಕಿಯರ ಸಂಘದ ಉಪಾಧ್ಯಕ್ಷೆ

4. ಎಲ್.ಜಿ. ಅಮೃತೇಶ್ವರ ಬಿ.ಎಸ್.ಸಿ.
ಎಚ್.ಎ.ಎಲ್. ಹೆಲಿಕಾಪ್ಟರ್ ವಿಭಾಗದಲ್ಲಿ ಉದ್ಯೋಗಿ. ಮಕ್ಕಳಿಗಾಗಿ ಸಣ್ಣ ಕಥೆಗಳ ರಚನಕಾರ.

5. ವೀಣಾ ಎ. ರಘುರಾವ್ ಎಂ.ಎಸ್‌ಸಿ (ನ್ಯೂಟ್ರಾಷನ್)
ನಾಗಪುರದ ಮಹಿಳಾ ಕಾಲೇಜ್‌ನಲ್ಲಿ ಅಧ್ಯಾಪಕಿಯಾಗಿದ್ದರು. ಈಗ ವಾರ್ತಾ ಪತ್ರಿಕೆಗಳ ನೆರವಿನಿಂದ ಶಾಲಾ ಮಕ್ಕಳಿಗೆ ವಿದ್ಯಾಭ್ಯಾಸ ಕ್ರಮ ತಿಳಿಸಿಕೊಡುತ್ತಿರುವ ತಜ್ಞೆ

6. ಡಾ|| ವಾಸಂತಿ ಕಲೆಟನ್ ಬಿ.ಎಸ್‌ಸಿ. ಎಂ.ಎಸ್. ಮತ್ತು ಸೆಲ್ ಬಯಾಲಜಿಯಲ್ಲಿ ಡಾಕ್ಟರೇಟ್. ಅಮೇರಿಕಾದ ಸುಪ್ರಸಿದ್ಧ ಔಷಧ ಕಂಪನಿಯಲ್ಲಿ ಉದ್ಯೋಗ

7. ಎಲ್. ಜಿ. ಜ್ಯೋತೀಶ್ವರ ಎಮ್. ಎಸ್.ಸಿ (ಸೋಷಿಯಾಲಜಿ) ಒಳ್ಳೆಯ ನಿರೂಪಕ, ತನ್ನದೇ ಸ್ವಂತ ಮಾಧ್ಯಮ ಅನುವಾದ ಸಂಸ್ಥೆ ಹೊಂದಿದ್ದಾನೆ.

ಎಲ್. ಗುಂಡಪ್ಪನವರ ಸಮಗ್ರ ಬರಹ ಪಟ್ಟಿ

ಪದ್ಯಗಳು, ಪ್ರಬಂಧಗಳು - ರೂಪಕ, ಭಾಷಣ ಇತ್ಯಾದಿ

1. ಚಟಾಕಿ ಮತ್ತು ಇತರ ಕವನಗಳು (ಸಣ್ಣ ಪುಸ್ತಕವಾಗಿ ಅಲ್ಲದೆ ಕಿರಿಯರ ಕಾಣಿಕೆಯಲ್ಲಿ ಅನೇಕ ಸಂಕಲನಗಳಲ್ಲಿ ಪ್ರಕಟಿತ)

   ನವಚೇತನ, ದೂರು, ವಿಧವೆ, ದೋರಸಮುದ್ರ, ಮಲೆನಾಡ ಹುಡುಗಿ, ದೇವನ ಹರಿಕಾರರು, ಹೊನ್ನಹೂಗಳು, ಕಳೆದ ದಿನಗಳ ಬೆಳಕು, ಶ್ರೀರಂಗಪಟ್ಟಣ, ಗೆಳೆಯನೆ, ಬೆನಕನ ಪೂಜೆ, ಯಾವುದು ಹಿರಿಮೆ, ತಾಯಿ, ಚಟಾಕಿ, ಸಾಧ್ಯ ಎಂಬುದಿಲ್ಲ, ಮುಂದುಗಾಣಿಕೆ, ಅಕ್ಕ, ವಿಲಿಯಂ ಟೆಲ್.

2. ಕನ್ನಡ ಸೇವೆ : (ಭಾಷೆ, ಭಾಷಾಂತರ ಕಲೆ, ಜಾನಪದಗಳನ್ನು ಕುರಿತಾದ ಪ್ರಬಂಧಗಳು)

   ಕನ್ನಡ, ತಮಿಳು, ಕನ್ನಡಕ್ಕೆ ತಮಿಳಿನಿಂದ ಎರವಲು ಮತ್ತು ಪ್ರಭಾವ, ಉಳಿಸಿಕೊಳ್ಳಬೇಕಾದ ಕೆಲವು ಮಾತುಗಳು - ಕೊ-ಕೋಡು, ನಾಡಬಯಲಿನಲ್ಲಿ ಗೌರೀಶಿಖರ, ಲಾವಣಿ ಅಥವಾ ವೀರಕಥೆ, ಮಲೆಯಾರ.

3. ತಮಿಳು ಪುರಾತನ ಕಥೆಗಳು ಮತ್ತು ಹರಿಹರನ ರಗಳೆ : (ತುಲನಾತ್ಮಕ ಲೇಖನ)

4. ಸರ್ವಜ್ಞ ಮತ್ತು ತಿರುವಳ್ಳುವರ್ : (ಲೇಖನ)

5. ಕನ್ನಡ ಸಾಹಿತ್ಯ ಚಿತ್ರಗಳು : (ಮೊದಲ ಸಾಲು)

   ವಿದ್ಯುಚ್ಚೋರ, ಭರತ ಬಾಹುಬಲಿ, ಕಣ್ಣಪ್ಪ, ಕಿನ್ನರ ಬೊಮ್ಮಯ್ಯ, ಉತ್ತರ ಕುಮಾರ, ನಿಶ್ಶಂಕೆಯ ಕತೆ (ಲಲಿತಾಂಗ, ವಿಶ್ವಾನುಲೋಮ), ತಾಂಡವಮುನಿ, ಕೋಳೂರು ಕೊಡುಗೂಸು.

6. ಕನ್ನಡ ಸಾಹಿತ್ಯ ಚಿತ್ರಗಳು (ಎರಡನೆಯ ಸಾಲು)

7. ಕನ್ನಡ ಸಾಹಿತ್ಯ ಚಿತ್ರಗಳು (ಮೂರನೆಯ ಸಾಲು - ಭಾರತದ ನಾಯಕ ಮಣಿಗಳು)

ಕರ್ಣ ರಸಾಯನ, ಸಾಹಸ ಭೀಮ, ಅಭಿಮಾನ ಧನ, ಪಾರ್ಥ ಪೌರುಷ, ಪ್ರತಿಜ್ಞಾ ಗಾಂಗೇಯ, ಧರ್ಮರಾಜ.

8. ನಾಟಕಗಾರ್ತಿಯರು : ಶಿಲಪ್ಪದಿಗಾರಂನಲ್ಲಿ ಮಾಧವಿ
9. ಯುದ್ಧ ಸಿದ್ಧತೆ ಮತ್ತು ವ್ಯೂಹ ರಚನೆ (ಲೇಖನ)
10. ಕವಿವಾಣಿ
    (ಕವಿ ಮಹಿಮೆ - 12 ಪ್ರಸಂಗಗಳು)
11. ಮುಕುಂದ ಮಾಲಾ (ಗದ್ಯ ಪದ್ಯ ಭಾಷಾಂತರ)
12. ಅವ್ವೈಯಾರ್ ಇತ್ಯಾದಿ ಪ್ರಬಂಧಗಳು
13. ಭಾಸನ ಕರ್ಣ
14. ಅವ್ವೈಯಾರ್ ಕೃತಿಗಳು

ಇತರ ರಚನೆಗಳು

1. ನಿಘಂಟು (ಶ್ರೀ ಚಾಮುಂಡಾ ನಿಘಂಟು)
2. ರಾಷ್ಟ್ರೀಯ ಕವಿಸಮ್ಮೇಳನಕ್ಕಾಗಿ ಅನುವಾದಿಸಿದ ಕವನಗಳು (ಭಾರತದ ಭಾಷೆಯ ಕವಿಗಳಿಂದ)
3. ಕನ್ನಡ ಭಾರತ ಮಂಜರಿ

ತಮಿಳಿನಿಂದ ಭಾಷಾಂತರ ಕೃತಿಗಳು

1. ಪೆರಿಯ ಪುರಾಣಂ
2. ಸುಬ್ರಹ್ಮಣ್ಯ ಭಾರತಿಯವರ ಪ್ರಬಂಧಗಳು
3. ರಾಷ್ಟ್ರಭಕ್ತ ಕವಿ ಭಾರತಿ
4. ಭಾರತಿಯವರ ಕವಿತೆಗಳು
5. ತಮಿಳು ಸಾಹಿತ್ಯ ಚರಿತ್ರೆ
6. ಅವ್ವೈಯಾರ್
7. ನನ್ನ ಚರಿತ್ರೆ
8. ತಿರುಕ್ಕುರಳ್
9. ನಾಲ್ಮಣಿ ಕುರುಡು
10. ವ್ಯಾಸರ ಔತಣ
11. ತಿರುವಾಚಕಂ

12. ವಳ್ಳಿಕೊಂಡಪುರಂ
13. ಶಿಲಪ್ಪದಿಗಾರಂ
14. ಪೆರುಂಗತ್ತೈ (ಉದಯನನ ಚರಿತ್ರೆ)
15. ರಾಜವೈದ್ಯ (ಸ್ವಾಮಿನಾಥ ಅಯ್ಯರ್ ಅವರ ಕತೆಯ ಅನುವಾದ)
16. ದೇವಾನೆ (ರಾಜಾಜಿಯವರ ಕತೆ)
17. ಕಾಗಕ್ಕ (ಕೆ.ನಾ. ಜಗನ್ನಾಥನ್ ಅವರ ಕತೆ)
18. ತಮಿಳು ಬಾಷಾಬಾಂಧವ್ಯ
19. ಅತ್ತಿಶೂಡಿ
20. ಕೊನ್ರೈನೇಂದನ್
21. ಮುದುರೈ- ಹಳೆಯ ಮಾತು
22. ನಲ್ವಳಿ
23. ತಿರುವಾರೂರ ಹಿರಿಮೆ

ಇಂಗ್ಲಿಷಿನಿಂದ ಅನುವಾದಿತ ಪ್ರಕಟಿತ

1. ಟಾಲ್‌ಸ್ಟಾಯ್ ಅವರ ಕತೆಗಳು
2. ಸೊಹ್ರಾಬ್ ಮತ್ತು ರುಸ್ತುಂ (ನೀಳ್ಗವನ)
3. ಥಾಮಸ್ ಆಲ್ವ ಎಡಿಸನ್
4. ಫ್ಲಾರೆನ್ಸ್ ನೈಟಿಂಗೇಲ್
5. ನರರಾಕ್ಷಸ (ಡಾ. ಜೆಕಿಲ್ ಎಂಡ್ ಮಿ. ಹೈಡ್ - ರಾಬರ್ಟ್ ಲೂಯಿ ಸ್ಟೀವನ್ಸನ್)
6. ಫ್ಯಾಮಿಲಿ ಹಾಪಿನೆಸ್ (ಲಿಯೊ ಟಾಲ್‌ಸ್ಟಾಯ್)
7. ನಗೆ ಹೊಗೆ (ಅಡ್ವೆನ್ಚರ್ ಇನ್ ಬುಖಾರ್)
8. ಕಳ್ಳುಮರಿ, ನಮಗೆಷ್ಟು ಭೂಮಿ ಬೇಕು, ಇಬ್ಬರು ಯಾತ್ರಿಕರು (ಬಿಡಿ ಕತೆಗಳಾಗಿ ಪ್ರಕಟವಾಗಿವೆ)

ಹಸ್ತಪ್ರತಿಗಳು

1. ಬುಡ್ಡಿಯ ಭೂತ (ದಿ ಬಾಟಲ್ ಇಂಪ್)
2. ಕ್ರೂಟ್ಸರ್ ಸೊನಾಟ (ಟಾಲ್‌ಸ್ಟಾಯ್ ಅವರ ಕತೆಯ ಭಾಷಾಂತರ)
3. ನರಕದ ನಾಶ ಮತ್ತು ಪುನರುದ್ಧಾರ (ಟಾಲ್‌ಸ್ಟಾಯ್ ಅವರ ಕತೆಯ ಭಾಷಾಂತರ)
4. ವಸಂತದ ಆದಿಕಾಲ ಎಂದು ಪ್ರಾರಂಭವಾಗುವ ಕಾದಂಬರಿಗಳು

ಸಂಪಾದಿತ ಗ್ರಂಥಗಳು

1. ಆದಿಪುರಾಣ ಸಂಗ್ರಹ
2. ನಾಡ ಪದಗಳು
3. ನಳ ಚರಿತ್ರೆ
4. ಶ್ರೀ ಭಗವಚ್ಚರಿತ್ರೆ
5. ಶ್ರೀ ಜ್ಯೋತಿರ್ಲಿಂಗ ಸ್ವಾಮಿಗಳ ಜೀವನ ಚರಿತ್ರೆ
6. ಶ್ರೀಮದಭಿನವ ವಿದ್ಯಾತೀರ್ಥ ವಿಜಯಂ
7. ಇಂಗ್ಲಿಷ್ - ಕನ್ನಡ ಮತ್ತು ಕನ್ನಡ - ಕನ್ನಡ ನಿಘಂಟುಗಳಲ್ಲಿ
8. .... ರಾಮಾಯಣ

ಸಂಸ್ಕೃತದಿಂದ ಭಾಷಾಂತರಿಸಿದ ಕೃತಿಗಳು

1. ಭಾಸನ ಏಕಾಂತ ನಾಟಕಗಳು
2. ಚಾರುದತ್ತ
3. ಪ್ರತಿಜ್ಞಾ ಯೌಗಂಧಾರಾಯಣ
4. ಸ್ವಪ್ನವಾಸವದತ್ತ
5. ಪಂಚರಾತ್ರ


ಹಸ್ತಪ್ರತಿಗಳು


1. ಗೀತಗೋವಿಂದ
2. ಕಣ್ಣಗಿ (ರೂಪಕ)
3. ಸೋಸಿ ಮಾತಾಡು
4. ಠಾಕೂರರ ಬಾಳಿನಲ್ಲಿ
5. ಶಿಲಪ್ಪದಿಗಾರಂ (ಒಂದು ಪರಿಚಯ)
6. ಮುಕುಂದಮಾಲಾ (ಗದ್ಯ ಪದ್ಯ ಭಾಷಾಂತರ)
7. ಲೋಕನೀತಿ ಮತ್ತು ಇತರ ಕಲೆವು ನೀತಿ ಪದ್ಯಗಳು
8. ಚಿಂತನಗಳು - ಆಕಾಶವಾಣಿಯಲ್ಲಿ ಪ್ರಸಾರಿತ


ಹೊಯ್ಸಳ ಮಾಲೆ - ಮೊದಲ ೯ ಪುಸ್ತಕಗಳು


9 ಪುಸ್ತಕಗಳ
ಬೆಲೆ : ರೂ. 200/-























ಪುಸ್ತಕಗಳು ದೊರೆಯುವ ಸ್ಥಳ

1. **ಹೊಯ್ಸಳ ಕರ್ನಾಟಕ ಸಂಘ (ರಿ.)**
   3ನೇ ಅಡ್ಡ ರಸ್ತೆ, ಹೊಂಬೇಗೌಡನಗರ,
   ಬೆಂಗಳೂರು-560 027
   ಫೋನ್: 080-2227 4411

2. **ಹೊಯ್ಸಳ ಕರ್ನಾಟಕ ಸಂಘ (ರಿ.)**
   888, ನಾರಾಯಣಶಾಸ್ತ್ರಿ ರಸ್ತೆ,
   ಲಕ್ಷ್ಮಿಪುರಂ, ಮೈಸೂರು-570 008.
   ಫೋನ್: 0821-2330995

3. **ಹೊಯ್ಸಳ ಕರ್ನಾಟಕ ಸಂಘ (ರಿ.)**
   309, ಎಲ್.ಐ.ಜಿ. 21ನೇ ಅಡ್ಡ ರಸ್ತೆ,
   ಕುವೆಂಪುನಗರ, ಹಾಸನ-573 201
   ಫೋನ್: 08172-268848

4. **ಜ್ವಾಲಾಮುಖಿ ಪ್ರೆಸ್**
   44/1, ಕೆ.ಆರ್. ರಸ್ತೆ,
   ಬಸವನಗುಡಿ, ಬೆಂಗಳೂರು-560 004
   ಫೋನ್: 080-26617243 / 2660 1064



ಹೊಯ್ಸಳ ಮಾಲೆ

ಹೊಯ್ಸಳ ಕರ್ನಾಟಕ ಜನಾಂಗವು ಸ್ಮಾರ್ತಬ್ರಾಹ್ಮಣ ಸಂಪ್ರದಾಯದ ಒಂದು ಪುಟ್ಟ ಪಂಗಡ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಮೈಸೂರು, ಮಂಡ್ಯ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಇವರ ಇರುವು. ವಿಜಯನಗರದ ಕಾಲದಲ್ಲಿ ಕೆಲವು ಕುಟುಂಬಗಳು ತಮಿಳುನಾಡಿನ ತಂಜಾವೂರು ಪ್ರದೇಶಕ್ಕೆ ತೆರಳಿ, ಇಂದಿಗೂ ಕೆಲವು ಕುಟುಂಬಗಳು ಅಲ್ಲಿಯೇ ನೆಲೆಸಿವೆ. ಸಮಾಜದ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಜನ ಇಂದು ವಿಶ್ವದ ನಾನಾ ಭಾಗಗಳಲ್ಲಿದ್ದಾರೆ.

ನಮ್ಮ ಪಂಗಡ ಪುಟ್ಟದಾದರೂ ನಮ್ಮ ಅನೇಕ ಜನರು ಪ್ರಖ್ಯಾತರಾಗಿ ಸಮಾಜಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿ ಕೀರ್ತಿಶಾಲಿಗಳಾಗಿದ್ದಾರೆ. ಜನತೆಯ ವಿಶ್ವಾಸ, ಗೌರವ ಮನ್ನಣೆಗೆ ಪಾತ್ರರಾಗಿರುವ ಅನೇಕರೂ, ಉದಯೋನ್ಮುಖ ಪ್ರತಿಭಾವಂತರೂ ಇಂದು ನಮ್ಮೊಡನೆಯೇ ಇದ್ದಾರೆ.

ಈ ಎಲ್ಲಾ ಪ್ರತಿಭಾಸಂಪನ್ನರನ್ನು ನಮ್ಮ ಇಂದಿನ ಪೀಳಿಗೆಗೂ, ಸಮಾಜಕ್ಕೂ, ಪರಿಚಯಿಸಿ, ಪ್ರಚರಿಸಿ, ದಾಖಲಿಸುವ ಸದುದ್ದೇಶದಿಂದ ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘವು ಈ ಹೊಯ್ಸಳ ಮಾಲೆಯ ಪ್ರಕಟಣಾ ಕಾರ್ಯವನ್ನು ಕೈಗೊಂಡಿದೆ.

ಹೊಯ್ಸಳ ಕರ್ನಾಟಕ ಸಂಘ (ರಿ)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027
ಫೋನ್ : +91-80-2227 4411